ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಬಾಪು ಪ್ರಪಂಚ

BAPU PRAPANCHA

ಕನ್ನಡ - English Monthly

ಸಂಪುಟ – 2 : ಸಂಚಿಕೆ – 10 ಜನವರಿ 2021 ಪುಟ – 32 ₹ 20/-





ಸರ್ವೋದಯ ದಿನ : ಮಹತ್ವ ಮತ್ತು ಸತ್ಯಗಳು

ಪ್ರತಿ ವರ್ಷ ಜನವರಿ 30ನ್ನು ದೇಶದಾದ್ಯಂತ "ಸರ್ವೋದಯ ದಿನ" ಅಥವಾ "ಷಹೀದ್ ದಿವಸ್" ಆಗಿ ಆಚರಿಸಲಾಗುತ್ತಿದೆ. ಹುತಾತ್ಮರ ದಿನವನ್ನು ಆಚರಿಸುವ ವಿಶ್ವದ 15 ರಾಷ್ಟ್ರಗಳಲ್ಲಿ ಭಾರತವೂ ಒಂದಾಗಿದೆ. ಭಾರತದಲ್ಲಿ ಆರು ದಿನಗಳನ್ನು ಹುತಾತ್ಮರ ದಿನವೆಂದು ಘೋಷಿಸಲಾಗಿದೆ. ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಬಲಿದಾನಗೈದವರನ್ನು ಸ್ಮರಿಸುವ ಗೌರವ ಸಲ್ಲಿಸುವ ಸಲುವಾಗಿ ಮಹಾತ್ಮ ಗಾಂಧಿ ಅವರುನಿಧನರಾದ ದಿನ, ಜನವರಿ 30, 1948ನ್ನು ಹುತಾತ್ಮರ ದಿನವನ್ನಾಗಿ ಆಚರಿಸಲಾಗುತ್ತಿದೆ. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೇಶದಾದ್ಯಂತ ಚಳವಳಿಯನ್ನು ರೂಪಿಸಿ ಜನರನ್ನು ವಿಮೋಚನಾ ಹೋರಾಟದಲ್ಲಿ ಭಾಗವಹಿಸಲು ಬಾಪೂಜಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಮಹಾತ್ಮ ಗಾಂಧಿ ಅವರು ಸತ್ಯ, ಅಹಿಂಸೆಯೇ ಮಾನವೀಯತೆಯ ಮಾರ್ಗವೆಂದು ಪರಿಗಣಿಸಿದ್ದರು. ಹಾಗೂ ಅಹಿಂಸೆಯೇ ಸ್ವಾತಂತ್ರ್ಯ ಪಡೆಯಲು ಅತ್ಯಂತ ಪ್ರಬಲ ಅಸ್ತ್ರವೆಂದು ನಂಬಿದ್ದರು. ಆದ್ದರಿಂದ ಹುತಾತ್ಮರ ದಿನದಂದು ದೇಶದ ಮುಖ್ಯಸ್ಥರು ರಾಜ್‌ಘಾಟ್ ಬಳಿ ಸೇರಿ ಸ್ಮಾರಕಕ್ಕೆ ನಮನ ಸಲ್ಲಿಸುತ್ತಾರೆ. ದೇಶದ ಜನರು, ಸಂಘ ಸಂಸ್ಥೆಗಳು, ಗಣ್ಯರು, ನೇತಾರರು, ಸ್ವಾತಂತ್ರ್ಯ ಹೋರಾಟಗಾರರು, ಗಾಂಧಿ ಅನುಯಾಯಿಗಳು, ದೇಶಪ್ರೇಮಿಗಳು ಪ್ರಾರ್ಥನೆಗಳೊಂದಿಗೆ ಭಾರತೀಯ ಹುತಾತ್ಮರು ಮತ್ತು ಮಹಾತ್ಮ ಗಾಂಧಿ ಅವರಿಗೆ ಗೌರವಗಳನ್ನು ಸಲ್ಲಿಸುತ್ತಾರೆ. ಮಹಾತ್ಮ ಗಾಂಧೀಜಿ ಅವರ ನಮನಕ್ಕಾಗಿ ಗೂಗಲ್, ಪೋಸ್ಟ್ ಕಾರ್ಡ್‌ಗಳ ಆನ್‌ಲೈನ್ ಪ್ರದರ್ಶನವನ್ನು ಆರಂಭಿಸಿದೆ. ಇನ್ನೂ ಕೆಲವು ದಿನಗಳನ್ನು ಹುತಾತ್ಮರ ದಿನವಾಗಿ ಆಚರಿಸಲಾಗುತ್ತಿದೆ. ಮಾರ್ಚ್ 23ರಂದು ಭಗತ್‌ಸಿಂಗ್, ಶಿವರಾಮ್ ರಾಜಗುರು ಮತ್ತು ಸುಖದೇವ್ ಥಾಪರ್ ಅವರನ್ನು ನೇಣುಗಂಬಕ್ಕೆ ಏರಿಸಿದ ದಿನ, ನವೆಂಬರ್ 17 ಓರಿಸ್ಸಾದಲ್ಲಿ ಲಾಲಾ ಲಜಪತ್ ರಾಯ್ ಅವರ ಪುಣ್ಯತಿಥಿ, ನವೆಂಬರ್ 19 ಝಾನ್ಸಿ ರಾಣಿ ಲಕ್ಷ್ಮೀಬಾಯಿ ಜಯಂತಿಯ ನೆನಪಿಗಾಗಿ ಷಹೀದ್ ದಿವಸ್‌ವನ್ನಾಗಿ ಆಚರಿಸಲಾಗುತ್ತದೆ.

ಶ್ರೀ ಸಾಮಾನ್ಯರ ದೀಕ್ಷಾಗೀತೆ

– ಕುವೆಂಪು

ಕೊನೆಗೊಂಡಿತೊ ಓರೋರ್ವರ
ಗರ್ವದ ಕಾಲ
ಇದು ಸರ್ವರ ಕಾಲ ಸರ್ವೋದಯ
ಸರ್ವೋದಯ
ಸರ್ವೋದಯ ಯುಗ ಮಂತ್ರ
ಸರ್ವೋದಯವೆ ಸ್ವಾತಂತ್ರ್ಯದ
ಶ್ರೀತಂತ್ರ
ಮೇಲಿಲ್ಲವೋ ಕೀಳಿಲ್ಲವೋ
ಸರ್ವಸಮಾನದ ರಾಜ್ಯ
ಅಧ್ಯಕ್ಷನೋ ಸೇನಾನಿಯೋ
ಕಮ್ಮಾರನೋ ಚಮ್ಮಾರನೋ
ಕಾಯಕವೆಲ್ಲವು ಪೂಜ್ಯ

ಕೈಗಾರನೊ ಕಲೆಗಾರನೊ
ಇಬ್ಬರಿಗೂ ಸಮಭೋಜ್ಯ
ಇನಿಲ್ಲವೂ ಅಹಮಹಮಿಕೆ
ತರತಮಗಳ ವ್ಯಾಜ್ಯ
ಉಣಿಸಿಗೆ ಮೇಣ್
ಉಡುಪಿಗೆ ಮೇಣ್
ಆರಾಗಲಿ ಆರಡಿಯಿನ್
ಹಿಡಿಯುವುದಿನ್ ತ್ಯಾಜ್ಯ
ಲೌಕಿಕದೊಳ್ ಲೌಕಿಕರಿಗೆ
ಆರಾಗಲಿ ಆರಡಿಯೊಳ್
ಹೊರಲವುದಿನ್ ತ್ಯಾಜ್ಯ
ಇದು ಲೌಕಿಕ ರಾಜ್ಯ







ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ - ಇಂಗ್ಲಿಷ್ ಮಾಸಪತ್ರಿಕೆ

BAPU PRAPANCHA

(A Monthly Kannada - English Magazine of Gandhian Thoughts)

ಪ್ರಧಾನ ಸಂಪಾದಕರು :

ನಾಡೋಜ ಡಾ.ವೂಡೇ ಪಿ. ಕೃಷ್ಣ

Chief Editor :

Nadoja Dr. Wooday P. Krishna

ಸಂಪಾದಕರು : ಇಂದಿರಾ ಕೃಷ್ಣಪ್ಪ

Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ

Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ

ಕುಮಾರ ಪಾರ್ಕ್ ಪೂರ್ವ, ಬೆಂಗಳೂರು-560001

Published by :

Karnataka Gandhi Smaraka Nidhi

Gandhi Bhavana, Kumarapark East

Bengaluru - 560001

Phone : +91 80 22261967, 9738605799

gandhibhavanabengaluru@gmail.com

Design & Print : **CreativeGeekZ**

Yadhava College Road, Madhavanagara

Bengaluru - 560001

Ph : +91 80 40927049

E-mail : mail@creativegeekz.com

ಈ ಸಂಚಿಕೆಯಲ್ಲಿ

ಸಂಪಾದಕೀಯ



ಇಂದಿರಾ ಕೃಷ್ಣಪ್ಪ

ಎಲ್ಲರಿಗೂ ನಮಸ್ಕಾರಗಳು ಹಾಗೂ ಹೊಸ ವರ್ಷದ ಶುಭಾಶಯಗಳು

ಬಹು ನಿರೀಕ್ಷೆ, ಆಶಯಗಳನ್ನು ಹೊತ್ತು ಜನರು 2021ನೇ ಹೊಸ ವರ್ಷವನ್ನು ಸ್ವಾಗತಿಸಿದ್ದಾರೆ. ಕರೋನಾ ಮುಕ್ತ ಭಾರತ ಆಗುತ್ತದೆ. ಕರೋನಾ ಲಸಿಕೆ ಮನೆಮನೆಗೆ ಬರುತ್ತದೆ. ಅನ್ನ ಕೊಡುವ ರೈತನ ಮೇಲೆ ಹೇರಿರುವ ಸುಗ್ರೀವಾಜ್ಞೆ ರದ್ದುಗೊಳ್ಳುತ್ತದೆ. ದೇಶದ ಆರ್ಥಿಕ ಸ್ಥಿತಿ ಉತಮಗೊಳ್ಳುತ್ತದೆ. ಕಾರ್ಮಿಕರು, ಕೂಲಿಕಾರರು, ರೈತರು, ದಲಿತರು, ಅಸಂಘಟಿತ ವಲಯದವರಿಗೆ ಜೀವನ ನಿರ್ವಹಣೆಗೆ, ಕೂಲಿ ಕೆಲಸವಾದರೂ ದೊರಕುತದೆ ಎಂಬ ಭರವಸೆಯನ್ನು ಹೊಂದಿದ್ದಾರೆ.

ಜನರ ನಿರೀಕ್ಷೆಯಂತೆ, ಕೊವ್ಯಾಕ್ಸಿನ್, ಕೋವಿಶೀಲ್ಡ್‌ಗಳು ಬೃಹತ್ ಪ್ರಜಾರಾಂದೋಲನದ ಮುಖಾಂತರ ಹೊರಬಿದ್ದಿದೆ. ಯಾವುದೇ ರಾಜಕೀಯ ತಂತ್ರಗಾರಿಕೆ ಇಲ್ಲದೆ, ದೇಶದ ಪ್ರತಿಯೊಬ್ಬ ಪ್ರಜೆಗೂ ಕೋವಿಡ್ ಲಸಿಕೆ ಉಚಿತವಾಗಿ, ಸುಲಭವಾಗಿ ದೊರಕುವಂತಾಗಬೇಕಿದೆ. ಭಾರತದಲ್ಲಿ ಆರೋಗ್ಯ ಸೇವೆಯನ್ನು ಏಕಕಾಲದಲ್ಲಿ, ಎಲ್ಲರಿಗೂ ದೊರಕುವಂತೆ ಮಾಡಿದ ಬೃಹತ್ ಆರೋಗ್ಯ ಯೋಜನಾ ಮಾದರಿಗಳಿವೆ. ಹಿಂದಿನ ಪ್ಲೇಗ್, ಸಿಡುಬು, ದಡಾರ ಲಸಿಕೆ ಚುಚ್ಚುಮದ್ದುಗಳು ನಂತರದ ಪೋಲಿಯೋ ಹನಿ, ಪ್ರತಿಯೊಬ್ಬ ಮಕ್ಕಳಿಗೆ ಹಾಕಿದ ಯೋಜನೆಗಳಿವೆ. ಅವುಗಳನ್ನಾಧರಿಸಿ, ಕರೋನಾ ಲಸಿಕೆ, ಚುಚ್ಚುಮದ್ದು ಮತ್ತು ನಂತರದ ಪರಿಣಾಮಗಳ ತುರ್ತು ನಿಗಾ ಮತ್ತು ಔಷಧೋಪಚಾರಗಳು ಎಲ್ಲರಿಗೂ ದೊರಕುವಂತೆ ಸರ್ಕಾರ ವ್ಯಾಪಕ ಸಿಬ್ಬಂದಿ, ಪರಿಕರ ಮತ್ತು ವ್ಯವಸ್ಥೆ ಮಾಡಬೇಕಿದೆ. ಇದರೊಂದಿಗೆ ರಾಜ್ಯದಿಂದ ರಾಜ್ಯಕ್ಕೆ ಹಬ್ಬುತ್ತಿರುವ ಹಕ್ಕಿಜ್ವರ, ಹಿಮಾಚಲ ಪ್ರದೇಶದಿಂದ ಆರಂಭವಾಗಿ ವೇಗವಾಗಿ, ಹರ್ಯಾಣ, ಗುಜರಾತ್, ರಾಜಸ್ಥಾನ, ಮಹಾರಾಷ್ಟ್ರ, ಉತ್ತರ ಪ್ರದೇಶ, ಕರ್ನಾಟಕಕ್ಕೂ ವೈರಸ್ ಹರಡುತ್ತಿರುವುದು ಕಂಡು ಬರುತ್ತಿದೆ. ವಲಸೆ ಹಕ್ಕಿಗಳು ಬರುವ ಜಾಗಗಳು ಮತ್ತು ಜೌಗುಪ್ರದೇಶಗಳಲ್ಲಿ ಪಕ್ಷಿ ಸಾಕಾಣಿಕೆ ಮತ್ತು ಮಾರಾಟ ಕೇಂದ್ರಗಳು ಹಾಗೂ ಮೃಗಾಲಯಗಳಲ್ಲಿ ತೀವ್ರ ನಿಗಾ ಕ್ರಮವಹಿಸಬೇಕಿದೆ. ಇದುವರೆವಿಗೂ ಈ ವೈರಸ್ ಹಬ್ಬಿರುವ 10 ರಾಜ್ಯಗಳಲ್ಲಿನ ಪಶುಸಂಗೋಪನಾ ಇಲಾಖೆ ಅತಿ ಜಾಗರೂಕತೆಯ ಮುನ್ನೆಚ್ಚರಿಕೆ ಕ್ರಮಗಳು ಮತ್ತು ಹರಡುವುದನ್ನು ತಡೆಯುವ ಕ್ರಮಗಳು, ಸತ್ತ ಪಕ್ಷಿಗಳ ಸಮರ್ಪಕ ವಿಲೇವಾರಿ ಅತಿ ಪ್ರಮುಖ ಅಂಶಗಳ ಕಡೆಗೆ ಸರ್ಕಾರ, ತೀವ್ರ ಕ್ರಮ ವಹಿಸಬೇಕೆಂದು ಒತ್ತಾಯಿಸುತ್ತೇವೆ. ರೈತನ ಮೇಲಿನ ಸುಗ್ರೀವಾಜ್ಞೆಯಿಂದ ಮತ್ತು ರೈತರ ಜಾನುವಾರುಗಳ ವಿನಾಶದಿಂದ ರೈತರು ತೀವ್ರ ಕಂಗೆಟ್ಟಿದ್ದಾರೆ. ಯಾವ ಭರವಸೆಯನ್ನಿಟ್ಟುಕೊಂಡು ಅವರು "ರಾಷ್ಟ್ರೀಯ ರೈತರ ದಿನಾಚರಣೆ"ಯನ್ನು ಆಚರಿಸಬೇಕಿದೆ? ಭಾರತದ 5ನೇ ಪ್ರಧಾನಿ ಚೌಧರಿ ಚರಣ್‌ಸಿಂಗ್ ಅವರ ಸ್ಮರಣಾರ್ಥ ಡಿಸೆಂಬರ್ 23ನ್ನು "ರೈತರ ದಿನವನ್ನಾಗಿ ಆಚರಿಸಲಾಗುತ್ತಿದೆ. ಇವರು ಸಚಿವರು, ಮುಖ್ಯಮಂತ್ರಿ, ಉಪ ಪ್ರಾಧಾನಿ ನಂತರ ಪ್ರಧಾನ ಮಂತ್ರಿಯಾಗಿದ್ದ ಅವಧಿಯಲ್ಲಿ (28.07.1979 ರಿಮದ 14.01. 1980) ಕೃಷಿಕ್ಷೇತ್ರದ ಅಭಿವೃದ್ಧಿಗಾಗಿ ಸಾಕಷ್ಟು ಯೋಜನೆಗಳು, ನಿಯಮಗಳು, ಸುಧಾರಣೆಗಳನ್ನು ತಂದಿದ್ದರು. ಸ್ವತಹ ರೈತರಾದ ಚರಣ್‌ಸಿಂಗ್ ಅವರು ಜಮೀನ್ದಾರಿ ಪದ್ಧತಿ ರದ್ದತಿ, ಕೃಷಿ ಉತ್ಪನ್ನ ಮಾರುಕಟ್ಟೆ ಮಸೂದೆ, ಭೂ ಸುಧಾರಣೆ ಕಾಯ್ದೆ, ಕಾರ್ಮಿಕ ಕಾಯ್ದೆಗೆ ತಿದ್ದುಪಡಿ, 1979ರಲ್ಲಿ ಕೃಷಿ ಬಜೆಟ್ ತಂದ ಕೀರ್ತಿ ಇವರಿಗೆ ಸಲ್ಲುತ್ತದೆ. ಆದರೆ ಈ ಬಾರಿಯ ರೈತರ ದಿನದಂದು, ಇಡೀ ಭಾರತದಾದ್ಯಂತ, ರೈತ ವಿರೋಧಿ ಕ್ರಮವೇ ಜಾರಿಯಾಯಿತು. ಲಾಲ್ ಬಹದ್ದೂರ್ ಶಾಸ್ತ್ರಿ ಅವರ "ಜೈ ಕಿಸಾನ್" ಕರೆ ಜಗಜೀವನರಾಂ ಅವರ ಹಸಿರು ಕ್ರಾಂತಿ, ಮಹಾತ್ಮಾಜಿ ಅವರ ಗ್ರಾಮಸ್ವರಾಜ್, ದೇವರಾಜ ಅರಸು ಅವರ ಭೂ ಸುಧಾರಣೆ, "ಉಳುವವನೇ ಭೂಮಿಯ ಒಡೆಯ, ಪಿ.ಟಿ.ಸಿ.ಎಲ್. ಕಾಯ್ದೆ, ರೈತರೇ ದೇಶದ ಬೆನ್ನೆಲುಬು ಎಂಬ ಕಾಯ್ದೆ ನಿಮಮಗಳಂತೆ ನಡೆದು ಬಂದ ದೇಶ, ಸಾಗುತ್ತಿದೆ ಎಲ್ಲಿಗೆ? ರೈತರ ಅನ್ನದ ಋಣ, ಜನ್ಮಜನ್ಮಾಂತರಕ್ಕೂ ತೀರಿಸಲಾಗದು. ದೇಶದ ರೈತರು ಮತ್ತು ಸರ್ಕಾರ ಒಂದಾಗಿ ಆಚರಿಸಬೇಕಾದ ರಾಷ್ಟ್ರೀಯ ಕಿಸಾನ್ ದಿನ, ಬರ್ಬರತೆಯಿಂದ ತತ್ತರಿಸಿದ್ದು, ಪ್ರಜಾಪ್ರಭುತ್ವದ ಉಪೇಕ್ಷೆಯಂತಾಗಿದೆ. 'ಮನೆಯೊಳಗಳ ಕಿಚ್ಚು ಮನೆಯನ್ನು ಸುಡುವುದಲ್ಲದೆ, ನೆರಮನೆಯ ಸುಡುವುದೇ' ಆದ್ದರಿಂದ ಸರ್ಕಾರ ರೈತರೆಡೆಗೆ ಮುಖ ಮಾಡಲಿ, ರಾಜಕೀಯ ಪ್ರತಿಷ್ಠೆಗಳನ್ನು ಬದಿಗೊತ್ತಿದಾಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ. ಕರೋನಾ ಪಿಡುಗು ಮತ್ತು ಜನ ವಿರೋಧಿ, ನೀತಿ ನಡಾವಳಿಯಿಂದಾಗಿ ಮಾನವ ಅಭಿವೃದ್ಧಿ ಸೂಚ್ಯಾಂಕದ ವಿವಿಧ ಮಾನದಂಡದಲ್ಲಿ ಭಾರತದ ಸ್ಥಾನ ಕುಸಿದಿರುವುದು ಜನ ಪ್ರತಿನಿಧಿಗಳು ಮನದಟ್ಟಾಗಬೇಕಿದೆ. ಮಾನವ ಸ್ವಾತಂತ್ರ್ಯ ಸೂಚ್ಯಾಂಕದಲ್ಲಿ 117ನೇ ಸ್ಥಾನ, ಹಸಿವಿನ ಸೂಚ್ಯಾಂಕದಲ್ಲಿ 94ನೇ ಸ್ಥಾನ, ಜಿಡಿಪಿಯಲ್ಲಿ ಬಾಂಗ್ಲಾದೇಶಕ್ಕಿಂತ ಕೆಳಗಿನ ಸ್ಥಾನ, ಮಾಧ್ಯಮ ಸ್ವಾತಂತ್ರದಲ್ಲಿ 142ನೇ ಸ್ಥಾನಕ್ಕೆ ಕುಸಿದಿದೆ. ಈ ಸಮೀಕ್ಷಾ ವರದಿಗಳು ನಮ್ಮನ್ನು ಮತ್ತಷ್ಟು ತಲ್ಲಣಗಳೊಳಿಸುತ್ತವೆ. ಈ ಅನುಪಾತಕ್ಕೆ ನಮ್ಮದೇನೂ ಕೊಡುಗೆ ಇರದಿರಲಿ ಎಂದು ಪ್ರತಿಯೊಬ್ಬರು ಕರ್ತವ್ಯಪಾಲಕರಾಗಬೇಕಿದೆ. ಇಂಥಹ ತೀವ್ರ ಕುಸಿತದ ನಡುವೆ ಮಧ್ಯಪ್ರದೇಶದ ಜನಪ್ರತಿನಿಧಿಯೊಬ್ಬರು "ಬಾಲಕಿಯರು, 15ರ ವಯಸ್ಸಿಗೆ ಸಂತಾನೋತ್ಪತ್ತಿ ಮಾಡಬಹುದಾದರೆ ವಿವಾಹದ ವಯಸ್ಸನ್ನು 18ರಿಂದ 21ಕ್ಕೆ ಏಕೆ ಏರಿಸಬೇಕು ಎಂದು ಕರೆ ನೀಡಿದ್ದಾರೆ. ಎಂಥಹ ಅಪ್ರಬುದ್ಧರನ್ನು ನಮ್ಮ ಪ್ರತಿನಿಧಿಯಾಗಿ ಆಡಳಿತ ನಡೆಸಲು ಕಳುಹಿಸಿದ್ದೀವಲ್ಲ? ಎಂದು ಅಲ್ಲಿನ ಜನರ ಕೂಗನ್ನು ಆ ಸಚಿವರ ಕಿವಿಗೆ ತಲುಪಿಸಬೇಕಿದೆ. ಭಾರತದಲ್ಲಿ ಹೆಣ್ಣುಮಕ್ಕಳನ್ನು ಶತಮಾನದಿಂದ ಹೀಗೆ ತಾರತಮ್ಯದಿಂದ ಕಂಡದ್ದರಿಂದಲೇ ಭಾರತ ಅಭಿವೃದ್ಧಿ ಸಾಧ್ಯವಾಗಿರುವುದಿಲ್ಲ ಎಂಬುದನ್ನು ತೀವ್ರವಾಗಿ ಗಮನಿಸಬೇಕಿದೆ. ರಾಷ್ಟ್ರೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಷ್ಟ್ರವ್ಯಾಪಿ ಸರ್ವೆಯ ವರದಿಗಳು ಮತ್ತು ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ ಭಾರತದ ಮಹಿಳೆಯರು ಮತ್ತು ಮಕ್ಕಳು ಅಪೌಷ್ಠಿಕತೆ, ರಕ್ತಹೀನತೆ, ವಿಳಂಬ ಚಿಕಿತ್ಸೆ, ಕಳಪೆ ಆರೋಗ್ಯ ಸ್ಥಿತಿ, ಆರೋಗ್ಯ ಸೇವೆಗಳ ಕೊರತೆ, ಇತರೆ ಕಾಯಿಲೆಗಳು ಹಾಗೂ ಬಡತನಗಳಿಂದಾಗಿ ಪ್ರತಿವರ್ಷ 5,85,500 ಮಹಿಳೆಯರು ನಿಧನರಾಗುತ್ತಿದ್ದಾರೆ. ಗರ್ಭಧಾರಣೆ ಮತ್ತು ಹೆರಿಗೆಗೆ ಸಂಬಂಧಿಸಿದಂತೆ 1600ಕ್ಕೂ ಹೆಚ್ಚು ಮಹಿಳೆಯರು ಸಾವನ್ನಪ್ಪುತ್ತಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ 67% ಮಕ್ಕಳು ಮತ್ತು ಶೇ 50% ಅವಿವಾಹಿತ ಹೆಣ್ಣುಮಕ್ಕಳು ರಕ್ತ ಹೀನತೆಯಿಂದ ಬಳಲುತ್ತಿದ್ದಾರೆ. ನಗರ ಪ್ರದೇಶದಲ್ಲಿ ಶೇ 85% ಮಹಿಳಾ ಸಾಕ್ಷರತೆ ಇದ್ದರೆ, ಗ್ರಾಮೀಣ ಪ್ರದೇಶದಲ್ಲಿ ಶೇ 71% ಇದೆ. ಇದರಂತೆ, ಗ್ರಾಮೀಣ ಹೆಣ್ಣು ಮಕ್ಕಳಲ್ಲಿ ಶೇ. 24%ರಷ್ಟು ಮಂದಿಗೆ 18 ವರ್ಷಕ್ಕಿಂತಲೂ ಪೂರ್ವದಲ್ಲಿಯೇ ವಿವಾಹ ಮಾಡುವರು. ಈ ಪ್ರಮಾಣ ಶೇ. 16%, ನಗರ ಪ್ರದೇಶದಲ್ಲಿದೆ. ಮತ್ತು ಗ್ರಾಮೀಣ ಪ್ರದೇಶದಲ್ಲಿ ಶೇ.6.6.%ರಷ್ಟು ನಗರ ಪ್ರದೇಶದಲ್ಲಿ, ಶೇ.3.4%ರಷ್ಟು ಹೆಣ್ಣುಮಕ್ಕಳು 15 ರಿಂದ 19 ವರ್ಷದೊಳಗೆ ಗರ್ಭಧರಿಸುವಂತಾಗಿದೆ. ಇದರಿಂದಾಗಿ ಅಸಮರ್ಪಕ ದೈಹಿಕ ಶಕ್ತಿಯಿಂದಾಗಿ, ನವಜಾತ ಶಿಶು ಮರಣ ಗ್ರಾಮೀಣ ಪ್ರದೇಶದಲ್ಲಿ ಶೇ. 16, ನಗರದಲ್ಲಿ ಶೆ. 27ರಷ್ಟಿದೆ ಹಾಗೂ 5 ವರ್ಷದ ಒಳಗಿನ ಮಕ್ಕಳ ಮರಣ ಪ್ರಮಾಣ, ಗ್ರಾಮೀಣದಲ್ಲಿ ಶೇ. 32.5 ಮತ್ತು ನಗರದಲ್ಲಿ ಶೇ. 24.5ರಷ್ಟಿರುವುದು. ಇಂಥಹ ಶೋಚನೀಯ ಸ್ಥಿತಿಗತಿಯಲ್ಲಿ ಬಾಲಕಿಯರು, ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಲೈಂಗಿಕ ದೌರ್ಜನ್ಯಗಳು ದಿನದಿನೇ ಹೆಚ್ಚಾಗುತ್ತಿರುವುದು ಆತಂಕಕ್ಕೆ ಕಾರಣವಾಗಿದೆ. ಅಪಹರಣ, ಅತ್ಯಾಚಾರ ದೌರ್ಜನ್ಯ, ನಿರಂತರ ಸಾಮೂಹಿಕ ಅತ್ಯಾಚಾರ ಕೊಲೆಗಳು ಎಲ್ಲರನ್ನೂ ತಲ್ಲಣಗೊಳಿಸಿವೆ, ಭೀತರನ್ನಾಗಿಸಿದೆ. ಮಧ್ಯ ಪ್ರದೇಶದಲ್ಲಿನ ಮಹಿಳೆಯರ ಮೇಲಿನ ಸಾಮೂಹಿಕ, ಭೀಕರ ಅತ್ಯಾಚಾರ ಮತ್ತು ಹಿಂಸೆ ಕರ್ನಾಟಕದ ಹೆಣ್ಣುಮಗಳ ಮೇಲಿನ ನಿರಂತರ ಅತ್ಯಾಚಾರ ಮತ್ತು ಕೊಲೆ, ಹೆಣ್ಣು ಮಕ್ಕಳನ್ನೂ ಹೆತ್ತ ತಾಯಿ ತಂದೆಯರನ್ನು ಹೆಣ್ಣು ಮಕ್ಕಳ "ಯ್ಯಾಕಡದಿ ನನ್ನವ್ವ ನಮ್ಮ ಜೀವ್ನ ಎಣ್ಣ್ಯಾಗ ಬತ್ತಿ ಉರಿದಾಂಗ" ಎಂಬಂತಾಗಿದೆ. ಅತ್ಯಾಚಾರಿಗಳ ವಿರುದ್ಧದ ಕಾನೂನು ಕಠಿಣವಾಗಿ ಜಾರಿಯಾಗಬೇಕು. ಅತ್ಯಾಚಾರಿಗಳ ಭಾವಚಿತ್ರಗಳು ಸಾರ್ವಜನಿಕ ಸ್ಥಳಗಳಲ್ಲಿ ಪ್ರಕಟಿಸಬೇಕು. ಪೋಲಿಸ್ ವ್ಯವಸ್ಥೆಯ ನಿಷ್ಠೆ, ಪ್ರಾಮಾಣಿಕತೆ, ಹೆಣ್ಣುಮಕ್ಕಳ ಘನತೆ-ಗೌರವವನ್ನು ಸಂರಕ್ಷಿಸಬಲ್ಲದು. ಎಲ್ಲಾ ಭೀಕರತೆಯ ನಡುವೆ, ಅಮೇರಿಕಾದ ವಾಷಿಂಗ್ಟನ್ ಡಿ.ಸಿ.ಯ ಭಾರತೀಯ ರಾಯಭಾರ ಕಚೇರಿಯ ಮುಂಭಾಗದಲ್ಲಿರುವ ಮಹಾತ್ಮ ಗಾಂಧೀಜಿ ಅವರ ಪ್ರತಿಮೆಯನ್ನು ವಿರೂಪಗೊಳಿಸಿರುವುದು ಮತ್ತು ಡಿಸೆಂಬರ್ 12ರಂದು ಮಹಾತ್ಮ ಗಾಂಧಿ ಸ್ಮಾರಕ ಪ್ಲಾಝಾದಲ್ಲಿರುವ ಪ್ರತಿಮೆಯನ್ನು ವಿರೂಪಗೊಳಿಸುವುದು ಖಂಡನೀಯ ವಿಚಾರವಾಗಿದೆ. ಜಗತ್ತಿಗೆ ಶಾಂತಿ, ನ್ಯಾಯ ಸಮಾನತೆಯ ತತ್ವಗಳನ್ನು ಪ್ರತಿಪಾದಿಸಿದ, ಗಣ್ಯರನ್ನು ಅಪವಿತ್ರಗೊಳಿಸಿದ ಬಗ್ಗೆ ಅಮೇರಿಕಾ ಪ್ರಬಲವಾಗಿ ಖಂಡಿಸಿದೆ. ಭಾರತದಲ್ಲಿಯೇ ಇಂಥಹ ವಿರೋಧಿ ನಡೆಗಳು ತಲೆ ಎತ್ತಿವೆ. ಮಧ್ಯಪ್ರದೇಶದ ಗ್ವಾಲಿಯರ್‌ನಲ್ಲಿ 'ಗೋಡ್ಸೆ ಜ್ಞಾನ ಶಾಲೆ' ಆರಂಭಿಸಿರುವುದು ಸಹ ಗಾಂಧೀಜಿ ಅವರ ಅಹಿಂಸಾ ತತ್ವಗಳ ವಿರುದ್ಧವಾಗಿ ಹಿಂಸೆಯ ಪಾಠಶಾಲೆಯನ್ನೂ ಪ್ರಾರಂಭಮಾಡಿದಂತಾಗಿದೆ. ಇದರ ವಿರುದ್ಧವೂ ಗಣ್ಯರೂ, ರಾಷ್ಟ್ರಪ್ರೇಮಿಗಳು, ಗಾಂಧಿ ಅನುಯಾಯಿಗಳು, ಸೂಕ್ತ ಕ್ರಮಕೈಗೊಳ್ಳಲು ಸರ್ಕಾರದ ಮೇಲೆ ಒತ್ತಡ ತರಬೇಕಿದೆ.



ಸಂಸಾರ ಪ್ರವೇಶ : ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ' ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನನ್ನ ಹಿರಿಯಣ್ಣ, ನನ್ನ ಮೇಲೆ ಆಸೆಯ ಗೋಪುರವನ್ನೇ ಕಟ್ಟಿಕೊಂಡಿದ್ದರು. ಧನ, ಕೀರ್ತಿ, ಪದವಿ ಇವುಗಳ ಆಸೆ ಆತನಿಗೆ ಅಧಿಕವಾಗಿದ್ದಿತು. ಆತನದು ವಿಶಾಲ ಹೃದಯ ಮತ್ತು ಉದಾರ ಸ್ವಭಾವ. ಆತ ತುಂಬ ಸರಳಹೃದಯಿ. ಇವೆಲ್ಲವುಗಳಿಂದ ಆತನಿಗೆ ಅನೇಕ ಜನ ಸ್ನೇಹಿತರಾಗಿದ್ದರು. ಆ ಸ್ನೇಹಿತರ ಮೂಲಕ, ಅನೇಕ ಮೊಕದ್ದಮೆಗಳು ನನಗೆ ಬರುವುದೆಂಬುದು ಆತನ ನಿರೀಕ್ಷೆಯಾಗಿತ್ತು. ವಕೀಲಿ ವೃತ್ತಿಯಿಂದ ನನ್ನ ಸಂಪಾದನೆ ಹೆಚ್ಚುವುದೆಂದು ನಿರ್ಣಯಿಸಿ, ಆತ ಸಂಸಾರದ ವೆಚ್ಚವನ್ನೆಲ್ಲ ಹೆಚ್ಚಿಸಿ ಬಿಟ್ಟಿದ್ದ. ನನ್ನ ವೃತ್ತಿಗೆ ಕ್ಷೇತ್ರವನ್ನು ಸಿದ್ಧಗೊಳಿಸುವುದಕ್ಕೂ ಆತನು ಬಹಳ ಶ್ರಮಪಟ್ಟಿದ್ದ.

ನನ್ನ ವಿದೇಶ ಯಾತ್ರೆ ಕುರಿತು ನನ್ನ ಜಾತಿಯಲ್ಲಿ ಎದ್ದಿದ್ದ ಬಿರುಗಾಳಿ ಇದ್ದೇ ಇದ್ದಿತು. ಈಗ ನಮ್ಮ ಜಾತಿಯವರಲ್ಲಿಯೇ ಎರಡು ಪಂಗಡಗಳಾಗಿದ್ದವು. ಒಂದು ಪಂಗಡ ನನ್ನನ್ನು ಜಾತಿಗೆ ಸೇರಿಸಿಕೊಂಡಿತು. ನನ್ನನ್ನು ಹೊರಗೇ ಇಟ್ಟಿರಬೇಕೆಂಬುದು ಮತ್ತೊಂದು ಪಂಗಡದ ನಿರ್ಣಯವಾಗಿತ್ತು. ನಮ್ಮಣ್ಣ ನನ್ನನ್ನು ನಾಸಿಕಕ್ಕೆ ಕರೆದುಕೊಂಡು ಹೋಗಿ ಅಲ್ಲಿ ನದಿಯಲ್ಲಿ ಪವಿತ್ರ ಸ್ನಾನ ಮಾಡಿಸಿದ. ರಾಜಕೋಟೆಗೆ ಹಿಂದಿರುಗಿ ಜಾತಿಯವರಿಗೆ ಒಂದು ಊಟವನ್ನು ಕೊಟ್ಟ. ನನಗೆ ಇದಾವುದೂ ಇಷ್ಟವಿರಲಿಲ್ಲ, ಆದರೆ ನನ್ನಲ್ಲಿ ನಮ್ಮಣ್ಣನ ಪ್ರೀತಿ ಅಮಿತವಾಗಿತ್ತು. ಆತನಲ್ಲಿ ನನ್ನ ಭಕ್ತಿಯ ಹಾಗೆಯೇ ಇತ್ತು. ಆದುದರಿಂದ ನಾನು ಆತನ ಇಚ್ಛೆಯನ್ನ ಆಜ್ಞೆಯಂತೆ ಭಾವಿಸಿ ಯಂತ್ರದಂತೆ ನೆರವೇರಿಸಿದೆ. ಹೀಗೆ, ಜಾತಿಯವರಲ್ಲಿ ಮತ್ತೆ ಸೇರಿಕೊಳ್ಳುವುದು ಸುಲಭವಾಯಿತು. ನನ್ನನ್ನು ಬಹಿಷ್ಕರಿಸಿದ ನಮ್ಮ ಜಾತಿಯವರ ಪಂಗಡವನ್ನು ಪ್ರವೇಶಿಸಲು ನಾನು ಮತ್ತೆ ಎಂದೂ ಪ್ರಯತ್ನ ಮಾಡಲಿಲ್ಲ. ಅಷ್ಟೇ ಅಲ್ಲ, ಆ ಪಂಗಡದ ಮುಖಂಡರ ಬಗ್ಗೆ ನನ್ನ ಮನಸ್ಸಿನಲ್ಲಿ ಸಹ ಎಂದೂ ಶೋಧ ಉಂಟಾಗಲಿಲ್ಲ, ಕೆಲವರಿಗೆ ನನ್ನಲ್ಲಿ ತಿರಸ್ಕಾರ ದೃಷ್ಟಿ ಸಹ ಇತ್ತು. ಆದರೆ ನಾನು ಅವರ ಮನಸ್ಸಿಗೆ ನೋವಾಗುವಂತೆ ಎಂದೂ ನಡೆಯಲಿಲ್ಲ. ನಾನು ಬಹಿಷ್ಕಾರದ ನಿಯಮಗಳನ್ನು ಪೂರ್ಣವಾಗಿ ಪಾಲಿಸುತ್ತಿದ್ದೆ. ಆ ನಿಯಮಕ್ಕೆ ಅನುಗುಣವಾಗಿ ನಮ್ಮ ಅತ್ತೆ ಮಾವಂದಿರು, ನಮ್ಮ ಸಹೋದರಿಯರು, ಭಾವ ಮುಂತಾದ ಯಾವ ಬಂಧುಗಳ ನನ್ನೊಂದಿಗೆ ಯಾವ ಸಂಪರ್ಕವನ್ನೂ ಇಟ್ಟುಕೊಳ್ಳುವಂತೆ ಇರಲಿಲ್ಲ. ನನಗೆ ತಮ್ಮ ಮನೆಗಳಲ್ಲಿ ಆತಿಥ್ಯ ಮಾಡುವಂತೆ ಇರಲಿಲ್ಲ. ನಾನು ಅವರ ಪೈಕಿ ಯಾರ ಮನೆಯಲ್ಲಿಯ ನೀರನ್ನು ಕೂಡ ಕುಡಿಯುತ್ತಿರಲಿಲ್ಲ. ಅವರು ರಹಸ್ಯದಲ್ಲಿ, ಬಹಿಷ್ಕಾರ ನಿಯಮವನ್ನು ಉಲ್ಲಂಘಿಸಲು ಸಿದ್ಧರಾಗಿದ್ದರು. ಆದರೆ ಅದು ನನ್ನ ಸ್ವಭಾವಕ್ಕೆ ವಿರುದ್ಧವಾಗಿತ್ತು. ಯಾವ ಕಾರ್ಯವನ್ನು ನಾಲ್ಕು ಜನರ ಎದುರಿಗೆ ಮಾಡುವುದಿಲ್ಲವೋ, ಅದನ್ನು ರಹಸ್ಯದಲ್ಲಿ ಮಾಡಲು ನನಗೆ ಇಷ್ಟವಿರಲಿಲ್ಲ. ನನ್ನ ಈ ಪ್ರಾಮಾಣಿಕ ನಡತೆಯ ಪರಿಣಾಮವಾಗಿ, ಜಾತಿಯವರಿಂದ ನನಗೆ ಯಾವಾಗಲೂ ಉಪದ್ರವವಾಗುವ ಸಂದರ್ಭವೇ ಉಂಟಾಗಲಿಲ್ಲ. ಅಷ್ಟೇ ಅಲ್ಲ ನಾನು ಬಹಿಷ್ಕೃತ ಎಂದು ತಿಳಿದ ಜಾತಿಬಂಧುಗಳ ಸಹ, ನನ್ನಲ್ಲಿ ಪ್ರೇಮ ಔದಾರ್ಯಗಳನ್ನು ಪೂರ್ಣವಾಗಿ ಇಟ್ಟಿದ್ದಾರೆ. ನಾನು ಜಾತಿಗಾಗಿ ಏನನ್ನು ಮಾಡಬೇಕೆಂದೂ ಸಹ ನಿರೀಕ್ಷಿಸದೆ ಅವರು ನನ್ನ ಕಾರ್ಯದಲ್ಲಿ ನನಗೆ ಸಹಾಯ ಮಾಡಿದ್ದಾರೆ. ಇದಕ್ಕೆಲ್ಲ ಕಾರಣ ನನ್ನ ಪ್ರತೀಕಾರರಹಿತ ಬುದ್ಧಿ ಎಂದು ನನ್ನ ನಂಬಿಕೆ. ಜಾತಿಗೆ ಮತ್ತೆ ನನ್ನನ್ನು ಸೇರಿಸಬೇಕೆಂದು ನಾನು ಹೋರಾಡಿದ್ದರೆ ಅಥವಾ ಜಾತಿಯ ಮುಖಂಡರನ್ನು ನಾನು ಎದುರಿಸಿ ರೇಗಿಸಿದ್ದರೆ ಇಂಗ್ಲೆಂಡಿನಿಂದ ಹಿಂದಿರುಗಿದ ಮೇಲೆ ನಾನು ಅಶಾಂತಿಯ ಬಿರುಗಾಳಿಯಲ್ಲಿ ಸಿಕ್ಕಿಕೊಳ್ಳುತ್ತಿದ್ದೆ ಮತ್ತು ಪ್ರಾಯಶಃ ಮಿಥ್ಯಾಚಾರಿ ಸಹ ಆಗುತ್ತಿದ್ದೆ.

ನನ್ನ ಪತ್ನಿಯೊಂದಿಗೆ ನನ್ನ ಸಂಬಂಧ ಹೇಗಿರಬೇಕೆಂಬುದು ನನ್ನ ಇಷ್ಟವಾಗಿದ್ದಿತೋ, ಅದು ಇನ್ನೂ ಹಾಗೆ ಆಗಿರಲಿಲ್ಲ. ಇಂಗ್ಲೆಂಡಿಗೆ ಹೋಗಿ ಬಂದಿದ್ದರೂ ಸಹ ಆಕೆಯ ವಿಷಯದಲ್ಲಿ ನನ್ನ ಅಸೂಯಾ ಬುದ್ಧಿ ಹೋಗಿರಲಿಲ್ಲ, ಯಾವ ಸಣ್ಣ ವಿಷಯದಲ್ಲಿಯೂ ನನ್ನ ಸಂದೇಹ ಮತ್ತು ಗೊಣಗಾಟದ ಬುದ್ಧಿ ಮರೆಯಾಗಿರಲೇ ಇಲ್ಲ. ಇದರಿಂದ ನನ್ನ ಪ್ರಿಯವಾದ ಮನೋರಥಗಳಾವುವೂ ಈಡೇರಲೇ ಇಲ್ಲ, ನನ್ನ ಹೆಂಡತಿ ಬರೆಯುವುದನ್ನೂ, ಓದುವುದನ್ನೂ ಕಲಿಯಬೇಕು, ನಾನು ಅವಳಿಗೆ ಪಾಠ ಹೇಳಿ ಕೊಡಬೇಕು ಎಂದು ನಿಶ್ಚಯ ಮಾಡಿಕೊಂಡಿದ್ದೆ. ಆದರೆ ನನ್ನ ವಿಷಯಾಸಕ್ತಿಯಿಂದ ಅದಾವುದೂ ಸಾಧ್ಯವಾಗಲಿಲ್ಲ. ನನ್ನ ಈ ದೋಷದ ಫಲವನ್ನು ನನ್ನ ಹೆಂಡತಿ ಅನುಭವಿಸಬೇಕಾಯಿತು. ಇದು ಎಲ್ಲಿಯವರೆಗೆ ಹೋಯಿತೆಂದರೆ, ಒಂದು ಸಲ ನಾನು ಆಕೆಯನ್ನು ಅವಳ ತಂದೆಯ ಮನೆಗೆ ಕಳುಹಿಸಿ ಅಲ್ಲಿ ಆಕೆ ತುಂಬಾ ಕಷ್ಟ ಮತ್ತು ದುಃಖಪಟ್ಟಮೇಲೆಯೇ, ಹಿಂದಕ್ಕೆ ಬಂದು ನನ್ನೊಂದಿಗೆ ವಾಸಿಸಲು ಅವಕಾಶ ಕೊಟ್ಟೆ. ಇದೆಲ್ಲ ನನ್ನ ಅವಿವೇಕ ಎಂಬುದು ಈಚೆಗೆ ನನಗೆ ಗೊತ್ತಾಗಿದೆ.

ಮುಂದುವರಿಯುವುದು...

ಕರ್ನಾಟಕದಲ್ಲಿ ಕಾಂಗ್ರೆಸ್ : ಬೆಳಗಾವಿ, 1924

ಮೋ. ಕ. ಗಾಂಧಿ (ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ)
ಸಂಪಾದನೆ : ಸಿದ್ದವನಹಳ್ಳಿ ಕೃಷ್ಣಶರ್ಮ

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.
(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಇದರಿಂದ ಕರ್ನಾಟಕದ ಜನರಲ್ಲಿ ಹುರುಪು ಹೆಚ್ಚಾಗಿ ಬಂದು ಬೇಗ ಬೇಗ ಕೆಲಸ ನಡೆಯುವಂತೆ ಆಯಿತು. ಬೆಳಗಾಂವಿ, ಧಾರವಾಡ, ಬಳ್ಳಾರಿ, ಕಾರವಾರ ಜಿಲ್ಲೆಗಳಿಂದ ಸಾಕಷ್ಟು ಧನಸಹಾಯವೂ ದೊರೆಯಿತು. ಆಗ ಮೈಸೂರು ದೇಶೀ ಸಂಸ್ಥಾನ. ಇಲ್ಲಿ ಅ. ಭಾ. ಕಾಂಗ್ರೆಸ್ಸಿನ ಕಾರ್ಯಕಲಾಪಗಳು ನಡೆಯುವಂತಿರಲಿಲ್ಲ. ಸ್ವಯಂ ಗಾಂಧೀಜಿಯು ಅದಕ್ಕೆ ವಿರುದ್ಧ. ಸಂಸ್ಥಾನದ ಜನ ಹೊರಗಿನ ಬ್ರಿಟಿಷ್ ಪ್ರಾಂತಗಳ ಪ್ರಾಂತೀಯ ಕಾಂಗ್ರೆಸ್ಸಿನ ಸದಸ್ಯರಾಗಿ ಅಲ್ಲಿನ ಚಳವಳಿಗಳಲ್ಲಿ ಭಾಗವಹಿಸಬೇಕಾಗಿತ್ತು. ಇಲ್ಲಿನ ಉತ್ಸಾಹೀ ತರುಣರು ಅದೇ ದಾರಿ ಹಿಡಿದರು. ನಾಗಪುರದಲ್ಲಿ ನಡೆದ ಧ್ವಜಸತ್ಯಾಗ್ರಹಕ್ಕೆ (1–5–1923) ಕರ್ನಾಟಕದಿಂದ ಅನೇಕ ಮಂದಿ ಕಾರ್ಯಕರ್ತರು ಹೋಗಿದ್ದರು. ಅವರಲ್ಲಿ ಪ್ರಮುಖರು ಡಾ. ಹರ್ಡೀಕರರು. ಶ್ರೀನಿವಾಸರಾವ ಜೋಗ ಇವರು, ಧಾರವಾಡ, ಬೆಂಗಳೂರು ಮುಂತಾದ ಕಡೆಗಳಿಂದ ಹಲವಾರು ಕಾರ್ಯಕರ್ತರು ಆ ಸತ್ಯಾಗ್ರಹಕ್ಕೆ ಹೋಗಿದ್ದರು. ನಾಗಪುರದ ಸಿವಿಲ್ ಲೈನಿನಲ್ಲಿ ಕಾಂಗ್ರೆಸ್ ಧ್ವಜ ಹಿಡಿದುಕೊಂಡು ಹೋಗಕೂಡದು ಎಂದು ಪ್ರತಿಬಂಧಕ ಆಜ್ಞೆಯನ್ನು ಹೊರಡಿಸಿತ್ತು ಅಂದಿನ ಸರಕಾರ. ಆ ಕಾರಣದಿಂದ ಅಲ್ಲಿ ಸತ್ಯಾಗ್ರಹ ಪ್ರಾರಂಭವಾಗಿತ್ತು. ಸ್ವರ್ಗೀಯ ಸೇಠ ಜಮುನಾಲಾಲ ಬಜಾಜರು ಆ ಸತ್ಯಾಗ್ರಹಕ್ಕೆ ಮುಂದಾಳು. ಅವರು ಸೆರೆ ಆದಮೇಲೆ ವಲ್ಲಭಭಾಯಿಯವರೇ ಅದಕ್ಕೆ ನಾಯಕರು ಆದರು. ನಾಗಪುರದಲ್ಲಿ ಜುಲೈ 18, 1923ಕ್ಕೆ ಝುಂಡಾ ಸತ್ಯಾಗ್ರಹ ಯಶಸ್ವಿಯಾಗಿ ಮುಕ್ತಾಯಗೊಂಡಿತು. ಆಗ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಮೌಲಾನಾ ಮಹಮದಾಲಿ ಬಿಜಾಪುರ ಜೈಲಿನಲ್ಲಿದ್ದರು. ಅವರ ಬಿಡುಗಡೆ ಆದಮೇಲೆ ಕೌಜಲಗಿ ಶ್ರೀನಿವಾಸರಾಯರು ಹೊರಗೆ ಬಂದರು. ಅವರು ಹೊರಗೆ ಬಂದ ಮೇಲೆ ಬಿಜಾಪುರದಲ್ಲಿ ಪ್ರಾಂತೀಯ ಪರಿಷತ್ತು ನಡೆಯಿತು. ಅದಕ್ಕೆ ಶ್ರೀ ಶ್ರೀನಿವಾಸರಾವ ಕೌಜಲಗಿಯವರೇ ಸ್ವಾಗತಾಧ್ಯಕ್ಷರು. ಅಧ್ಯಕ್ಷರು ಚಕ್ರವರ್ತಿ ರಾಜಗೋಪಾಲಾಚಾರ್ಯರು. 1924 ಡಿಸೆಂಬರ್‌ನಲ್ಲಿ ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ನಡೆಯಿತು. ಕಾಂಗ್ರೆಸ್ಸಿನ ಇತಿಹಾಸ ಬರೆದ ಸುಪ್ರಸಿದ್ಧ ಇತಿಹಾಸಜ್ಞ ಲೇಖಕ, ವಿಮರ್ಶಕ, ಕಾಂಗ್ರೆಸ್ ಅಧ್ಯಕ್ಷ ಆದ ಡಾ. ಪಟ್ಟಾಭಿ ಸೀತಾರಾಮಯ್ಯನವರು ತಮ್ಮ ರಾಷ್ಟ್ರೀಯ ಕಾಂಗ್ರೆಸ್ಸಿನ ಇತಿಹಾಸ ಎಂಬ ಪುಸ್ತಕದಲ್ಲಿ ಬೆಳಗಾವಿಯ ಕಾಂಗ್ರೆಸ್ ಬಗ್ಗೆ ಹೀಗೆ ಬರೆದಿದ್ದಾರೆ:

"ಅಸಹಕಾರದ ಇತಿಹಾಸದಲ್ಲಿ ಬೆಳಗಾಂವಿಯ ಕಾಂಗ್ರೆಸ್ ಒಂದು ಮುಖ್ಯ ಘಟ್ಟ. ಗಾಂಧೀವಾದದ ಬಹಿಷ್ಕಾರ ಪದ್ಧತಿ ವಿರುದ್ಧ ನಿಲ್ಲಬೇಕೆ ಅಥವಾ ಏನಾದರೂ ಒಪ್ಪಂದ ಮಾಡಿಕೊಂಡು, ತಮ್ಮ ಭೇದಗಳನ್ನು ಪಕ್ಕಕ್ಕೆ ಸರಿಸಬೇಕೇ? ಹಾಗೆ ಒಪ್ಪಂದ ಮಾಡಿಸಬೇಕು ಎಂದರೆ ಅಂಥ ಒಪ್ಪಂದವನ್ನು ಮಾಡಿಸಬಲ್ಲ ಸಮರ್ಥರು ಗಾಂಧೀಜಿ ಒಬ್ಬರೇ. ಬೇರೆ ಯಾರೂ ಇರಲಿಲ್ಲ. ಅವರಿಗಿಂತ ಸಮರ್ಥರು ಯಾರು ಈ ಕೆಲಸಕ್ಕೆ, ಇತ್ತ ಸವಿನಯ ಶಾಸನಭಂಗವನ್ನು ನಿಲ್ಲಿಸಲೂ ಬೇಕು, ಅತ್ತ ಸತ್ಯಾಗ್ರಹಿ ಅನುಯಾಯಿಗಳಿಗೆ ಮನಸ್ಸು ಕಹಿ ಆಗಲೂಬಾರದು. ಅದನ್ನು ಮಾಡಲು ಕೇವಲ ಗಾಂಧೀಜಿಗೆ ಮಾತ್ರವೇ ಸಾಧ್ಯ. ಶಾಸನ ಸಭಾಪ್ರವೇಶವನ್ನು ವಿರೋಧಿಸಲೂ ಬೇಕು. ಆದರೆ ಸ್ವರಾಜ್ಯ ಪಕ್ಷಕ್ಕೆ ಸ್ವಲ್ಪವೂ ಗಾಸಿ ಆಗಲೂಬಾರದು. ಯಾವುದಾದರೂ ಮಹಾಕಾರ್ಯಕ್ರಮವನ್ನು ಉಪಸಂಹರಿಸಲೂ ಮಹಾಪುರುಷರೇ ಬೇಕು. ಬೇರೆ ಯಾರಿಗೂ ಸಾಧ್ಯ ಅಲ್ಲ. ಆದ್ದರಿಂದ ಬೆಳಗಾವಿ ಕಾಂಗ್ರೆಸ್ಸಿಗೆ ಗಾಂಧೀಜಿ ಅಧ್ಯಕ್ಷರಾದುದು ಆ ಕಾಲದ ದೃಷ್ಟಿಯಿಂದ ಅತ್ಯಂತ ಯೋಗ್ಯ.ಬೆಳಗಾಂವಿಯ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿಯ ಅಧ್ಯಕ್ಷಭಾಷಣ ಪುಟ್ಟದ್ದು. ಅದನ್ನು ಸಭೆಗೆ ಮೊದಲೇ ಹಂಚಿಬಿಟ್ಟರು. ಅದರ ಸಾರಾಂಶವನ್ನು ಮಾತ್ರ ಬಾಯಲ್ಲಿ ಹೇಳಿದರು ಗಾಂಧೀಜಿ. ಸುಮಾರು ಅರ್ಧ ಘಂಟೆ ಹಿಡಿಸಿತು ಅಧ್ಯಕ್ಷ ಭಾಷಣಕ್ಕೆ. ಸ್ವಾಗತಾಧ್ಯಕ್ಷರಾದ ಗಂಗಾಧರರಾಯರಿಗೂ ಗಾಂಧೀಜಿ ಮೊದಲೇ ತಿಳಿಸಿದ್ದರು. ಅದರಂತೆ ಅವರ ಭಾಷಣವೂ ಹತ್ತೇ ನಿಮಿಷದಲ್ಲಿ ಮುಗಿಯಿತು. ಮೊದಲೆ ಪ್ರಕಟಿಸಿದ್ದಂತೆ ಕಾರ್ಯಕ್ರಮಗಳು ಕ್ಲುಪ್ತಕಾಲಕ್ಕೆ ಸರಿಯಾಗಿ ನೆರವೇರಿದವು. ಕಾಲಕ್ಲುಪ್ತತೆಯನ್ನು ಬೆಳಗಾವಿಯಲ್ಲಿ ಅಪೂರ್ವ ರೀತಿಯಲ್ಲಿ ಸಾಧಿಸಲಾಯಿತು.

ಅಪರಿವರ್ತನವಾದಿಗಳ ಸಭೆ (21-12-1924)

ಅಪರಿವರ್ತನವಾದಿಗಳ ಸಭೆ ಒಂದು ನಡೆಯಿತು ಬೆಳಗಾಂವಿಯಲ್ಲಿ. ಚರ್ಚೆ ನಡೆದವು. ಗಾಂಧೀಜಿಯ ಭಾಷಣ ಬಹಳ ಹೃದಯಸ್ಪರ್ಶಿ ಆಗಿತ್ತು. ಸ್ವತಃ ಸ್ವಭಾವದಿಂದ ಅವರು ಯಾವತ್ತೂ ಅಪರಿವರ್ತನವಾದಿಗಳೆ; ಶಾಸನ ಸಭೆಗಳಲ್ಲಿ ತಮಗೆ ರುಚಿ ಇಲ್ಲ ಎಂದರು. ಅದಕ್ಕೆ ಬದಲು ಅಷ್ಟೇ ಹುರುಪಿನ ಕಾರ್ಯಕ್ರಮ ಎಂದರೆ ಚರಖಾ, ಹಿಂದೂ ಮುಸ್ಲಿಂ ಐಕ್ಯ. ಅಸ್ಪೃಶ್ಯತಾ ನಿವಾರಣೆ ಎನ್ನಬೇಕು. ದೇಶಕ್ಕೆ ಉಪಯುಕ್ತವಾದ ಇನ್ನೂ ಎಷ್ಟೋ ಕಾರ್ಯಕ್ರಮಗಳನ್ನು ತಾವು ಊಹಿಸಬಹುದು. ಅವು ಎಲ್ಲವೂ ಸ್ವರಾಜ್ಯಕ್ಕೆ ಅನಿವಾರ್ಯ ಅಲ್ಲ.

ಮುಂದುವರಿಯುವುದು...



ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

– ಇಂದಿರಾ ಕೃಷ್ಣಪ್ಪ,

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಪಾಪಮ್ಮ ಸತ್ಯಪ್ಪ

ಪಾಪಮ್ಮ ಸತ್ಯಪ್ಪ ದಂಪತಿಗಳು ಗಾಂಧಿ ಅವರ ಭಾಷಣ, ಮತ್ತು ಸ್ಥಳೀಯ ಕಾಂಗ್ರೆಸ್ ಪಕ್ಷದ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಹೋರಾಟಕ್ಕಾಗಿ ಹೋರಾಡಿದವರಾಗಿದ್ದಾರೆ. ಗ್ರಾಮಗಳಲ್ಲಿ ಶಿಬಿರಗಳ ಆಯೋಜನೆ, ದವಸ ಧಾನ್ಯ ಸಂಗ್ರಹಣೆ, ಗ್ರಾಮಗಳಲ್ಲಿ ಧ್ವಜಾರೋಹಣ, ಅರಣ್ಯ ಸತ್ಯಾಗ್ರಹ, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಪಾಲ್ಗೊಂಡಿದ್ದಾರೆ. ಇದರೊಂದಿಗೆ, ಅಂಚೆ ಪಟ್ಟಿಗೆ, ದೂರವಾಣಿ ಬೂತ್ ಧ್ವಂಸ, ರಸ್ತೆ – ಸೇತುವೆ ಧ್ವಂಸದಂಥಹ ಭೂಗತ ಕ್ರಾಂತಿಕಾರಿ ಹೋರಾಟವನ್ನು ದಂಪತಿಗಳು ನಡೆಸಿದ್ದರು. 1938 – 39ರಲ್ಲಿ ಪೋಲಿಸರಿಂದ ಲಾಠಿ ರುಚಿ ತಿಂದು, ಚಿಕ್ಕಮಗಳೂರು ಕಾಡಿಗೆ ಸ್ಥಳಾತರಗೊಳ್ಳುವ ಶಿಕ್ಷೆ ಅನುಭವಿಸಿದ್ದರು.

ಬಸಮ್ಮ ಬಸವಣ್ಣಪ್ಪ ಗೌಡ

ಬಸಮ್ಮ ಅವರು 1932ರ ಕರ ನಿರಾಕರಣೆ ಚಳುವಳಿಯಲ್ಲಿ ಗ್ರಾಮದ ಮಹಿಳೆಯರೊಂದಿಗೆ ಪಾಲ್ಗೊಂಡರು. ಅದರಿಂದಾಗಿ ಬಂಧಿತರಾಗಿ ಯರವಾಡಾ ಜೈಲಿನಲ್ಲಿ ಆರು ತಿಂಗಳ ಶಿಕ್ಷೆಗೆ ಗುರಿಯಾದರು. ನಂತರದಲ್ಲಿ ಸಿದ್ಧಾಪುರದ ಅರಣ್ಯ ಸತ್ಯಾಗ್ರಹ, ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಪುನಃ ಸೆರೆಮನೆ ಶಿಕ್ಷೆಗೆ ಒಳಗಾಗಿದ್ದರು. ಜೈಲಿನಿಂದ ಬಿಡುಗಡೆಗೊಂಡು ಬಸಮ್ಮ ಹಿಂತಿರುಗಿದಾಗ, ಪತಿ ಅಕಾಲಿಕವಾಗಿ ನಿಧನರಾಗಿದ್ದರು.

ಹೀರಮ್ಮ ತೋಟಪ್ಪ

ಸಿದ್ಧಾಪುರದಲ್ಲಿ 1932 – 33ರ ಕರ ನಿರಾಕಣೆ ಚಳುವಳಿಯಲ್ಲಿ ಭಾಗವಹಿಸಿ ಜೈಲು ಶಿಕ್ಷೆಗೆ ಒಳಪಟ್ಟರು. ಯರವಾಡ ಜೈಲಿನಲ್ಲಿದ್ದು, ಹಿಂತಿರುಗಿದ ಈರಮ್ಮ, ರಚನಾತ್ಮಕ ಕಾರ್ಯದಲ್ಲಿ ತೊಡಗಿಕೊಂಡರು.

ಕೃಷ್ಣಾಬಾಯಿ ಪಂಜೇಕರ್

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದ ಕೃಷ್ಣಬಾಯಿ ಅವರೂ ಬಾಲ್ಯವಿವಾಹಕ್ಕೆ ಒಳಪಟ್ಟವರು. ಬಾಲಕಿಗೆ 11ವರ್ಷವಿದ್ದಾಗಲೇ ವಿವಾಹ; ಆರು ತಿಂಗಳಲ್ಲೇ ವೈಧ್ಯವ್ಯ. ಪುಟ್ಟಬಾಲಕಿಯ ಈ ದುರವಸ್ಥೆಗೆ ಅಣ್ಣನ ಸಹಾನೂಭೂತಿಯಿಂದ ಧಾರವಾಡದಲ್ಲಿ ಶಾಲೆಗೆ ಸೇರಿಸಿದರು. ಶಿಕ್ಷಣ ಮುಂದುವರಿದು, ಶಿಕ್ಷಕ ತರಬೇತಿಯನ್ನು ಪಡೆದರು. ಅಲ್ಲಿ ಪರಿಚಿತರಾದ ವಿಧುರ, ಪಂಜೇಕರ್ ಅವರನ್ನು ವಿವಾಹವಾದರು. ದಂಪತಿಗಳು ಮಕ್ಕಳಿಗಾಗಿ ಪ್ರಾಥಮಿಕ ಶಾಲೆ, ಮಹಿಳೆಯರಿಗಾಗಿ, ಮಹಿಳಾ ಸಮಾಜ ಸ್ಥಾಪಿಸಿ, ಮಕ್ಕಳ ಶಿಕ್ಷಣ, ಮಹಿಳಾ ಸಂಘಟನೆಯ ಕಾರ್ಯದಲ್ಲಿ ತೊಡಗಿದರು. ರಾಷ್ಟ್ರೀಯ ಚಳುವಳಿಯ ಕರೆಗೆ ಓಗೊಟ್ಟು ಸೇಂದಿ ನಿಷೇದ ಚಳುವಳಿ, ಪಿಕೆಟಿಂಗ್, ಜನ ಸಂಘಟನೆಯಲ್ಲಿ ತೊಡಗಿದ್ದ ಕೃಷ್ಣಬಾಯಿಯನ್ನು ಬಂಧಿಸಿ, ಯರವಾಡ ಜೈಲಿನಲ್ಲಿರಿಸಲಾಯಿತು. ಅಂದಿನ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡಿದ್ದ ಇವರನ್ನು 1940ರಲ್ಲಿ ಅಧ್ಯಕ್ಷರನ್ನಾಗಿ ಮಾಡಲಾಯಿತು. ಸ್ವಾತಂತ್ರ್ಯ ಪೂರ್ವದಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನ ನಿರ್ವಹಿಸಿದ ಪ್ರಥಮ ಮಹಿಳೆ ಇವರೆನ್ನಬಹುದು. ಎಡಬಿಡದ ವಿಮೋಚನಾ ಹೋರಾಟದಿಂದ, ಪುನಃ ಇವರು 1941 ಮತ್ತು 1942ರಲ್ಲಿಯೂ ಬಂಧನಕ್ಕೊಳಗಾಗಿ ಸೆರೆಮನೆ ಶಿಕ್ಷೆ ಅನುಭವಿಸಿದವರಾಗಿದ್ದಾರೆ. ನಿರಂತರ ಶ್ರಮದಿಂದಾಗಿ ಅನಾರೋಗ್ಯ ಪೀಡಿತರಾದ ಕೃಷ್ಣಬಾಯಿ 1950ರಲ್ಲಿ ನಿಧನರಾದರು.

ಮುಂದುವರೆಯುವುದು...

WEAVES OF PRIDE



In Dakshina Kannada Mamatha Rai's bid to revive the Udupi saree has created livelihoods in the handloom sector and infused weavers with a sense of dignity."Getting the GI tag was just another step towards reinstating Udupi saree's authenticity," says 49 year old Mamatha Rai, a former lecturer turned handloom entrepreneur from Karnataka. Mamatha and her husband, Chikkappa Shetty, are striving towards making handloom more economically viable as an occupation, in addition to restoring the dignity of labour once associated with the work. In this regard, they have floated Kadike Trust to support weaving communities in this region. The biggest part of Mamatha's effort has gone into working with members of Nekara community - traditional weavers in Dakshina Kannada and Udupt - to keep the practice of weaving the Udupi saree alive. The steady rattle of the looms at the Talipady Handloom Weavers Cooperative Society in Dakshina Kannada's Kinnigoli is a testament to her efforts. The next order of business for Mamatha was to go door-to-door, looking for weavers in the community and convincing them to take up the profession they had given up. The challenge was to provide them with a stable income but more importantly, reinstate some pride in weaving this uniques saree. As part of ther pitch, Mamatha told community members what she herself fervently believed, that "handloom weaving was the best profession and a sustinable one." The other assurance; she would help create market for the Udupi saree. Part of those early outreach efforts saw Mamatha put up a Udupi Saree stall in fairs and weekly markets accorss the district, as well as at cultural events. The marketing conducted by them is also working. "We have a lot of demand for sarees that we are not able to meet now." he says. In all, the society sees an annual turnoer of Rs. 12 Lakh from weaving related activities. "Rehabilitating a ommunity who were always engaged in work is tough. but Mamathma and Chikkappa have done it. They are a moral force, boosting morale," says Santosh Koulagi of Melkote's Janapada Khadi Centre

Courtacy : Deccan Herald, 1.1.2021, Collection by : Shyamala S.M. (Retd. Teacher)

ಗಾಂಧೀಜಿಯ ಕೊನೆಯ ಉಪವಾಸಗಳು

(ಲೂಯಿ ಫಿಶರ್ ಮಹಾತ್ಮ ಗಾಂಧಿ, ಜಗತ್ತಿಗೆ ಅವರ ಸಂದೇಶ ಕೃತಿಯಿಂದ ಆಯ್ದ ಭಾಗಗಳು)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಿರಾಶ್ರಿತ ಶಿಬಿರಗಳಿಗೆ ಹೋಗಿ ಚೊಕ್ಕಟವಾಗಿರಬೇಕೆಂದೂ, ನೂಲಬೇಕೆಂದೂ ಉಪದೇಶಿಸಿದರು. ಹಿಂದುಗಳೇ ಹೆಚ್ಚಾಗಿ ಸೇರುತ್ತಿದ್ದ ಪ್ರಾರ್ಥನಾ ಸಭೆಗಳಲ್ಲಿ ಪ್ರತಿ ಸಾಯಂಕಾಲ, "ಕುರಾನಿನ ಕೆಲವು ಶ್ಲೋಕಗಳನ್ನು ಓದಿದರೆ ಯಾರಾದರೂ ಆಕ್ಷೇಪಣೆಯಿದೆಯೇ?" ಎಂದು ಕೇಳುತ್ತಿದ್ದರು. ಸಾಧಾರಣವಾಗಿ ಒಬ್ಬರಿಬ್ಬರು ಆಕ್ಷೇಪಿಸುತ್ತಿದ್ದರು. ಆಕ್ಷೇಪಣೆಯಿದ್ದರೂ ಓದುವಾಗ ಸುಮ್ಮನಿರುವರೇ? ಇಲ್ಲ. ಅನಂತರ ಶ್ಲೋಕಗಳನ್ನೊದುತ್ತಿದ್ದರು. ಇದು ಸೌಹಾರ್ದ ಶಿಸ್ತುಗಳ ಜೀವಂತ ಪಾಠವಾಗುತ್ತಿತ್ತು. ಎಲ್ಲರೂ ಎಲ್ಲರ ಅಭಿಪ್ರಾಯವನ್ನು ಒಪ್ಪುವಂತಿಲ್ಲದಿದ್ದರೂ ಸಮಾಧಾನದಿಂದಿರಬಹುದು.

ಈ ನಡುವೆ ಆತನು ರಾಜಕೀಯ ಭವಿಷ್ಯದ ಕಡೆ ಗಮನ ಕೊಡದೆ ಇರಲಿಲ್ಲ. 1947ರ ಡಿಸೆಂಬರ್ ಮೊದಲ ಪಕ್ಷದಲ್ಲಿ ಸರ್ಕಾರಕ್ಕೆ ಸೇರದ, ಹರಿಜನೋದ್ಧಾರ, ನೂಲುವುದು, ಮೂಲ ಶಿಕ್ಷಣ, ಪ್ರಕೃತಿ ಚಿಕಿತ್ಸೆ ಮುಂತಾದುವುಗಳಲ್ಲಿ ಸಹೋದ್ಯೋಗಿಗಳಾಗಿದ್ದವರನ್ನು ಕರೆದು ಎಲ್ಲರೂ ಸೇರಿ ರಚನಾತ್ಮಕ ಸಂಘವನ್ನು ರಚಿಸಬೇಕೆಂದು ಹೇಳಿದರು. ಅಧಿಕಾರ ಲಾಲಸೆಯನ್ನು ಬಿಟ್ಟು ಮತದಾರರಿಗೆ ನಿಸ್ವಾರ್ಥ ಸೇವೆ ಸಲ್ಲಿಸಬೇಕು. ಕಾಂಗ್ರೆಸ್ಸಿನ ಮುಂದಾಳತ್ವದಲ್ಲಿ ಸಾಧ್ಯವಿಲ್ಲದೆ, ಸರ್ಕಾರವನ್ನು ಸರಿಯಾದ ದಾರಿಯಲ್ಲಿ ನಡೆಸುವ ಹೊಸ ರಥವನ್ನು ಕಟ್ಟಬೇಕೆಂದು ಉದ್ದೇಶಿಸಿದರು. ಒಬ್ಬಾತ, " ಈ ರಚನಾತ್ಮಕ ಕಾರ್ಯವನ್ನು ಕಾಂಗ್ರೆಸ್ಸಾಗಲಿ, ಸರ್ಕಾರವಾಗಲಿ, ಏಕೆ ಮಾಡಕೂಡದು?" ಎಂದು ಕೇಳಿದನು. "ಕಾಂಗ್ರೆಸ್ಸಿಗರಿಗೆ ರಚನಾತ್ಮಕ ಕಾರ್ಯದಲ್ಲಿ ಸಾಕಷ್ಟು ಆಸಕ್ತಿಯಿಲ್ಲ. ನಮ್ಮ ಕನಸಿನ ಸಮಾಜ ಇಂದಿನ ಕಾಂಗ್ರೆಸ್ ಪಕ್ಷದ ಸಹಾಯದಿಂದ ಬರುವುದೆಂಬ ಆಸೆಯನ್ನು ನಾವು ಬಿಡಬೇಕು. ಈಗಿರುವ ನೀತಿ ಭ್ರಷ್ಟತೆ ನನ್ನ ಧೈರ್ಯಗಡಿಸಿದೆ. ಓಟುಗಳಿಂದ ಅಧಿಕಾರ ದೊರೆಯುವುದೆಂದು ಎಲ್ಲರೂ ಅವುಗಳಿಗಾಗಿ ಹಾತೊರೆಯುತ್ತಿದ್ದಾರೆ.," ಎಂದು ಗಾಂಧಿ ಉತ್ತರವಿತ್ತನು. ಕೃಪಲಾನಿ ತೊಂದರೆಯನ್ನು, "ಅಧಿಕಾರವರ್ಗ, ನೀತಿ ಭ್ರಷ್ಟತೆ, ಲಂಚಕೋರತನ, ಕಾಳಸಂತೆ, ದುರ್ಲಾಭದಾಸೆ," ಎಂದು ವಿವರಿಸಿದ್ದಾರೆ.

ಗಾಂಧೀಜಿಗೆ ಕಾಂಗ್ರೆಸ್ ಮತ್ತು ಸರ್ಕಾರಗಳಲ್ಲಿ ಇಷ್ಟು ನಿರಾಸೆಯುಂಟಾಗಿದ್ದರೂ ಆತನಿನ್ನೂ ಇಂಡಿಯಾದ ರಾಜಕೀಯದ, ನೆಹ್ರು ಮುಂತಾದ ಮಂತ್ರಿಗಳ ಊರುಗೋಲಾಗಿದ್ದನು. ಆದರೆ ಆತನ ಕಾರ್ಯಕ್ರಮಕ್ಕೆ ವಿಸ್ತಾರ ಕ್ಷೇತ್ರ ಬೇಕಾಗಿತ್ತು. ಪಂಜಾಬು ಪಾಕಿಸ್ತಾನಗಳನ್ನು ಸಮಾಧಾನಕ್ಕೆ ತರಬೇಕೆಂದಿದ್ದನು. ಪಾಕಿಸ್ತಾನದ ಪ್ರಯಾಣಕ್ಕೆ ಸಿದ್ಧತೆಗಳಾಗುತ್ತಿದ್ದವು. ಆದರೆ ದೆಹಲಿಯನ್ನು ಬಿಟ್ಟು ಹೋಗಲು ಆತನು ಹಿಂಜರಿಯುತ್ತಿದ್ದನು. ಅಲ್ಲಲ್ಲಿ ಹಿಂಸಾಕೃತ್ಯಗಳು ನಡೆಯುತ್ತಲೇ ಇದ್ದವು. ಪರಿಸ್ಥಿತಿ ಉತ್ತಮವಾಯಿತೆಂದು ತಿಳಿದು ಒಬ್ಬ ಮುಸ್ಲಿಂ ವರ್ತಕ ಅಂಗಡಿಯ ಬಾಗಿಲನ್ನು ತೆಗೆದನು. ಗುಂಡೇಟನಿಂದ ಸತ್ತನು.

ಮುಂದುವರಿಯುವುದು..

ಸಂಗ್ರಹ : ನಳಿನಾ ಡಿ – ಪತ್ರಕರ್ತೆ, ಕವಯಿತ್ರಿ



ಸರ್ವಧರ್ಮ ಸಮನ್ವಯತೆ

– ಡಾ. ಎಚ್.ಎಸ್. ದೊರೆಸ್ವಾಮಿ

ಈಗ ಸರ್ವಾಧಿಕಾರಿಯ ಲಕ್ಷಣ ಕಾಣಿಸಿಕೊಳ್ಳುತ್ತಿದೆ

ಗಾಂಧೀಜಿ ಹೂಡಿದ ಸತತ ಹೋರಾಟಗಳು, ದೇಶಾದ್ಯಂತ ನಡೆದ ಸ್ವಾತಂತ್ರ್ಯ ಚಳವಳಿಗಳ ಕಾರಣ ಇಂಗ್ಲೀಷ್‌ರು ಭಾರತ ಬಿಟ್ಟು ಹೋದರು. ಆದರೆ ಸ್ವಾತಂತ್ರ ನಂತರದ ಕಾಲದಲ್ಲಿ, ನಿರ್ದಿಷ್ಟವಾಗಿ ಇಂದಿರಾಗಾಂಧಿ ಪ್ರಧಾನಿಯಾಗಿದ್ದಾಗ, ಆಡಳಿತದಲ್ಲಿ ಭ್ರಷ್ಟಾಚಾರ ಬೆಳೆಯಲು ಅವಕಾಶ ಮಾಡಿಕೊಟ್ಟರು. ಸರ್ವಾಧಿಕಾರಿ ಧೋರಣೆಯ ಇಂದಿರಾರನ್ನು ಅಂಕೆಯಲ್ಲಿರಿಸಲು ಕಾಂಗ್ರೆಸ್ ಹೈಕಮಾಂಡ್ ನಡೆಸಿದ ಪ್ರಯತ್ನಗಳು ವಿಫಲವಾದವು. ಇಂದಿರಾ ಗಾಂಧಿಯವರ ಹಿಡಿತ ಎಷ್ಟರಮಟ್ಟಿಗೆ ಬೆಳೆಯಿತೆಂದರೆ, ರಾಷ್ಟ್ರಪತಿ ಪದವಿಗೆ ಕಾಂಗ್ರೆಸ್ಸಿನ ಅಧಿಕೃತ ಅಭ್ಯರ್ಥಿ ಸಂಜೀವರೆಡ್ಡಿಯವರ ವಿರುದ್ಧವೇ ತನ್ನ ಅಭ್ಯರ್ಥಿ ವಿವಿ ಗಿರಿಯವರನ್ನು ನಿಲ್ಲಿಸಿ, ತನ್ನದೇ ಅಭ್ಯರ್ಥಿ ಗೆದ್ದು ಬರುವಂತೆ ನೋಡಿಕೊಂಡರು. ಪರಿಣಾಮವಾಗಿ ಕಾಂಗ್ರೆಸ್ ಸಂಸ್ಥೆ ಒಡೆದು ಸಂಸ್ಥಾ ಕಾಂಗ್ರೆಸ್, ಇಂದಿರಾ ಕಾಂಗ್ರೆಸ್‌ಗಳಾಗಿ ಇಬ್ಭಾಗವಾಯಿತು. ಇಂದಿರಾಗಾಂಧಿ ಚುನಾವಣೆಯಲ್ಲಿ ಭ್ರಷ್ಟಾಚಾರ ಎಸಗಿದ್ದಾರೆಂದು ನ್ಯಾಯಾಲಯ ತೀರ್ಮಾನಿಸಿತು, ಕೆಲವು ನಿರ್ಬಂಧಗಳನ್ನು ವಿಧಿಸಿತು. ಇಂದಿರಾ ಅವರ ಭ್ರಷ್ಟಾಚಾರದ ವಿರುದ್ಧ ಜಯಪ್ರಕಾಶ್ ನಾರಾಯಣರು ಭಾರತದಾದ್ಯಂತ ಪ್ರವಾಸ ಮಾಡಿ, ಜನ ಜಾಗೃತಿ ಮೂಡಿಸಿದರು. ಇಂದಿರಾಗಾಂಧಿ ಅವರಿಗೆ ಜನ ತಮ್ಮ ವಿರುದ್ಧ ತಿರುಗಿಬೀಳಬಹುದೆಂಬ ಭಯ ಆವರಿಸಿದಂತಾಗಿ ತುರ್ತು ಪರಿಸ್ಥಿತಿ ಘೋಷಿಸಿದರು. ಜಯಪ್ರಕಾಶ್, ಮೊರಾರ್ಜಿ ದೇಸಾಯಿ, ಎಚ್. ಎಂ. ಪಟೇಲ್, ದಂಡವತೆ, ಅಶೋಕ್ ಮೆಹ್ತಾ, ಚಂದ್ರಶೇಖರ್ ಮುಂತಾದವರಲ್ಲದೆ, ಅಂದಿನ ಜನಸಂಘದ ವಾಜಪೇಯಿ, ಅದ್ವಾನಿ ಮುಂತಾದವರನ್ನು ಸೆರೆಮನೆಗೆ ಅಟ್ಟಿದರು. ಸೀತಾರಾಮ ಯೆಚೂರಿ, ಪ್ರಕಾಶ್ ಕಾರಟ್, ಪಿಣರಾಯಿ ವಿಜಯನ್ ಮುಂತಾದ ಕಮ್ಯುನಿಸ್ಟ್ ಕಾರ್ಯಕರ್ತರನ್ನೂ ಜೈಲಿಗೆ ಹಾಕಲಾಯ್ತು. ಸರ್ವೋದಯ ಕಾರ್ಯಕರ್ತರು, ವಿರೋಧ ಪಕ್ಷಗಳ ಕಾರ್ಯಕರ್ತರು, ಇನ್ನಿತರೆ ಚಳವಳಿಗಾರರನ್ನೊಳಗೊಂಡ ಒಂದು ಲಕ್ಷದಷ್ಟು ಜನರು ಜೈಲು ಪಾಲಾದರು. ತನ್ನ ವಿರುದ್ಧ ದನಿಯೆತ್ತಿದ ಆಡಳಿತಾರೂಡ ಕಾಂಗ್ರೆಸ್ಸಿನ ಸಾವಿರಾರು ಕಾರ್ಯಕರ್ತರನ್ನೂ ಸೆರೆಗೆ ದೂಡಿದರು. ಅನಿರ್ದಿಷ್ಟ ಕಾಲ ಇವರನ್ನೆಲ್ಲ ಸೆರೆಮನೆಯಲ್ಲಿ ಇಡಲಾಯಿತು.

ಮುಂದುವರಿಯುವುದು...



ನವ ಭಾರತ ನಿರ್ಮಾಪಕರು : ಲೋಕ ಮಾನ್ಯರು : ಶತದಿನ ಸಂಸ್ಮರಣೆ

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.

ಹಾವೇರಿ ಜಿಲ್ಲೆಯಲ್ಲಿ ಲೋಕಮಾನ್ಯರು ಕೇಸರಿ ಪತ್ರಿಕೆ, ಚಿತ್ರಮಯ ಜಗತ್ (ಮರಾಠಿ) ಛತ್ರಪತಿಯ ಇತಿಹಾಸ ಇತ್ಯಾದಿ ಪುಸ್ತಕಗಳನ್ನು, ಗುತ್ತಲದ ಗಣ್ಯ ನಾಯಕರುಗಳು ತರಿಸಿ ಜನರಿಗೆ ಓದಲಿಕ್ಕೆ ಹಚ್ಚುತ್ತಿದ್ದರು. ಇದರಿಂದಾಗಿಯೇ, ರಾಷ್ಟ್ರೀಯ ಪ್ರಜ್ಞೆ ಒಡಮೂಡಲಿಕ್ಕೆ ಆರಂಭವಾಯಿತು ಎನ್ನುತ್ತಾರೆ ದಿನಕರ ಗೋಪಾಳ ವಾಟವೆ ಅವರು. "ನನ್ನ ಗುರುಗಳಾದ, ನಾಡಿಗೇರ ಅವರು ಸಹ ಕೇಸರಿ ಪತ್ರಿಕೆಯನ್ನು ತರಿಸಿ ಓದಿ ನಮಗೂ ಓದಲು ಹಚ್ಚುತ್ತಿದ್ದರು." ಎಂದು ಬಾಹು ಅಕ್ಕರೆಯಿಂದ ಬರೆದುಕೊಂಡಿದ್ದಾರೆ. ಹಾವೇರಿ ತಾಲ್ಲೂಕಿನ ಅಗಡಿಯಲ್ಲಿನ ಶ್ರೀರಾಮ ವಿಷ್ಣುಪಂತ ಟೆಂಬೆ ಅವರ ಇಡೀ ಮನೆತನವೇ ದೇಶ ಸೇವಕರದ್ದಾಗಿತ್ತು. ಇವರ ಅಜ್ಜ ಹರಿಪಂತ ಟೆಂಬೆ ಅವರು ಕೇಸರಿ ಪತ್ರಿಕೆ ತರಿಸಿ ಓದುತ್ತಿದ್ದರು. ಮತ್ತು ಟಿಳಕರಿಂದಲೇ ಪ್ರಭಾವಿತರಾಗಿ, 'ಪೈಸಾಫಂಡ್' ಕಾರ್ಯದಲ್ಲಿ ತೊಡಗಿದ್ದರು. ಮತ್ತು ಇದರಿಂದ ಸಂಗ್ರಹವಾದ ಹಣದಿಂದ ವಯಸ್ಕರಿಗೆ ಅಕ್ಷರ ಕಲಿಸಲು ಆರಂಭಿಸಿದ್ದರು. ಬೆಳಗಾವಿಯ ಗೋವಿಂದರಾವ್ ಅವರು ಟಿಳಕರ ಪ್ರಭಾವದಿಂದ 1907ರಲ್ಲಿ ರಾಷ್ಟ್ರೀಯ ಶಾಲೆಗಳನ್ನು ತೆರೆದರು ಮತ್ತು ಗಾಂಧಿ ಅವರ ಅಸಹಕಾರ ಚಳುವಳಿಗೆ ಕರೆ ನೀಡಿದಂತೆ, ಜನಜಾಗೃತಿ ಕಾರ್ಯವನ್ನು ಕೈಗೊಂಡರು ಟಿಳಕರ ನಿಧನರಾಗುವ ಸಂದರ್ಭದಲ್ಲಿ ಗಂಗಾಧರ ದೇಶಪಾಂಡೆ ಅವರೊಂದಿಗೆ, ಲೋಕಮಾನ್ಯರೊಂದಿಗೇಇದ್ದರು. ಇವುರ ಟೆಲಿಗ್ರಾಂ ಮೂಲಕ ಬೆಳಗಾವಿ ಟಿಳಕರ ನಿಧನದ ಸುದ್ದಿ ತಿಳಿಸಿದ್ದರು. ಮತ್ತು ಜನರು ದೈನಂದಿನ ವ್ಯವಹಾರಗಳನ್ನು ನಿಲ್ಲಿಸಿ, ಸಂತಾಪ ಮೆರವಣಿಗೆ ನಡೆಸಿದರು. ಹಾಗೂ ದಿ.01.08.1920ರಲ್ಲಿ ಅರ್ದೇಸರ ನೌರೋಜಿ ಅವರ ಅಧ್ಯಕ್ಷತೆಯಲ್ಲಿ ಶ್ರದ್ಧಾಂಜಲಿಯನ್ನು ಮಾಡಲಾಗಿತ್ತು. ಅಲ್ಲಿ ಜನರು ಕಿಕ್ಕಿರಿದು ತುಂಬಿದ್ದರು. 1920ರಿಂದಲೂ ಟಿಳಕರ ಪ್ರಭಾವದಿಂದ ಬೆಳಗಾವಿಯಲ್ಲಿ ಆರಂಭವಾದ ಸಾರ್ವಜನಿಕ ಗಣಪತಿ ಉತ್ಸವಗಳು ಪ್ರತಿವರ್ಷ ನಡೆಯುತ್ತಿದೆ ಎಂದು ಜೀವರಾವ್ ವೆಂಕಟೇಶ ಯಾಳಗಿ ಅವರ ಅಣ್ಣ ಗೋವಿಂದರಾಯರು ಸಾಮಾಜಿಕ ಸೇವೆಯನ್ನು ಸ್ಮರಿಸಿದ್ದಾರೆ.



ಗಂಗಾಧರ ದೇಶಪಾಂಡೆ ಅವರಿಂದ ಪ್ರಭಾವಿತರಾದ ಹುಕ್ಕೇರಿ ತಾಲ್ಲೂಕಿನ ಪಾಚಾಪುರ ಗ್ರಾಮದ ಬಾಳಾಜಿ ಯಮಾಜೀ ದೇಶಪಾಂಡೆ ಅವರು ಟಿಳಕರ ಪ್ರಭಾವ ಬೆಳಗಾವಿ, ನಿಪ್ಪಾಣಿ, ಅಥಣಿ, ಚಿಕ್ಕೋಡಿಯುಲ್ಲಿ ಹೇಗಾಗಿತ್ತು ಎಂಬುದನ್ನು ದಾಖಲಿಸಿದ್ದಾರೆ. 1908 ರಿಂದಲೇ ಟಿಳಕರಿಂದ ಪ್ರೇರಿತರಾಗಿ ಸಾರ್ವಜನಿಕ ಶಿವಾಜಿ ಉತ್ಸವ, ಗಣಪತಿ ಉತ್ಸವವನ್ನು ಸ್ವಾತಂತ್ರ್ಯ ಚಳುವಳಿಯಲ್ಲಿ ಮಂಚೂಣಿಯಲ್ಲಿರುವವರು ಆರಂಭಿಸಿದರು. ಪುಣೆಯಿಂದ ದತ್ತೋಪಂತ ಪಟವರ್ಧನರೆಂಬ ರಾಷ್ಟ್ರೀಯ ಕೀರ್ತನಕಾರರನ್ನು ಕರೆಯಿಸಿ, ಮರಾಠಿಯಲ್ಲಿ ಕೀರ್ತನಾ ಸಭೆಗಳನ್ನು ಆಯೋಜಿಸುತ್ತಿದ್ದರು. ಜನ ಉತ್ಸಾಹದಿಂದ ಭಾಗವಹಿಸುತ್ತಿದ್ದರು. 'ಕೇಸರಿ' ಪತ್ರಿಕೆ ಪ್ರಾರಂಭವಾದಾಗಿನಿಂದಲೂ, ಹಿರಿಯರು ಅದನ್ನು ತರಿಸಿ ಓದುತ್ತಿದ್ದರು. ಮತ್ತು ಜನ ಸೇರಿಸಿ, ಓದಿ ಹೇಳುತ್ತಿದ್ದರು. ಮರಾಠಿ ಭಾಷೆಯಲ್ಲಿದ್ದರೂ, ಅಷ್ಟಿಷ್ಟು ಭಾಗ ಅರ್ಥೈಸಿಕೊಳ್ಳುತ್ತಿದ್ದರು. ಅದಕ್ಕೆ ಮುಖ್ಯ ಕಾರಣ, ಲೋಕಮಾನ್ಯರೇ ಆಗಿದ್ದಾಗಿತ್ತು. ಟಿಳಕರು ಆರಂಬಿಸಿದ ಸ್ವದೇಶಿ ಕಾಜಿನ ಕಾರ್ಖಾನೆಗಾಗಿ, ಪೈಸಾಫಂಡ್ ಸಂಗ್ರಹವನ್ನು ನಮ್ಮೂರಲ್ಲೂ ಮಾಡಲಾಗಿತ್ತು ಎಂದಿದ್ದಾರೆ..

ಮುಂದುವರಿಯುವುದು...

ಮಹಿಳಾ ಚಳುವಳಿಯ ಮಾತೆ : ಸಾವಿತ್ರಿಬಾ ಪುಲೆ ಅವರ ಕಿರು ಪರಿಚಯ



- **13.1.1831** ಮಹಾರಾಷ್ಟ್ರದ ಸತಾರ ಜಿಲ್ಲೆಯ ವೈಗಾಂನ್‌ನಲ್ಲಿ ಜನನ
- **1840** ಜ್ಯೋತಿಬಾ ಪುಲೆ ಅವರೊಂದಿಗೆ ವಿವಾಹ
- **1841** ಮನೆಯಲ್ಲಿಯೇ ಶಿಕ್ಷಣ ಕಲಿಕೆ ಮತ್ತು ಮರಾಠಿ, ಇಂಗ್ಲೀಷ್, ಪಾರ್ಸಿ, ಸಂಸ್ಕೃತ ಕಲಿಕೆ
- **1847** ಅಹ್ಮದ್ ನಗರದಲ್ಲಿ ಶಿಕ್ಷಣ ತರಬೇತಿ
- **1848** ಪುಲೆಯವರೊಡಗೂಡಿ ಪುಣೆಯಲ್ಲಿ ಹೆಣ್ಣು ಮಕ್ಕಳಿಗಾಗಿ ಶಾಲೆ ಸ್ಥಾಪನೆ
- **1849** ಸತರಾ, ಪುಣೆ ಹಾಗೂ ಅಹ್ಮದ್‌ನಗರದಲ್ಲಿ ಮತ್ತಷ್ಟು ಶಾಲೆಗಳ ಸ್ಥಾಪನೆ ಮತ್ತು ದಲಿತರಿಗಾಗಿ ಶಾಲೆ ಸ್ಥಾಪನೆಗಾಗಿ ಪುಲೆ ದಂಪತಿಗಳಿಗೆ ಕುಟುಂಬ ಮತ್ತು ಸಾರ್ವಜನಿಕ ಬಹಿಷ್ಕಾರ
- **1852** ನಿಲ್ಲದ ಕಾಯಕ, ಮತ್ತೆರೆಡು ಶಾಲೆ ಆರಂಭ
- **16.11.1852** ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಶಿಕ್ಷಣ ಸೇವೆಗಾಗಿ ಪುಲೆ ದಂಪತಿಗಳಿಗೆ ಸನ್ಮಾನ
- **1854** ಸಾವಿತ್ರಿಬಾ ಪುಲೆ ಅವರ ಕವನ ಸಂಕಲನ 'ಕಾವ್ಯಪೂಲೆ' ಪ್ರಕಟಣೆ
- **1855** ಕೂಲಿ ಕಾರ್ಮಿಕರಿಗೆ ರಾತ್ರಿ ಶಾಲೆ ಆರಂಭ
- **1856** ಜ್ಯೋತಿಬಾ ಪುಲೆ ಅವರ ಭಾಷಣಗಳ ಸಂಗ್ರಹ ಮತ್ತು ಪುಸ್ತಕ ಪ್ರಕಟಣೆ
- **1863** ನಿರಾಶ್ರಿತ ಮಕ್ಕಳು & ವಿವಾಹ ಬಾಹಿರ ಸಂಬಂಧದಿಂದ ಜನಿಸಿದ ಮಕ್ಕಳಿಗೆ & ತಾಯಂದಿರಿಗಾಗಿ ಅನಾಥಾಲಯ ಆರಂಭಿಸಿದ್ದು
- **1868** ದಲಿತರಿಗಾಗಿ ಕುಡಿಯುವ ನೀರಿನ ಸೌಕರ್ಯ ಒದಗಿಸಿದ್ದು.
- **1873** ಸತ್ಯಶೋಧಕ ಸಮಾಜ ಸಂಸ್ಥೆ ಸ್ಥಾಪನೆಗೆ ಪತಿಯೊಂದಿಗೆ ಸಹಕಾರ
- **1874** ಬ್ರಾಹ್ಮಣ ವಿಧವೆ ಮಗ ಯಶವಂತನನ್ನು ಮಗನಾಗಿ ದತ್ತು ಸ್ವೀಕಾರ
- **1875–77** ಮಹಾರಾಷ್ಟ್ರದ ಪಶ್ಚಿಮ ಭಾಗದ ಬರಪೀಡಿದ ಪ್ರದೇಶದಲ್ಲಿ ಸತ್ಯಶೋಧಕ ಸಮಾಜದ ಕಾರ್ಯಕರ್ತರೊಂದಿಗೆ ಜನಸೇವೆ
- **28.11.1890** ಜ್ಯೋತಿಬಾಪುಲೆ–ಪತಿ ವಿಯೋಗ/ಅಂತಿಮ ಸಂಸ್ಕಾರ ಸ್ವತಃ ನೆರವೇರಿಸಿದ್ದು
- **1891** ಪುಲೆ ಅವರ ಲೇಖನಗಳ ಸಂಗ್ರಹದ ಪುಸ್ತಕ ಪ್ರಕಟಣೆ
- **1893** ಸತ್ಯಶೋಧಕ ಸಂಘದ ಅಧ್ಯಕ್ಷೆಯಾಗಿ ಆಯ್ಕೆ ಮತ್ತು ಸೇವೆ.
- **1896** ಬರ ಪೀಡಿತ ಪ್ರದೇಶದಲ್ಲಿ ಸಾಮಾಜಿಕ ಸೇವೆ
- **10.3.1897** ಪ್ಲೇಗ್ ಪೀಡಿತ ಪ್ರದೇಶದಲ್ಲಿ ಸೇವೆಯಲ್ಲಿದ್ದಾಗಲೇ ಪ್ಲೇಗ್‌ಗೆ ತುತ್ತಾಗಿ ಕಣ್ಮುಚ್ಚಿದ ಚೇತನ

ಸಂಗ್ರಹ : ಮಹೇಶ್, ಬೆಂಗಳೂರು

ಕನ್ನಡ ನೆಲ-ಜಲ-ಶಿಕ್ಷಣವನ್ನು ಸಮೃದ್ಧಿಗೊಳಿಸಿದ ಅಧಿಕೃತ ಗೊಳಿಸಿದ ಸರ್ಕಾರ ನೇಮಕಮಾಡಿದ ಸಮಿತಿಗಳ ವರದಿಗಳು

ಸಂಗ್ರಹ : ರುದ್ರಪ್ಪ ಹನಗವಾಡಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಕನ್ನಡ ನಾಡನ್ನು ಕಟ್ಟುವಲ್ಲಿ, ವಿವಿಧ ಚಳುವಳಿಗಳು ಬಹು ಮುಖ್ಯ ಪಾತ್ರವಹಿಸಿದಂತೆ ಸರ್ಕಾರ ನೇಮಿಸಿದ ಸಮಿತಿಗಳ ವರದಿಗಳು ಪ್ರಮುಖವಾಗಿವೆ. 1967ರ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ವರದಿಯ ಉಲ್ಲೇಖವಿದೆ. ಆದರೆ ವರದಿ ಲಭ್ಯವಿಲ್ಲ. ಹಲವು ವರದಿಗಳು ಗಾತ್ರದಲ್ಲಿ ದೊಡ್ಡದಾಗಿವೆ. ಕೆಲವು ಆಂಗ್ಲ ಭಾಷೆಯಲ್ಲಿವೆ. ಲಭ್ಯವಿರುವುದನ್ನು ಇಲ್ಲಿ ಸಂಗ್ರಹಿಸಲಾಗಿದೆ.




ಗೋಕಾಕ್ ಸಮಿತಿ ವರದಿ

ಸಂಸ್ಕೃತವನ್ನು ಪ್ರಥಮ ಭಾಷೆಗಳ ಪಟ್ಟಿಯಿಂದ ಕೈ ಬಿಡಬೇಕು ಮತ್ತು ಕನ್ನಡ ಭಾಷೆಯನ್ನು ಕನ್ನಡೇತರರು ಕಡ್ಡಾಯವಾಗಿ ಅಭ್ಯಾಸ ಮಾಡುವ ವ್ಯವಸ್ಥೆ ಮಾಡಬೇಕೆಂದು 1979ರ ಅಕ್ಟೋಬರ್‌ನಲ್ಲಿ, ಸರಕಾರ ಆಜ್ಞೆ ಹೊರಡಿಸಿತು. ಆಜ್ಞೆಯಂತೆ ಸಂಸ್ಕೃತ ಪ್ರಥಮ ಭಾಷೆಗಳ ಪಟ್ಟಿಯಲ್ಲಿ ಸ್ಥಾನವನ್ನು ಕಳೆದುಕೊಂಡು ತೃತೀಯ ಭಾಷೆಯ ಸ್ಥಾನ ಪಡೆಯಿತು. ಇದರ ಪರ, ವಿರೋಧ ಚರ್ಚೆ ಅಂತಿಮವಾಗಿ ಗೋಕಾಕ್ ಸಮಿತಿ ರಚನೆಗೆ ಕಾರಣವಾಯಿತು ಡಾ. ವಿ.ಕೃ. ಗೋಕಾಕ್ ಸಮಿತಿಯ ಅಧ್ಯಕ್ಷರಾಗಿದ್ದರು. ಜಿ. ನಾರಾಯಣ, ಎಸ್.ಕೆ. ರಾಮಚಂದ್ರರಾವ್, ತ.ಸು. ಶಾಮರಾಯ, ಕೆ. ಕೃಷ್ಣಮೂರ್ತಿ ಮೊದಲಾದವರು ಸದಸ್ಯರಾಗಿದ್ದರು. ಸರಕಾರಕ್ಕೆ ಮೂರು ತಿಂಗಳಲ್ಲಿ ವರದಿ ಸಲ್ಲಿಸುವಂತೆ ಆದೇಶ ನೀಡಲಾಗಿತ್ತು. ಸಮಿತಿಯ ವರದಿಯ ಪರಿಶೀಲನೆಗೆ ವಹಿಸಿದ ವಿಷಯಗಳು:

1. ಸಂಸ್ಕೃತವು ಶಾಲಾ ಪಠ್ಯದ ಅಭ್ಯಾಸದ ವಿಷಯವಾಗಿ ಉಳಿಯಬೇಕೇ?
2. ಉಳಿಯಬೇಕಾದರೆ ಕನ್ನಡಕ್ಕೆ ಪರ್ಯಾಯವಾಗದೆ ಉಳಿಸುವುದು ಹೇಗೆ?
3. ತ್ರಿಭಾಷಾ ಸೂತ್ರದಂತೆ ಕನ್ನಡ ಕಡ್ಡಾಯ ಮಾಡಿ, ಉಳಿದೆರಡು ಭಾಷೆಗಳ ಆಯ್ಕೆಯ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೆ ಬಿಡುವುದು ಸೂಕ್ತವೇ?

ಸಮಿತಿಯ ವರದಿಯ ಮುಖ್ಯಾಂಶಗಳು:

1. 1981-82ನೆಯ ಶೈಕ್ಷಣಿಕ ವರ್ಷದಿಂದಲೇ ಕನ್ನಡ ಭಾಷೆಯನ್ನು ಏಕೈಕ ಪ್ರಥಮ ಮತ್ತು ಕಡ್ಡಾಯ ವಿಷಯವಾಗಬೇಕು. ಅದಕ್ಕೆ 150 ಅಂಕಗಳು.
2. ಕೆಳಕಂಡ ಭಾಷೆಗಳಲ್ಲಿ ಒಂದನ್ನು ದ್ವಿತೀಯ ಭಾಷೆಯನ್ನಾಗಿ ಅಭ್ಯಸಿಸಬಹುದು. ಅದಕ್ಕೆ 100 ಅಂಕಗಳು. ತಮಿಳು, ತೆಲುಗು, ಮಲಯಾಳಂ, ಮರಾಠಿ ಗುಜರಾತಿ, ಹಿಂದಿ ಹೀಗೆ ಆಧುನಿಕ ಭಾಷೆಗಳಲ್ಲಿ ಒಂದು. ಇಂಗ್ಲಿಷ್, ಸಂಸ್ಕೃತ, ಅರೇಬಿಕ್, ಪರ್ಶಿಯನ್, ಲ್ಯಾಟಿನ್, ಗ್ರೀಕ್ ಪ್ರಾಚೀನ ಭಾಷೆಗಳು.
3. ಒಂದು ತೃತೀಯ ಭಾಷೆಯನ್ನು ತೆಗೆದುಕೊಳ್ಳುವುದು. ಅದಕ್ಕೆ 50 ಅಂಕಗಳು.
4. ತೃತೀಯ ಭಾಷೆ, ಪರೀಕ್ಷೆಗೆ ಕಡ್ಡಾಯ ವಿಷಯವಾಗಿದೆ.



ಚಂಪಾ ವರದಿ

ಪ್ರಾಥಮಿಕ ಶಿಕ್ಷಣವನ್ನು ಕಿರಿಯ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಿಕ್ಷಣ ಎಂಬ ವಿಂಗಡಣೆ ಆಧರಿಸಿ ಖಾಸಗಿ ಶಾಲೆಗಳಲ್ಲಿ 5ನೇ ತರಗತಿಯಿಂದ ಆಂಗ್ಲ ಮಾಧ್ಯಮ ತರಗತಿಗಳಿಗೆ ಅವಕಾಶ ಮಾಡುವ ನೀತಿಯನ್ನು ಸರಕಾರ ಆರಂಭಿಸಿತು. ಅದರ ವಿಸ್ತರಣೆಯಾಗಿ ಸರಕಾರಿ ಶಾಲೆಗಳಲ್ಲಿ 1998-99ನೇ ಸಾಲಿನಿಂದ ಆಂಗ್ಲ ಮಾಧ್ಯಮ ತರಗತಿಗಳನ್ನು ನಡೆಸಲು ಹೊರಟಿತು. ಇದರ ಬಗ್ಗೆ ಪರ ವಿರೋಧ ಚರ್ಚೆಗಳು ನಡೆದವು. ಈ ಹಿನ್ನೆಲೆಯಲ್ಲಿ 1998ರಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ನೇತೃತ್ವದಲ್ಲಿ ರಾಜ್ಯ ಮಟ್ಟದ ಸಮಾಲೋಚನಾ ಸಭೆ ನಡೆಯಿತು. ಬಳಿಕ 12 ಸದಸ್ಯರನ್ನೊಳಗೊಂಡ ಸಮಿತಿ ರಚಿಸಿ, ಪ್ರೊ. ಚಂದ್ರಶೇಖರ ಪಾಟೀಲರನ್ನು ಸಮಿತಿ ಅಧ್ಯಕ್ಷರನ್ನಾಗಿ ಮಾಡಲಾಯಿತು. ಈ ಸಮಿತಿ ಕನ್ನಡದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಲವು ಮಹತ್ವದ ಶಿಫಾರಸುಗಳನ್ನು ಮಾಡಿತು.



ಡಾ. ಹಿ. ಚಿ. ಬೋರಲಿಂಗಯ್ಯ ಸಮಿತಿ ವರದಿ

ಇದು ವೃತ್ತಿ ಶಿಕ್ಷಣದಲ್ಲಿ ಅಂದರೆ ಇಂಜಿನಿಯರಿಂಗ್, ಮೆಡಿಕಲ್ ಕಾನೂನು ಮತ್ತು ಕೃಷಿ ಇತ್ಯಾದಿ ವಿಭಾಗಗಳಲ್ಲಿ ಕಡ್ಡಾಯವಾಗಿ ಕನ್ನಡವನ್ನು ಬೋಧಿಸುವ ಕುರಿತಾಗಿದೆ. ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ದಿ. 13-5-2015ರ ಸಭೆಯ ತೀರ್ಮಾನದಂತೆ ಕನ್ನಡ ವಿಶ್ವವಿದ್ಯಾನಿಲಯದ ಕುಲಪತಿಗಳಾಗಿದ್ದ ಡಾ. ಹಿ.ಚಿ. ಬೋರಲಿಂಗಯ್ಯ ಅವರ ಅಧ್ಯಕ್ಷತೆಯಲ್ಲಿ ವೃತ್ತಿ ಶಿಕ್ಷಣದಲ್ಲಿ ಕಡ್ಡಾಯವಾಗಿ ಕನ್ನಡ ಬೋಧನೆಗಾಗಿ ಸಮಿತಿ ರಚಿಸಲಾಯಿತು. ಈ ಸಮಿತಿಯು ಕನ್ನಡ ಭಾಷಾ ಬೋಧನೆಯನ್ನು ಕಡ್ಡಾಯಗೊಳಿಸುವಿಕೆ ಮತ್ತು ಇತರೆ ಹತ್ತು ಮಹತ್ವದ ಶಿಫಾರಸುಗಳನ್ನೂ ಮಾಡಿತು.



ವರ್ತಮಾನದ ತಲ್ಲಣಗಳಿಗೆ ಬಾಪುವಿನಲ್ಲಿ ಉತ್ತರ

– ಪ್ರಸನ್ನಕುಮಾರ್ ಕೆರಗೋಡು

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಆದರೆ ಅಸ್ಪೃಶ್ಯತೆ ಅಥವಾ ಅಸಮಾನತೆಯನ್ನು ಸಮರ್ಥಿಸಲು ವೈವಿಧ್ಯತೆಯನ್ನು ಎಂದಿಗೂ ಬಳಸಬಾರದು." ಎಂಬುದಾಗಿ ವಿಶ್ಲೇಷಿಸುತ್ತಿದ್ದರು. ರಾಮ್‌ಚಂದ್ರ ಗುಹಾ ಅವರ "ಗಾಂಧಿ, ದಿ ಇಯರ್ಸ್ ದಟ್ ಚೇಂಜ್ಡ್ ದಿ ವರ್ಲ್ಡ್" ಎಂಬ ಪುಸ್ತಕದಲ್ಲಿ ನಿರೂಪಿತವಾಗಿರುವಂತೆ ಅವರ ನಾಲ್ಕು ಗುರಿಗಳು; ಭಾರತವನ್ನು ಬ್ರಿಟಿಷ್ ಆಕ್ರಮಣದಿಂದ ಮುಕ್ತಗೊಳಿಸುವುದು, ಅಸ್ಪೃಶ್ಯತೆಯನ್ನು ಕೊನೆಗೊಳಿಸುವುದು, ಹಿಂದೂ ಮುಸ್ಲಿಮರ ಸಂಬಂಧವನ್ನು ಸುಧಾರಿಸುವುದು ಮತ್ತು ಭಾರತವನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸ್ವಾವಲಂಬಿ ರಾಷ್ಟ್ರವನ್ನಾಗಿ ಮಾಡುವುದೇ ಆಗಿತ್ತು. ಇದಕ್ಕಾಗಿ ಅವರು ಕೈಗೊಂಡ ಸಾಮಾಜಿಕ ಚಳುವಳಿಗಳನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ದಕ್ಷಿಣ ಆಫ್ರಿಕಾದಲ್ಲಿನ ಅವರ ಆರಂಭಿಕ ಕೆಲಸದಿಂದ ಮೊದಲ್ಗೊಂಡು ಅಂತಿಮ ಕಾಲದವರೆಗೂ ಅದನ್ನು ಮುಂದುವರೆಸಿದ್ದರು. ಆ ನಾಲ್ಕು ಗುರಿಗಳು ಅವುಗಳ ಸಾಧನೆಯ ಮಾರ್ಗದ ಸವಾಲುಗಳನ್ನು ಎದುರಿಸದೆ, ಭಾರತ ಸ್ವಾತಂತ್ರ್ಯ ಗಳಿಸಲು ಮತ್ತು ಯಶಸ್ವಿ ರಾಷ್ಟ್ರವಾಗಲು ಸಾಧ್ಯವಿಲ್ಲ ಎಂದು ದೃಢವಾಗಿ ನಂಬಿದ್ದರು. ಹಿಂದೂ ಮುಸ್ಲಿಮರು ಮತ್ತು ಜಾತಿಗಳ ನಡುವೆ ಕೋಮು ಸೌಹಾರ್ದತೆ ಇಲ್ಲದೆ, ಭಾರತದ ಸ್ವಾತಂತ್ರ್ಯ ಗಳಿಸುತ್ತದೆ ಎಂದು ಗಾಂಧಿ ಎಂದೂ ನಂಬಿರಲಿಲ್ಲ. "ಸಮಾಜದ ಪ್ರಗತಿಯನ್ನು ಅತ್ಯಂತ ತಳಮಟ್ಟದ ಮತ್ತು ದುರ್ಬಲರ ಸ್ಥಿತಿಗತಿಗಳಿಂದ ನಿರ್ಧರಿಸಬೇಕು." ಎಂಬ ಅವರ ಮಾತು ಅವರ ಗುರಿ ಏನಾಗಿತ್ತು ಎನ್ನುವುದನ್ನು ನಿರೂಪಿಸುತ್ತದೆ.

ಬಾಪುವಿನ ಇಂತಹ ಗುರಿ ನಿಗಧಿಪಡಿಸಿಕೊಳ್ಳುವಿಕೆ ಮತ್ತು ಸಾದನೆಯ ಕಠಿಣ ಮಾರ್ಗಗಳನ್ನು ನೋಡಿದಾಗ, ವರ್ತಮಾನದ ವೇಗದ ಶೈಲಿಯ ಅಸಂಖ್ಯಾತ ಮಕ್ಕಳು ಮತ್ತು ಯುವಜನರು ಗುರಿಗಳನ್ನೇ ನಿಗಧಿಪಡಿಸಿಕೊಳ್ಳದೆ ಕಲಿಕೆಯಲ್ಲಿ ತೊಡಗಿರುವುದು ವಿಪರ್ಯಾಸವೆನಿಸುತ್ತದೆ. ಬಾಲ್ಯ ಮತ್ತು ಹದಿಹರಯದಲ್ಲಿ ಭವಿಷ್ಯದ ಗುರಿಗಳನ್ನು ನಿಗಧಿಪಡಿಸಿಕೊಳ್ಳುವ ಅಗತ್ಯತೆಯನ್ನು ಹಿರಿಯರು ಮತ್ತು ಅಧ್ಯಾಪಕರು ಮನದಟ್ಟು ಮಾಡಬೇಕಿದೆ. ಈ ಬಗ್ಗೆ ಆಸ್ಥೆ ತೋರದಿದ್ದಲ್ಲಿ ಹುಟ್ಟಿ ಬೆಳೆದ ನೆಲದ ಭವಿಷ್ಯದ ಯೋಜನೆ ರೂಪಿಸುವ, ಅನುಷ್ಠಾನಗೊಳಿಸುವ ಅದರೆಡೆ ಸಾಗುವ ದಾರಿ ಕ್ಲಿಷ್ಟಕರವಾಗುತ್ತದೆ. ಸಂಬಂಧಿಸಿದವರೆಲ್ಲರೂ ಅದರಡೆ ಒಂದು ಸೂಕ್ಷ್ಮ ನೋಟ ಬೀರಿ ಕಾರ್ಯಪ್ರವೃತ್ತರಾಗಬೇಕು.

ಮುಂದುವರಿಯುವುದು...

ಮಾದಕ ವಸ್ತುಗಳ ಮಾಯಾಜಾಲ

– ಡಾ. ಸಿ.ಆರ್. ಚಂದ್ರಶೇಖರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

'ಇಂತಹ ಬಂಧನಗಳಿಂದ ಇಡೀ ಜಾಲವನ್ನು ನಿರ್ಮೂಲ ಮಾಡಿದಂತೆ ಆಗುವುದಿಲ್ಲ. ಅವುಗಳ ಪೂರ್ಣ ನಿಗ್ರಹಕ್ಕೆ ಪೊಲೀಸರು ಮಾತ್ರವಲ್ಲ, ಎಲ್ಲ ನಾಗರಿಕರು ಸಂಘಟಿತ ಪ್ರಯತ್ನ ನಡೆಸಬೇಕು. ಮಾದಕ ವಸ್ತುಗಳ ಸೇವನೆಗೆ ದಾಸರಾದವರು ತಮ್ಮ ಚಟವನ್ನು ಪೂರೈಸಿಕೊಳ್ಳಲು ಎಂತಹ ಹೇಯ ಕೃತ್ಯ ನಡೆಸಲೂ ಸಿದ್ಧ. ಸಮಾಜದ ಒಳಿತು ಮತ್ತು ನೆಮ್ಮದಿಯನ್ನು ಬಯಸುವ ಎಲ್ಲರೂ ಈ ಸಮಸ್ಯೆಯ ಪರಿಹಾರಕ್ಕೆ ಗಮನಹರಿಸಬೇಕು' ಎಂದು ದಿನಪತ್ರಿಕೆಗಳು ತಮ್ಮ ಕಳವಳವನ್ನು ಸೂಚಿಸಿವೆ. "ಡಾಕ್ಟರೇ, ನಮ್ಮ ಆಸೆ, ಕನಸುಗಳೆಲ್ಲಾ ಮಣ್ಣುಗೂಡಿದುವು. ನಾವು ಉಪವಾಸವಿದ್ದು, ಹಳೆಯ ಬಟ್ಟೆಗಳನ್ನೇ ಉಟ್ಟು, ನಿದ್ರೆಗೆಟ್ಟು ದುಡಿದು ಬಂದ ಸಂಪಾದನೆಯ ಹಣದ ಸಿಂಹಪಾಲನ್ನು ಈ ಮಗನ ವಿದ್ಯಾಭ್ಯಾಸಕ್ಕೆ ಸುರಿದೆವು. ಈತ ಇಂಜಿನಿಯರ್ ಆಗಿ, ನಮ್ಮನ್ನು ನಮ್ಮ ಮನೆಯನ್ನು ಉದ್ಧಾರ ಮಾಡುತ್ತಾನೆ. ಅಂತ ಗಾಳಿ ಗೋಪುರ ಕಟ್ಟಿದೆವು. ಈಗ ಅವನು ಅಫೀಮು, ಆಲ್ಕೋಹಾಲಿನ ದಾಸನಾಗಿ ಯಾವಾಗಲೂ ಅಮಲಿನಲ್ಲೇ ಇರುತ್ತಾನೆ, ಬರಬಾರದ ರೋಗಗಳನ್ನು ಅಂಟಿಸಿಕೊಂಡಿದ್ದಾನೆ. "ಆಗಿದ್ದೆಲ್ಲಾ ಆಯಿತು. ಈಗಲಾದರೂ ಎಚ್ಚೆತ್ತುಕೋ. ಬಾ ಡಾಕ್ಟರನ್ನು ಕಂಡು ಚಿಕಿತ್ಸೆ ಮಾಡಿಸಿಕೋ" ಎಂದರೆ ಬರುವುದಿಲ್ಲ. ಬಲವಂತ ಮಾಡಿದರೆ, ಹೊಡೆಯಲು ಬರುತ್ತಾನೆ. "ಮನೆ ಬಿಟ್ಟು ಮದ್ರಾಸಿಗೊ, ಬೊಂಬಾಯಿಗೋ ಓಡಿ ಹೋಗುತ್ತೇನೆ" ಎಂದು ಹೆದರಿಸುತ್ತಾನೆ. ಅವನು ಹೀಗಾಗಲು ಅವನ ಕೆಟ್ಟ ಸ್ನೇಹಿತರೇ ಕಾರಣ. ಸಹವಾಸ ದೋಷವೂ, ಸಂಗ ದೋಷವೋ ಅಂತಾರಲ್ಲ ಹಾಗೆ ಅವನನ್ನು ಹೇಗೆ ದಾರಿಗೆ ತರುವುದು. ಒಂದೂ ಗೊತ್ತಾಗುವುದಿಲ್ಲ' ಅಸಾಯಕತೆಯ ಪ್ರತಿಮೂರ್ತಿಯಾಗಿದ್ದರು ರಮಣರಾವ್. "ಅಂಕಲ್, ನಾನು ಮೆಡಿಕಲ್ ವಿದ್ಯಾರ್ಥಿನಿ. ಫೈನಲ್ ಇಯರ್‌ನಲ್ಲಿದ್ದೇನೆ. ನನ್ನ ಅಣ್ಣ ಕೂಡ ಡಾಕ್ಟರಾಗಿದ್ದಾನೆ. ಎಂ.ಬಿ.ಬಿ.ಎಸ್. ಆದ ಮೇಲೆ ಎರಡು ವರ್ಷ ನರ್ಸಿಂಗ್ ಹೋಂ ಒಂದರಲ್ಲಿ ಕೆಲಸ ಮಾಡಿ, ನಾಲ್ಕು ವರ್ಷಗಳ ಹಿಂದೆ ಎಂ.ಎಸ್. ಸರ್ಜರಿ ಕೋರ್ಸ್‌ಗೆ ಸೇರಿಕೊಂಡ. ಒಂದು ವರ್ಷ ಕಾಲೇಜಿಗೆ ಹೋದ. ಆಮೇಲೆ ಇರೆಗ್ಯುಲರ್ ಆದ. ಪರೀಕ್ಷೆಗೆ ಕೂರಲಿಲ್ಲ. ಸಸ್ಪೆಂಡ್ ಆದ. ಈಗ ಆತ ಜಾರುದಾರಿಯಲ್ಲಿದ್ದಾನೆ. ಕೈಗೆ ಸಿಗುವ ಯಾವುದೇ ಮಾದಕ ವಸ್ತುವನ್ನು, ಆಲ್ಕೋಹಾಲ್, ಬ್ರೌನ್ ಶುಗರ್, ಹೆರಾಯಿನ್, ಟ್ರ್ಯಾಂಕ್ವಿಲೈಸರ್ಸ್ ಇತ್ಯಾದಿ ಸೇವಿಸುತ್ತಾನೆ. ಊರೆಲ್ಲಾ ಸಾಲ ಮಾಡಿದ್ದಾನೆ. ನಾವು ತಲೆ ಎತ್ತಿ ತಿರುಗದಂತೆ ಮಾಡಿಬಿಟ್ಟಿದ್ದಾನೆ. ಟ್ರೀಟ್‌ಮೆಂಟ್‌ಗೆ ಒಪ್ಪುವುದಿಲ್ಲ. ಬಲವಂತವಾಗಿ ಸಾಧ್ಯವಾದರೆ ಪೋಲೀಸಿನವರ ಸಹಾಯದಿಂದ ನಿಮ್ಮ ಆಸ್ಪತ್ರೆಗೆ ಕರೆತರಬೇಕೆಂದಿದ್ದೇವೆ. ಇದಲ್ಲದೆ ಬೇರಾವುದಾದರೂ ದಾರಿ ಇದ್ದರೆ ಹೇಳಿ. ಯಾವ ದಿನ ಎಷ್ಟು ಹೊತ್ತಿಗೆ ನಿಮ್ಮಲ್ಲಿಗೆ ಬರಬೇಕು. ನಿಮ್ಮ ಯೂನಿಟ್‌ನ ಹೊರ ರೋಗಿ ವಿಭಾಗದ ವಿವರಗಳನ್ನು ಕೊಡಿ".

ಮುಂದುವರಿಯುವುದು...

ಗಾಂಧೀಜಿ ಮಾಡಿದ ಪ್ರಥಮ ಸಾರ್ವಜನಿಕ ಭಾಷಣ

– ವೇಮಗಲ್ ಸೋಮಶೇಖರ್.

ಗಾಂಧೀಜಿ 1915ರಲ್ಲಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂತಿರುಗಿದ ಮೇಲೆ ತಮ್ಮ ರಾಜಕೀಯ ಗುರುಗಳಾದ ಗೋಪಾಲಕೃಷ್ಣ ಗೋಖಲೆಯವರ ಸೂಚನೆಯಂತೆ ಭಾರತದಲ್ಲಿ ಪ್ರವಾಸ ಮಾಡಿದರು. ಹೀಗೆ ಒಂದು ವರ್ಷ ಪ್ರವಾಸ ಮಾಡಿದ ಸಂದರ್ಭದಲ್ಲಿ ಭಾರತದ ರಾಜಕೀಯದ ಬಗ್ಗೆ ಎಲ್ಲಿಯೂ ಬಾಯಿ ಬಿಡಲಿಲ್ಲ. ಆದರೆ 1916ರ ಫೆಬ್ರವರಿ 6 ರಂದು ಕಾಶಿಯಲ್ಲಿ ನಡೆದ ಸಭೆಯಲ್ಲಿ ಬಾಯಿ ಬಿಡಬೇಕಾಯಿತು. 1916ರ ಫೆಬ್ರವರಿ 4 ಶುಕ್ರವಾರದಂದು ಕಾಶಿಯಲ್ಲಿ ಮದನ ಮೋಹನ ಮಾಳವೀಯರ ಹಿಂದು ವಿಶ್ವವಿದ್ಯಾಲಯ ವೈಸ್‌ರಾಯ್ ಲಾರ್ಡ್ ಹಾರ್ಡಿಂಜ್ ಅವರಿಂದ ಉದ್ಘಾಟನಾ ಸಮಾರಂಭ ಏರ್ಪಾಟಾಗಿತ್ತು. ಈ ಸಮಾರಂಭದ ಅಂಗವಾಗಿ ಎರಡು ದಿನ ಅಂದರೆ 5 ಮತ್ತು 6ರಂದು ವಿವಿಧ ಗಣ್ಯರಿಂದ ಉಪನ್ಯಾಸ ಕಾರ್ಯಕ್ರಮ ಏರ್ಪಾಟಾಗಿತ್ತು. ಕೊನೆಯ ದಿವಸವಾದ 6ರಂದು ಗಾಂಧಿ ಅವರನ್ನು ಆಹ್ವಾನಿಸಲಾಗಿತ್ತು. ಅಂದಿನ ಕಾರ್ಯಕ್ರಮದಲ್ಲಿ ಭಾರತದ ಉತ್ತರ ಭಾಗದ ಅನೇಕ ಸಂಸ್ಥಾನಗಳ ಮಹಾರಾಜರುಗಳು, ವಿವಿಧ ಪ್ರಾಂತ್ಯಗಳ ಗವರ್ನರ್‌ಗಳು, ಬ್ರಿಟಿಷ್ ಪ್ರಭುತ್ವದ ಉನ್ನತ ಅಧಿಕಾರಿಗಳು, ವಿದ್ವಾಂಸರು, ಸಾಹಿತಿಗಳು, ವಕೀಲರು ಮತ್ತು ವಿಧ್ಯಾರ್ಥಿ ಸಮೂಹವೂ ಸೇರಿದಂತೆ ಭಾಗವಹಿಸಿದ್ದರು. ಆ ಮೂರು ದಿವಸಗಳ ಕಾರ್ಯಕಲಾಪಗಳ ಅದ್ದೂರಿ, ಆಡಂಬರ, ಕೃತಕತೆ, ಭೋಳೆತನ, ಶ್ರೀಮಂತಿಕೆಯ ಪ್ರದರ್ಶನಗಳಿಂದ ಗಾಂಧೀಜಿ ವಿಚಲಿತರಾಗಿದ್ದರು. ಗಾಂಧೀಜಿ ಅಂದು ತಮ್ಮ ಭಾಷಣದಲ್ಲಿ "ನಾನು ಭಾರತೀಯ ಸಂಸ್ಕೃತಿಯ ಪ್ರತೀಕವೆನಿಸಿರುವ ಭವ್ಯ ಇತಿಹಾಸವುಳ್ಳ ಈ ಊರಿನ ಕಾಲೇಜು ಆವರಣದಲ್ಲಿ ನಿಮ್ಮನ್ನು ಉದ್ದೇಶಿಸಿ, ವಿದೇಶಿ ಭಾಷೆಯಲ್ಲಿ ಮಾತಾಡುವಂತಹ ಸಂದರ್ಭ ಬಂದಿರುವುದು ನಮ್ಮ ದೇಶ ಎದುರಿಸುತ್ತಿರುವ ದುರಂತಕ್ಕೆ ಸಾಕ್ಷಿಯೂ, ಅದಕ್ಕಿಂತ ಹೆಚ್ಚಾಗಿ ನಾಚಿಕೆಗೇಡಿನ ಸಂಗತಿಯಾಗಿದೆ. ನಮ್ಮ ಮಕ್ಕಳಿಗೆ ನಮ್ಮದೇ ಭಾಷೆಯಲ್ಲಿ ಶಿಕ್ಷಣ ಒದಗಿಸದಿದ್ದರೆ ದೇಶ ಈ ಹೊತ್ತಿಗೆ ಸ್ವತಂತ್ರವಾಗಿರುತ್ತಿತ್ತು. ಜನನಾಯಕರು ಜನಸಾಮನ್ಯರೊಂದಿಗೆ ಹೃದಯದ ಭಾಷೆಯಲ್ಲಿ ಸಂವಾದಿಸುತ್ತಾ ಅವರ ಕಷ್ಟಗಳಿಗೆ ಸ್ಪಂದಿಸುತ್ತಿದ್ದರು. ಇದು ಆಗದಂತೆ ತಡೆದ ಮೆಕಾಲೆ, ಭಾರತದ ವಿಷಯದಲ್ಲಿ ಮಾಡಿದ ದೊಡ್ಡ ಅಪರಾಧದ ಪರಿಣಾಮವಿದು." ಇದಕ್ಕೆ ಪ್ರತಿಕ್ರಿಯೆಯಾಗಿ ವಿದ್ಯಾರ್ಥಿ ಸಮೂಹದಿಂದ ಚಪ್ಪಾಳೆ ಕೇಳಿ ಬಂತು. ಹುರುಪುಗೊಂಡ ಗಾಂಧೀಜಿ ಭಾಷಣ ಮುಂದುವರೆಸುತ್ತಾ "ಕಣ್ಣು–ಕಿವಿಗಳಿಗೆ ಹಬ್ಬ ಸಾಕಾಗಿದೆ. ಭಾರತೀಯನ ಹೃದಯ ಮುಟ್ಟುವ ಕಾಲವೀಗ ಬಂದಿದೆ. ಭಾಷಣಗಳ ಮೂಲಕ ದೇಶಸೇವೆ ಮಾಡಲಾಗದು. ಅವು ಕೂಡ ಅರ್ಥಹೀನವಾಗತೊಡಗಿದೆ". ಈ ಮಾತು ಕೇಳಿ ಆನಿಬೆಸೆಂಟರು ಕೊಂಚ ಬೆಚ್ಚಿದಂತಾದರು. ನಂತರ ಗಾಂಧೀಜಿ ದೇಶದ ಅಧ್ಯಾತ್ಮಿಕ ಸಂಪತ್ತಿನ ಕೀರ್ತಿಯ ಬಗ್ಗೆ ಮಾತನಾಡತೊಡಗಿದರು: "ನಮ್ಮದು ಆಧ್ಯಾತ್ಮಿಕ ದೇಶವೆಂದು ವ್ಯಕ್ತವಾಗಬೇಕಾದದ್ದು ಬಾಯಿಂದ ಮಾತ್ರವಲ್ಲ. ಜನರ ಬಳಿ ಹೋಗಿ ಕೆಲಸ ಮಾಡುವ ಮೂಲಕ. ಇಲ್ಲಿನ ದೇವಾಲಯಗಳು ಹಾಗೂ ಸುತ್ತಮುತ್ತಲ ಬೀದಿಗಳನ್ನು ನೋಡಿ. ಎಷ್ಟು ಕೊಳಕಾಗಿದೆ. ಧರ್ಮ–ಅಧ್ಯಾತ್ಮ ಎಂದರೆ ಕೊಳಕೇ?" ಗಾಂಧೀಜಿ ವೇದಿಕೆಯಲ್ಲಿದ್ದ ರಾಜ ಮಹಾರಾಜರುಗಳತ್ತ ನೋಡುತ್ತಾ "ಇವರು ಧರಿಸಿರುವ ವಿವಿಧ ರತ್ನಾಭರಣಗಳು ನನ್ನಲ್ಲಿ ವಿಷಾದ ಹುಟ್ಟಿಸಿದೆ. ಇವೆಲ್ಲ ಭಾರತದ ಬಡತನದ ಮೂಲಗಳಂತೆ ನನಗೆ ಕಾಣುತ್ತಿವೆ. ಇವು ನಮ್ಮ ರೈತನಿಂದ, ಗ್ರಾಮೀಣ ಕಸುಬುದಾರರಿಂದ ಸೂರೆ ಮಾಡಲ್ಪಟ್ಟ ಆಸ್ತಿಯೇ ಹೌದು. ಇಂತಹ ಸೂರೆಯನ್ನು ಒಪ್ಪಿಕೊಂಡು, ಸ್ವರಾಜ್ಯದ ಮಾತಾಡುವುದು ದೊಡ್ಡ ವಿಪರ್ಯಾಸವೇ ಸರಿ". ಈ ಹೊತ್ತಿಗೆ ಆನಿಬೆಸೆಂಟರ ಸಹಿತ ಮಹಾರಾಜ ಗಣವೆಲ್ಲಾ ಈ ಮಾತುಗಳಿಂದ ದಿಗ್ಭ್ರಾಂತಗೊಂಡರು. ವಿದ್ಯಾರ್ಥಿಗಳ ಕಡೆಯಿಂದ ಗಾಂಧೀ ಅವರ ಭಾಷಣಕ್ಕೆ ಮತ್ತೆ ಮತ್ತೆ ಮೆಚ್ಚುಗೆಯ ಚಪ್ಪಾಳೆ ಪ್ರಾರಂಭವಾದಾಗ ಆಹ್ವಾನಿತ ಗಣ್ಯರ ಮುಜುಗರ ಹೆಚ್ಚಾಗತೊಡಗಿತು. ಗಾಂಧಿ ಈಗ ನೇರವಾಗಿ ಕಳೆದೆರಡು ದಿನಗಳಲ್ಲಿ ತಾವು ಕಂಡು ವಿಷಾದಿಸಿದ ಒಂದು ಸಂಗತಿಯ ಪ್ರಸ್ತಾಪ ಮಾಡತೊಡಗಿದರು: "ಈ ಸಮಾರಂಭಕ್ಕೆ ಎಷ್ಟೊಂದು ಭದ್ರತೆ, ನಗರದ ತುಂಬಾ ಪೋಲೀಸರು, ಗುಪ್ತಚರ ದಳದವರೇ ತುಂಬಿ ಹೋಗಿದ್ದಾರೆ. ಏಕಿಷ್ಟು ಆಭದ್ರತೆ, ಅಪನಂಬಿಕೆಯ ಭಾವನೆಯೇ! ಇಂತಹ ಬದುಕಿಗಿಂತ ಸಾವೇ ಮೇಲು!" ಎಂದರು. ವೇದಿಕೆಯ ಮೇಲಿನ ಗಣ್ಯ ಸಮೂಹಕ್ಕೆ ಸಿಡಲು ಬಡಿದಂತಾಯಿತು. ಗಾಂಧಿ ಮಾತುಗಳನ್ನು ಮುಂದುವರೆಸಿದ್ದಂತೆಯೇ ವಿರುದ್ಧ ದಿಕ್ಕುಗಳಿಂದ 'ಗಾಂಧಿ ಕುಳಿತುಕೊಳ್ಳಿ ಸಾಕು!' ಎಂಬ ಮಾತುಗಳು ಬಂದರೆ ಮತ್ತೊಂದು ಕಡೆಯಿಂದ 'ನೀವು ಮುಂದುವರಿಸಿ' ಎಂಬ ಕೂಗುಗಳು ಕೇಳಿಬಂದವು. ಗಾಂಧಿ ಆನಿಬೆಸಂಟರ ಕಡೆ ನೋಡಿದಾಗ ಅವರೂ ಸಹ 'ಸಾಕು ನಿಲ್ಲಿಸಿ ಕೂತುಕೊಳ್ಳಿ!' ಎಂದು ಬೇಸರದಿಂದಲೇ ಹೇಳಿದರು. ಗಾಂಧಿ ಅಧ್ಯಕ್ಷರ ಆದೇಶಕ್ಕಾಗಿ ಕಾಯುತ್ತಿದ್ದೇನೆ ಎಂದಾಗ, ಅಧ್ಯಕ್ಷತೆ ವಹಿಸಿದ್ದ ದರ್ಭಾಂಗದ ಮಹಾರಾಜರು 'ನಿಮ್ಮ ಉದ್ದೇಶ ಏನು ಹೇಳಿ ಮುಗಿಸಿ' ಎಂದರು. ಗಾಂಧಿ 'ನಾನು ಈ ಮಾತುಗಳ ಮೂಲಕ ದೇಶ ಮತ್ತು ಸಾಮ್ರಾಜ್ಯದ ಸೇವೆ ಮಾಡುತ್ತಿದ್ದೇನೆ ಎಂದುಕೊಂಡಿದ್ದೇನೆ' ಮುಂತಾಗಿ ವಿವರಿಸುತ್ತಿದ್ದಾಗಲೇ ಮಾಳವೀಯರು ಕರ ಜೋಡಿಸಿ ಎದ್ದು ನಿಂತರು. ಗಾಂಧೀಜಿ ಮಾತು ನಿಲ್ಲಿಸಿದರು. ಸಭೆ ವಂದನಾರ್ಪಣೆಯೊಂದಿಗೆ ಔಪಚಾರಿಕತೆಯೂ ಇಲ್ಲದೆ ಮುಕ್ತಾಯಗೊಂಡಿತು. ಈ ಭಾಷಣವನ್ನು ಅರೆಬರೆ ಕೇಳಿಸಿಕೊಂಡ ಕೆಲ ಅಧಿಕಾರಿಗಳು ಗಾಂಧಿ ಉಗ್ರಗಾಮಿ ಗುಂಪಿಗೆ ಕುಮ್ಮಕ್ಕು ಕೊಟ್ಟಿದ್ದಾರೆ ಎಂಬ ದೂರನ್ನು ವೈಸ್‌ರಾಯ್ ಅವರಿಗೆ ಸಲ್ಲಿಸಿದರಾದರೂ, ಕಾಶಿಯ ಪೋಲೀಸ್ ಕಮೀಷನರ್ ತನ್ನ ವರದಿಯಲ್ಲಿ, ಗಾಂಧಿ ಅಂದು ಕೆಲ ವಿಷಯಗಳಲ್ಲಿ ತಮ್ಮ ಮಿತಿ ಮೀರಿ ಮಾತಾಡಿದರಾದರೂ, ಅವರ ಒಟ್ಟು ಮಾತುಗಳಲ್ಲಿ ಸಾಮ್ರಾಜ್ಯಕ್ಕೆ ದ್ರೋಹ ಬಗೆಯುವ ಅಂಶವೇನೂ ಇರಲಿಲ್ಲ ಎಂದು ಹೇಳಿದರೆ, ಲೆಫ್ಟಿನೆಂಟ್ ಗವರ್ನರ್ ಇದನ್ನು ಇಲ್ಲಿಗೆ ಮುಕ್ತಾಯ ಮಾಡುವುದೇ ಒಳ್ಳೆಯದು ಎಂದು ಸೂಚಿಸಿದರು. ಅಂದಿನ ಕಾರ್ಯಕ್ರಮ ಮುಗಿದ ಮರು ದಿವಸವೇ ಗಾಂಧೀಜಿ ಸತ್ಯಾಗ್ರಹ ಆಶ್ರಮಕ್ಕೆ ಹಿಂತಿರುಗಿದರು. ಗಾಂಧೀಜಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದ ಮೇಲೆ ಸಾರ್ವಜನಿಕರನ್ನುದ್ದೇಶಿಸಿ ಮಾಡಿದ ಪ್ರಥಮ ಭಾಷಣ ಇದಾಗಿದೆ.



ಗಾಂಧೀಜಿ ಅವರ 'ಹಿಂದ್ ಸ್ವರಾಜ್'ನ ಶತಮಾನೋತ್ತರ ಪ್ರಸ್ತುತತೆ

– ಡಾ.ಎಸ್.ಬಿ. ಬಸೆಟ್ಟಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

"ಈ ಭೂಮಿ ಪ್ರತಿಯೊಬ್ಬ ಮಾನವನ ಅಗತ್ಯಗಳನ್ನು ಪೂರೈಸುವಷ್ಟು ಸಂಪನ್ಮೂಲಗಳನ್ನು ಒದಗಿಸುತ್ತದೆ. ಆದರೆ ಆತನ ಆಸೆಗಳನ್ನು ಪೂರೈಸುವಷ್ಟಲ್ಲ"

- ಎಂ.ಕೆ. ಗಾಂಧೀ

ಭಾಷೆ ದೃಷ್ಟಿಯಲ್ಲಿ ಹಿಂದ್ ಸ್ವರಾಜ್‌ನ ಭಾಷೆ ಅತ್ಯಂತ ಸರಳವಾಗಿದ್ದರೂ, ಕೆಲವೊಮ್ಮೆ 'ಸಂಪಾದಕ' ಹಾಗೂ 'ಓದುಗ'ನ ನಡುವೆ ಇರುವ ಗಲಿಬಿಲಿ ಇದಕ್ಕೆ ಕಾರಣ. ಕೆಲವೊಮ್ಮೆ ಸಂಪಾದಕ ಹಾಗೂ ಓದುಗನ್ಯಾರು ಎಂಬ ವ್ಯತ್ಯಾಸವೇ ಕಂಡು ಬರುವುದಿಲ್ಲ. ಹಿಂದ್ ಸ್ವರಾಜ್‌ನಲ್ಲಿ ಇಪ್ಪತ್ತು ಅಧ್ಯಾಯಗಳಿವೆ. ಹಿಂದ್ ಅಲ್ಲಿರುವ ವಿಧಾನ ಮೂಲತಃ ಗ್ರೀಕ್ ದಾರ್ಶನಿಕ ಸಾಕ್ರಟೀಸ್ ಉಪಯೋಗಿಸಿದ ಸಂವಾದ ಅಥವಾ ಡಯಲೆಕ್ಟಿಕಲ್ ಮೇಥಡ್‌ನಿಂದ ಬಂದಿದೆ. ಇದನ್ನು ಪ್ಲೇಟೋ ಅನುಸರಿಸಿದ್ದರು. ಇಲ್ಲಿ ಎರಡು ಪ್ರಮುಖ ಪಾತ್ರಧಾರಿಗಳನ್ನು ಗುರುತಿಸಬೇಕು. 'ಓದುಗ' ಹಾಗೂ 'ಸಂಪಾದಕ'. ಗಾಂಧೀ ಈ ತಂತ್ರವನ್ನು ಉಪಯೋಗಿಸಲು ಕಾರಣವಿದೆ. ಇದರ ಮುಖಾಂತರ ತಮ್ಮ ವಾದಗಳನ್ನು ಸಮರ್ಥವಾಗಿ ಮಂಡಿಸಬಹುದೆಂಬ ತರ್ಕವನ್ನು ಗಾಂಧಿ ಈ ಸಂದರ್ಭದಲ್ಲಿ ಮುಂದಿಡುತ್ತಾರೆ. ಈ ಕೃತಿಯ ಮೂಲ ಆಶಯಗಳು ಸ್ವಾತಂತ್ರ್ಯ, ಸ್ವಾತಂತ್ರ್ಯೋತ್ತರ ಭಾರತದ ಸ್ವರೂಪ, ಆಧುನಿಕ ನಾಗರಿಕತೆ–ಯಂತ್ರ ನಾಗರಿಕತೆಗಳ ತೀವ್ರ ವಿಮರ್ಶೆ ಮತ್ತು ಪ್ರಭುತ್ವದ ವಿರುದ್ಧ ನಡೆಯಬಹುದಾದ ಪ್ರಜಾಂದೋಲನಗಳ ಸ್ವರೂಪವನ್ನು ಕುರಿತದ್ದಾಗಿದ್ದವು. ಹಿಂಸಾತ್ಮಕ ಮಾರ್ಗದಿಂದಾದರೂ ದೇಶವನ್ನು ಮುಕ್ತಗೊಳಿಸುವ ಕ್ರಾಂತಿಕಾರಿ ಹೋರಾಟಗಳ ಆಶಯಗಳಿಗೆ ಪರ್ಯಾಯವಾಗಿ ಅಹಿಂಸೆ, ಸತ್ಯಾಗ್ರಹ ಮತ್ತು ಆತ್ಮ ನಿಗ್ರಹದ ಮೂಲಕ ಗುರಿ ಸಾಧಿಸುವ ಉದ್ದೇಶ ಹಿಂದ್ ಸ್ವರಾಜ್‌ನ ಮೂಲ ಅಡಿಪಾಯ. "ಭಾರತೀಯ ಕ್ರಾಂತಿಕಾರಿಗಳಿಗೆ ಮತ್ತು ದಕ್ಷಿಣ ಆಫ್ರಿಕಾದಲ್ಲಿನ ಅದೇ ಪಂಥಿಗಳಿಗೆ ಉತ್ತರವಾಗಿ ಇದನ್ನು ಬರೆದೆ" ಎಂದು ಗಾಂಧೀಜಿ ಅವರೇ ಹೇಳಿಕೊಂಡಿರುವುದನ್ನು ಇಲ್ಲಿ ಸ್ಮರಿಸಬಹುದು. ಹಿಂದ್ ಸ್ವರಾಜ ಕೃತಿಯಲ್ಲಿ ಕಾಂಗ್ರೆಸ್ಸು ಮತ್ತು ಅದರ ಅಧಿಕಾರಿಗಳು, ಬಂಗಾಳ ವಿಭಜನೆ, ಅಶಾಂತಿ ಮತ್ತು ಅಸಂತೋಷ, ಸ್ವರಾಜ್ಯ ಎಂದರೇನು? ಅಂದಿನ ಇಂಗ್ಲೆಂಡಿನ ಸ್ಥಿತಿ, ನಾಗರಿಕತೆ, ಹಿಂದೂಸ್ಥಾನ ಪರಾಧೀನವಾದ ಬಗೆ. ಇಂದಿನ ಹಿಂದೂಸ್ಥಾನದ ಸ್ಥಿತಿ, ರೈಲು ಬಂದ ಬಗೆ, ಹಿಂದೂ ಮುಸಲ್ಮಾನರ ಸಂಬಂಧದ ಸ್ವರೂಪ, ವಕೀಲರ ಬಗ್ಗೆ, ವೈದ್ಯರ ಬಗ್ಗೆ, ಹಿಂದೂಸ್ಥಾನ ಹೇಗೆ ಸ್ವಾತಂತ್ರ್ಯವಾದೀತು ಎಂಬುದರ ಕುರಿತು, ಸತ್ಯಾಗ್ರಹ, ಶಿಕ್ಷಣ, ಯಂತ್ರ ಮತ್ತು ಕಾರ್ಖಾನೆ ಎಂಬೆಲ್ಲ ವಿಷಯಗಳ ಕುರಿತು ಪ್ರಶ್ನೋತ್ತರ ರೂಪದಲ್ಲಿ ಪ್ರಸ್ತುತ ಪಡಿಸಿದ್ದಾರೆ.

ಮುಂದುವರಿಯುವುದು....

ಚರಿತ್ರೆಯಲ್ಲಿ ಮರೆಯಾದ ಮಹಾತ್ಮರ ಅಕ್ಷರ ಮಾಧ್ಯಮ ಕಾಯಕ

– ಯ.ರು. ಪಾಟೀಲ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಪತ್ರಿಕೆ ಎಂದರೆ ಅದು ವ್ಯಾಪಾರವಲ್ಲ. ಅದೊಂದು ದೇಶ ಸೇವೆ. ನವದೇಶ ನಿರ್ಮಾಣದ ಹಿನ್ನಲೆಯಲ್ಲಿ ಜನರಲ್ಲಿ ಸ್ವರಾಜ್ಯದ ಜಾಗೃತಿಯನ್ನುಂಟು ಮಾಡುವ ಹಾಗೂ ಪ್ರಭುತ್ವದ ಲೋಪದೋಷಗಳನ್ನು ಜನತೆಗೆ ತಿಳಿಸುವ ನಿಟ್ಟಿನಲ್ಲಿ ಸುವರ್ಣ ಸೇತುವೆ ಎನ್ನುವ ಅರಿವನ್ನು ಗಾಂಧೀಜಿಯವರು ಬಿಂಬಿಸಿದರು. ಇದರಿಂದಲೇ ಈ ಕ್ಷೇತ್ರಕ್ಕೆ ಗೌರವ ಬಂದಿತು. ಅವರ ಮನದ ಮಿಡಿತ, ಬೋಧನೆ, ಸ್ವಯಂ ಜ್ಞಾನ ಇವೆಲ್ಲವುಗಳನ್ನು ಪರಿಣಾಮಕಾರಿಯಾಗಿಯೇ ಅವರು ಅಕ್ಷರ ಮೂಲಕ ಜಾಗೃತಿಯನ್ನುಂಟು ಮಾಡುತ್ತಿದ್ದರು. ಇದರಿಂದ ಅವರು ಅನಂದವನ್ನೂ ಅನುಭವಿಸುತ್ತಿದ್ದರು. ಪತ್ರಿಕೋದ್ಯಮಕ್ಕೆ ಹೊಸ ರೂಪವನ್ನೇ ನೀಡಿದ ಹೆಗ್ಗಳಿಕೆ ಗಾಂಧೀಜಿಯವರದು. ಪತ್ರಿಕೆಗಳಲ್ಲಿ ಜಾಹಿರಾತುಗಳು ಇರಲೇಬಾರದು ಎನ್ನುವುದು ಅವರ ನಿಲುವಾಗಿತ್ತು. ಈ ಕುರಿತು ಯಂಗ್ ಇಂಡಿಯ ಪತ್ರಿಕೆಯಲ್ಲಿ ಅಯೋಗ್ಯ ಜಾಹಿರಾತು ಕುರಿತು ಹೇಳುತ್ತ – 'ವೈದ್ಯರ ಆಜ್ಞೆಯಂತೆ ನಾನು ಮಲಗಿದ್ದಲ್ಲೇ ಪತ್ರಿಕೆಗಳ ಲಘು ಬರಹಗಳನ್ನು ಜಾಹಿರಾತುಗಳನ್ನು ಓದುತ್ತಿದ್ದೆ. ಅವು ಕೆಲವು ಬಾರಿ ಮನಸ್ಸಿಗೆ ತುಂಬ ನೋವನ್ನುಂಟು ಮಾಡುತ್ತವೆ. ಗೌರವಯುತವಾದ ಪತ್ರಿಕೆಗಳಲ್ಲಿ ಅನೇಕ ಸಲ ನಾನು ಈ ಕಳಪೆ ಜಾಹಿರಾತುಗಳನ್ನು ಕಾಣುತ್ತೇನೆ. ಓದುಗರನ್ನು ಮೋಸಗೊಳಿಸುವ ಜಾಹಿರಾತುಗಳಿವು. ಯೋಗ ಸಂಬ0ಧಿ ಪುಸ್ತಕಗಳು ಎಂಬ ಶಿರ್ಷಿಕೆಯಡಿಯಲ್ಲಿ ಪ್ರಕಟವಾದ ಪುಸ್ತಕ ಪಟ್ಟಿಯಲ್ಲಿ ಒಂದೇ ಒಂದು ಯೋಗ ಪುಸ್ತಕ ಹೆಸರಿತ್ತು. ಉಳಿದುವೆಲ್ಲ ಸೆಕ್ಸ್ ಪುಸ್ತಕ ಜಾಹಿರಾತುಗಳು. ತರುಣ ತರುಣಿಯರ ಯಾವುದೇ ತೊಂದರೆ ಇಲ್ಲದೆ ಹೇಗೆ ಸೆಕ್ಸ್ ಅನುಭವಿಸಬೇಕು ಎಂಬ ಕುರಿತು ರಹಸ್ಯ ಸೂಚನೆ ಕೊಡುವ ಜಾಹಿರಾತುಗಳವು. ಇದಕ್ಕಿಂತಲೂ ಕೆಟ್ಟ ಜಾಹಿರಾಗುಳಿರುವವು. ಇವನ್ನೆಲ್ಲ ನನ್ನ ಪತ್ರಿಕೆಯಲ್ಲಿ ತರಲು ನಾನು ಸಿದ್ಧನಿಲ್ಲ. ಕುಡಿತದ ಜಾಹಿರಾತು ಇಲ್ಲದ ಪತ್ರಿಕೆಯೇ ಇಲ್ಲ. ತರುಣ ಜನಾಂಗದ ಮನಸ್ಸು ಕೆಡಿಸಲು ಈ ಜಾಹಿರಾತುಗಳು ಹೇರಳವಾಗಿವೆ. ಸಂಪಾದಕರು ಮತ್ತು ಮಾಲೀಕರು ತಾವು ಕುಡಿಯದೆ, ಸಿಗರೇಟು ಸೇದದೆ ಇದ್ದರೂ ಈ ಬಗೆಯ ಜಾಹಿರಾತುಗಳನ್ನು ಪ್ರಕಟಿಸುತ್ತಾರೆ. ಇದು ನಿಜವಾಗಿಯೂ ಸರಿಯಲ್ಲ. ಜಾಹಿರಾತು ಇಲ್ಲದೆ ಪತ್ರಿಕೆ ನಡೆಸಲು ಆಗುವುದಿಲ್ಲ ಎಂದು ಹೇಳುತ್ತಾರೆ. ಆದರೆ ಹೀಗೆ ಏನಕೇಣ ಪ್ರಕಾರೇಣ ಪತ್ರಿಕೆ ನಡೆಸುವುದು ಅಗತ್ಯವಿದೆಯ? ಈ ರೀತಿಯ ಮೋಸದ ಜಾಹಿರಾತುಗಳ ಪ್ರಕಟಣೆಯಿಂದ ಪತ್ರಕರ್ತರು ಮತ್ತು ಮಾಲೀಕರು ಇದು ವಂಚನೆ ಎಂದು ಏಕೆ ತಿಳಿಯುತ್ತಿಲ್ಲ? ನಮ್ಮಲ್ಲಿ ಪತ್ರಕರ್ತರ ಸಂಘಗಳಿಂದ ನೈತಿಕ ನಿಬಂಧನೆಗಳನ್ನು ಹಾಕಿಕೊಂಡು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಿ ಗೌರವಾನ್ವಿತ ಪತ್ರಿಕೆಗಳೆನಿಸಿದ ಸಂಸ್ಥೆಗಳು ತಮ್ಮನ್ನೇ ನಿಯಂತ್ರಿಸಿಕೊಳ್ಳಬೇಕು'

ಮುಂದುವರಿಯುವುದು....

ಅಂಬೇಡ್ಕರ್ ಮತ್ತು ಸಂವಿಧಾನ

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಇಂತಹ ಸಂವಿಧಾನವನ್ನು ರಚಿಸಿ ಕೊಟ್ಟ ಡಾ. ಅಂಬೇಡ್ಕರ್ ಅವರ ಬಗ್ಗೆ, ಭಾರತದ ಪ್ರಥಮ ರಾಷ್ಟ್ರಪತಿ ಬಾಬು ರಾಜೇಂದ್ರ ಪ್ರಸಾದ್ ಅವರು, "ಅವರ ಆರೋಗ್ಯ ಹದಗೆಟ್ಟಿದ್ದರೂ ಲೆಕ್ಕಿಸದೆ ಶ್ರದ್ಧೆ ಮತ್ತು ಉತ್ಸಾಹದಿಂದ ಮಾಡಿದರೆಂಬುದನ್ನು ನನ್ನಷ್ಟು ಕಣ್ಣಾರೆ ಕಂಡವರು ಮತ್ತೊಬ್ಬರಿಲ್ಲ. ಅವರನ್ನು ಸಂವಿಧಾನ ಕರಡು ರಚನಾ ಸಮಿತಿ ಅಧ್ಯಕ್ಷರನ್ನಾಗಿ ಮಾಡಲು ತೆಗೆದುಕೊಂಡ ನಮ್ಮ ನಿರ್ಧಾರ ಎಷ್ಟು ಅರ್ಥಪೂರ್ಣವಾಗಿದೆಯೋ, ಅವರ ಶ್ರದ್ಧೆಯೂ ಅಷ್ಟೇ ಪರಿಣಾಮಕಾರಿಯಾಗಿದೆ" ಎಂದಿದ್ದಾರೆ.

ಭಾರತದ ಪ್ರಥಮ ಪ್ರಧಾನಮಂತ್ರಿ ಜವಹರ್‌ಲಾಲ್ ನೆಹರೂ ಅವರು "ಸಂವಿಧಾನ ರಚನೆಯಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡವರು, ಪ್ರಬುದ್ಧ ವಿಚಾರವಂತರೂ, ವೈಜ್ಞಾನಿಕ ಮನೋಭಾವವುಳ್ಳವರೂ, ಘನವಿದ್ವಾಂಸರೂ, ಆದ ಡಾ. ಅಂಬೇಡ್ಕರ್ ಅವರು ಜಾತ್ಯಾತೀತ ಅಖಂಡ ನವಭಾರತ ನಿರ್ಮಿಸಲು ಸಂವಿಧಾನದಲ್ಲಿ ಭದ್ರ ಬುನಾದಿ ಹಾಕಿದ್ದಾರೆ" ಎಂದಿದ್ದಾರೆ. ಭಾರತದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾಗಿದ್ದ ಜಸ್ಟೀಸ್ ವಿ.ಆರ್. ಕೃಷ್ಣಯ್ಯರ್ ಅವರು "ಡಾ. ಅಂಬೇಡ್ಕರ್ ಅವರ ಇಡೀ ಜೀವನ ಸಾಮಾಜಿಕ ನ್ಯಾಯಕ್ಕೆ ಸಮರ್ಪಿತವಾಗಿದೆ. ಅಂಬೇಡ್ಕರ್ ಅವರಿಗಿದ್ದ ಅಪಾರ ಪಾಂಡಿತ್ಯ ಭಾರತದ ಸಂವಿಧಾನದಲ್ಲಿ ಜಗಜ್ಜಾಹಿರವಾಗಿದೆ." ಇಂಥಹ ಸಂವಿಧಾನದಡಿಯಲ್ಲಿನ ಭಾರತದ ಪ್ರಜಾಪ್ರಭುತ್ವ ಜಗತ್ತಿನಲ್ಲಿ ಅತಿದೊಡ್ಡ ಪ್ರಜಾಪ್ರಭುತ್ವದ ಪ್ರಯೋಗಶಾಲೆಯಾಗಿದೆ. ಭಾರತದ ಸಂವಿಧಾನ ಇಡೀ ರಾಷ್ಟ್ರದ ಆಡಳಿತ ಕ್ರಮ, ರಾಜ್ಯ ವ್ಯವಸ್ಥೆಯನ್ನು ಹೇಳುತ್ತಾ ಪ್ರಜೆಗಳ ಹಕ್ಕು, ಅಧಿಕಾರ, ಅವಕಾಶ ಮತ್ತು ಕರ್ತವ್ಯಗಳನ್ನು ನಿರ್ದಿಷ್ಟಪಡಿಸಿವೆ.

ಭಾರತದ ಸಂವಿಧಾನ, ಸಮಸ್ತ ಪ್ರಜೆಗಳಿಗೆ ಧರ್ಮ, ಜಾತಿ, ವರ್ಗ, ವರ್ಣ, ಲಿಂಗ, ಭಾಷೆ, ಸ್ಥಳದ ತಾರತಮ್ಯವಿಲ್ಲದೆ ಸಮಾನವಾದ ಮೂಲಭೂತ ಹಕ್ಕುಗಳನ್ನು ಕೊಟ್ಟಿದೆ. ಭಾರತದಲ್ಲೇ ಏಕೆ, ಏಷ್ಯಾಖಂಡದಲ್ಲೇ ಒಂದು ನೂತನ ವಿಚಾರಸರಣಿಯೇ ಭಾರತದ ಸಂವಿಧಾನದಲ್ಲಿನ ಮೂಲಭೂತ ಹಕ್ಕುಗಳಾಗಿವೆ. ಭಾರತ ಸರ್ವೋಚ್ಚ ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯಗಳು ಮೂಲಭೂತ ಹಕ್ಕುಗಳ ರಕ್ಷಕರಾಗಿ ಉಲ್ಲಂಘನೆಗೆ ಶಿಕ್ಷಿಸುವ ಹೊಣೆ ಹೊತ್ತಿದೆ. ಸಂವಿಧಾನದ 12 ರಿಂದ 35ನೇ ನಿಬಂಧನೆವರೆಗೆ ಮೂಲಭೂತ ಹಕ್ಕುಗಳಾಗಿವೆ.

ಮೂಲಭೂತ ಹಕ್ಕುಗಳಲ್ಲಿ ಪ್ರಧಾನವಾಗಿ

1. ಶಿಕ್ಷಣ–ಉದ್ಯೋಗಗಳಲ್ಲಿ ಸಮಾನ ಅವಕಾಶ
2. ಧಾರ್ಮಿಕ ಸ್ವಾತಂತ್ರ್ಯ
3. ಅಭಿವ್ಯಕ್ತಿ ಸ್ವಾತಂತ್ರ್ಯ – ಸಂಘ – ಸಂಸ್ಥೆಗಳನ್ನು ಸ್ಥಾಪಿಸುವುದು ಪತ್ರಿಕಾ ಸ್ವಾತಂತ್ರ್ಯ
4. ಘನತೆಯಿಂದ ಬದುಕುವ ಹಕ್ಕು
5. ದೇಶದಲ್ಲಿ ಸಂಚಾರ, ವಾಸಿಸುವ ಹಕ್ಕು, ಆಸ್ತಿಹಕ್ಕು
6. ಧರ್ಮ, ಜಾತಿ, ಮತ, ಭಾಷೆ, ಲಿಂಗ, ಪ್ರದೇಶದ ತಾರತಮ್ಯದಿಂದ ಅಸ್ಪಶ್ಯತೆಗೆ, ಶೋಷಣೆಗೆ, ಗುಲಾಮಗಿರಿಗೆ ಒಳಪಡಬಾರದು – ಶೋಷಣೆಯ ವಿರುದ್ಧದ ಹಕ್ಕು.

ಭಾರತದ ಸಂವಿದಾನ ಭಾರತೀಯರಿಂದಲೇ ರಚಿಸಲ್ಪಟ್ಟಿದ್ದು ಭಾರತದ ಚಾರಿತ್ರಿಕ, ವೈಚಾರಿಕ ಹಿನ್ನೆಲೆಯನ್ನು ಉಳ್ಳಂಥ ಮತ್ತು ಜಗತ್ತಿನ ಹಲವಾರು ರಾಷ್ಟ್ರಗಳ ಮಾನವೀಯ ಮೌಲ್ಯಗಳನ್ನುಳ್ಳ ಬೃಹತ್ ಸಂವಿಧಾನವಾಗಿರುವುದೇ ಇದರ ವೈಶಿಷ್ಟವಾಗಿದೆ.

ಸಂವಿಧಾನ ರಚಿಸಲು ಯಾರನ್ನು ನಿಯುಕ್ತಿಗೊಳಿಸಬೇಕು ಎಂದು ಹುಡುಕಾಟದಲ್ಲಿದ್ದಾಗ, ಮಹಾತ್ಮ ಗಾಂಧೀಜಿ, "ಡಾ. ಅಂಬೇಡ್ಕರ್ ಅವರು ವಿವೇಕವಂತರು, ನ್ಯಾಯ ವಾದಿಗಳು ಜ್ಞಾನಿಯಾಗಿರುವುದರಿಂದ ಅವರನ್ನೇ ನಿಯುಕ್ತಿಗೊಳಿಸಬೇಕೆಂದು" ಒತ್ತಾಯ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು.

ಭಾರತ 1947, ಆಗಸ್ಟ್ 15ರಂದು ಸ್ವಾತಂತ್ರ್ಯ ಗಳಿಸಿದಾಗ ನಮ್ಮ ಮುಂದೆ ಗಡಿ ಸಮಸ್ಯೆ, ಭಾಷಾವಾರು ರಾಜ್ಯಗಳ ರಚನೆ, ನದಿ ನೀರಿನ ಹಂಚಿಕೆ, ವಲಸಿಗರ ಸಮಸ್ಯೆ, ಆಡಳಿತ ವ್ಯವಸ್ಥೆ ನಿಯಂತ್ರಣ, ರಾಜರುಗಳ ಸ್ಥಾನಮಾನ, ಬಡತನ–ನಿರುದ್ಯೋಗ, ಅಸ್ಪೃಶ್ಯತೆ, ಕೃಷಿ, ಕೈಗಾರಿಕೆ, ಕೋಮುಸಾಮರಸ್ಯ ಮುಂತಾದ ನೂರಾರು ಸಮಸ್ಯೆಗಳು–ಸವಾಲುಗಳು ಮುಂದಿದ್ದವು. ಅದನ್ನು ಎದುರಿಸುವ ಕ್ರಮ ಪರಿಹಾರದ ಮಾರ್ಗಗಳು ಸುಧಾರಣೆಯ ವಿಧಾನಗಳ ಕೈದೀವಿಗೆಯಾಗಿ ಬಂದದ್ದೇ ಭಾರತದ ಸಂವಿಧಾನ. ಭಾರತ ಸಂವಿಧಾನ ಅಂದರೆ ಅದು ಬರಿಯ ಆಡಳಿತದ ಕ್ರಮವಲ್ಲ; ಅದು ಜೀವನ ಕ್ರಮವೇ ಆಗಿದೆ. ಇದರೊಂದಿಗೆ ಒಬ್ಬ ವ್ಯಕ್ತಿ, ಒಂದು ಮೌಲ್ಯ, ಒಂದು ಮತ ಎಂಬ ಸಿದ್ಧಾಂತ ದೇಶದ ಕಟ್ಟಕಡೆಯ ಮನುಷ್ಯನಿಂದ ಹಿಡಿದು ರಾಜ–ಮಹರಾಜ–ಚಕ್ರವರ್ತಿಯೇ ಆಗಿರಲಿ, ಸಮಾನತೆಯ ತತ್ವದಡಿಯಲ್ಲಿ ಎಲ್ಲರನ್ನು ಒಳಗೊಂಡಿತ್ತು. ಇದರೊಂದಿಗೆ, ದೇಶದ ಅಧಿಕಾರ ಚುಕ್ಕಾಣಿ ಹಿಡಿದಿರುವವರು, ಪ್ರಜೆಗಳ ಸರ್ವಾಂಗೀಣ ಅಭಿವೃದ್ಧಿಗಾಗಿ ಆಯವ್ಯಯ – ಅಭಿವೃದ್ಧಿ ಯೋಜನೆ – ಕಲ್ಯಾಣ ಕಾರ್ಯಕ್ರಮಗಳನ್ನು ರಚಿಸಿಕೊಳ್ಳಲು "ನಿರ್ದೇಶಕ ತತ್ವಗಳನ್ನು", ಅಳವಡಿಸಲಾಗಿದೆ. ಸಂವಿಧಾನದ ಆಕ್ಟ್ 38, 39ಎ, 40 ರಿಂದ 47ರವರೆಗೆ ನಿರ್ದೇಶಕ ತತ್ವಗಳಿವೆ. ಅವು ಶಿಕ್ಷಣ, ಆರೋಗ್ಯ ಆಹಾರ, ನೀರಾವರಿ, ಕೃಷಿ, ಉದ್ಯೋಗ ಸೃಜನೆ, ಸಮಾನ ವೇತನ, ಕಾನೂನು ನೆರವು, ಮಹಿಳೆ ಮತ್ತು ಮಕ್ಕಳ ರಕ್ಷಣೆ, ಅಲ್ಪಸಂಖ್ಯಾತರು, ದುರ್ಬಲರು, ವಿಕಲಚೇತನರ ಸಂರಕ್ಷಣೆ ಇನ್ನೂ ಮುಂತಾದುವುಗಳನ್ನು ಒಳಗೊಂಡಿವೆ.

ಮುಂದುವರಿಯುವುದು...



ಕನ್ನಡ... ಕನ್ನಡಿಗ... ಕರ್ನಾಟಕ : ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ (ಕುವೆಂಪು)


(29.12.1904–11.11.1994)

– ಡಾ. ಗಣನಾಥ ಶೆಟ್ಟಿ ಎಕ್ಕಾರು

ಕರ್ನಾಟಕ ಏಕೀಕರಣವಾಗಿ 2020ನೇ ನವೆಂಬರ್ 1ನೆಯ ತಾರೀಖಿಗೆ ಅರವತ್ತನಾಲ್ಕು ವರ್ಷಗಳಾಗುತ್ತದೆ. ಕರ್ನಾಟಕದ ಏಕೀಕರಣ ಹೋರಾಟವು ಕಹಿ-ಸಿಹಿ ಘಟನೆಗಳ ಸ್ಮರಣಲೋಕವನ್ನೇ ತೆರೆದಿಡುತ್ತವೆ. ಈ ಸ್ತರದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ಸಾಹಿತ್ಯ, ಸಂಸ್ಕೃತಿ, ಸಮಾಜ, ಶಿಕ್ಷಣ, ರಾಜಕಾರಣದ ಮೂಲಕ ಕನ್ನಡ ನಾಡು ನುಡಿ ಕಟ್ಟಿದ ಮಹಾನ್ ಚೇತನಗಳನ್ನು ಗಾಂಧಿ ಭವನ ಸ್ಮರಿಸುತ್ತದೆ.

ಇಪ್ಪತ್ತನೆಯ ಶತಮಾನದ ಪ್ರತಿಭೆ, ವರಕವಿ ಬೇಂದ್ರೆಯವರಿಂದ 'ಯುಗದ ಕವಿ ಜಗದ ಕವಿ' ಎನಿಸಿಕೊಂಡವರು ಕಾದಂಬರಿಕಾರ, ನಾಟಕಕಾರ, ವಿಮರ್ಶಕ ಚಿಂತಕ ಮತ್ತು ವಿಶ್ವಮಾನವ ಸಂದೇಶವನ್ನು ನೀಡಿದ ಕನ್ನಡದ ಅಪೂರ್ವ ಕವಿಪುಂಗವ ಕುವೆಂಪು ಅವರಾಗಿದ್ದಾರೆ.ಕನ್ನಡದ ಎರಡನೇ ರಾಷ್ಟ್ರಕವಿ ಪ್ರಶಸ್ತಿ, ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನೂ ಮೊದಲ ಬಾರಿಗೆ ಕನ್ನಡಕ್ಕೆ ತಂದುಕೊಟ್ಟವರೂ ಕರ್ನಾಟಕ ರತ್ನ ಹಾಗೂ ಪಂಪ ಪ್ರಶಸ್ತಿಗೆ ಪ್ರಥಮವಾಗಿ ಭಾಜನರಾದವರು ಪುಟ್ಟಪ್ಪ ಅವರಾಗಿದ್ದಾರೆ. ಇವರು ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹಿರೇಕೊಡಿಗೆಯಲ್ಲಿ ಡಿಸೆಂಬರ್ 29, 1904 ರಲ್ಲಿ ಜನಿಸಿದರು. ತಂದೆ ವೆಂಕಟಪ್ಪಗೌಡ, ತಾಯಿ ಸೀತಮ್ಮ. ಕುವೆಂಪು ಅವರ ಪ್ರಾಥಮಿಕ ಶಿಕ್ಷಣ ತೀರ್ಥಹಳ್ಳಿಯಲ್ಲಿ, ಮೈಸೂರಿನ ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಮುಂದೆ ಶಿಕ್ಷಣ ಮುಂದುವರಿಸಿದರು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಮತ್ತು ಕನ್ನಡದಲ್ಲಿ ಎಂ.ಎ. ಪದವಿಯನ್ನೂ ಪಡೆದರು. ಟಿ.ಎಸ್. ವೆಂಕಣ್ಣಯ್ಯ ಅವರು ಇವರಿಗೆ ಗುರುಗಳಾಗಿದ್ದರು. ಕುವೆಂಪು ಅವರು ಮೈಸೂರಿನ ಮಹಾರಾಜ ಕಾಲೇಜಿನ ಪ್ರಾಧ್ಯಾಪಕರೂ, ಪ್ರಾಂಶುಪಾಲರೂ ಆಗಿದ್ದರು. ನಂತರ ಉಪಕುಲಪತಿಗಳಾಗಿ ತಮ್ಮ ಕಲ್ಪನೆಯ ಕೂಸಾದ ಮಾನಸ ಗಂಗೋತ್ರಿಯನ್ನು ಕಟ್ಟಿ ಬೆಳೆಸಿದರು. ವಿಶ್ವವಿದ್ಯಾನಿಲಯವನ್ನು ಅಧ್ಯಯನಾಂಗ, ಸಂಶೋಧನಾಂಗ ಹಾಗೂ ಪ್ರಸಾರಾಂಗ ಎಂಬುದಾಗಿ ವಿಕೇಂದ್ರೀಕರಣಗೊಳಿಸಿದರು. ಕನ್ನಡದಲ್ಲಿ ಪಠ್ಯಪುಸ್ತಕಗಳನ್ನು ಬರೆಸಿ ಕನ್ನಡ ಮಾಧ್ಯಮದ ತರಗತಿಗಳನ್ನು ಆರಂಭಿಸಿದರು. ಕುವೆಂಪು ಅವರು ಹೇಮಾವತಿ ಅವರನ್ನು ಸರಳ ರೀತಿಯಲ್ಲಿ ವಿವಾಹವಾದರು. ಪೂರ್ಣಚಂದ್ರ ತೇಜಸ್ವಿ, ಕೋಕಿಲೋದಯ, ಚೈತ್ರ, ಇಂದುಕಲಾ ಹಾಗೂ ತಾರಿಣಿ ಅವರ ಮಕ್ಕಳು. ಪೂರ್ಣಚಂದ್ರ ತೇಜಸ್ವಿ ಅವರು ಕನ್ನಡದ ಅಗ್ರಮಾನ್ಯ ಸಾಹಿತಿಗಳಾಗಿದ್ದಾರೆ.

ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ, ಅಂದರೆ ಮಹಾಕಾವ್ಯ, ಭಾವಗೀತೆ, ನಾಟಕ ಈ ಮೂರು ಮೂಲ ಸಾಹಿತ್ಯದ ಪ್ರಕಾರಗಳನ್ನೂ 50ವರ್ಷ ತುಂಬುವ ಹೊತ್ತಿಗೇ ಸೃಷ್ಟಿಸಿ, ಕನ್ನಡ ಸಾಹಿತ್ಯದ ನವೋದಯಕ್ಕೆ ಭದ್ರಬುನಾದಿ ಹಾಕಿದರು. ನಂತರ ಆಧುನಿಕ ಸಾಹಿತ್ಯ ಪ್ರಕಾರಗಳಾದ, ಕಾದಂಬರಿ, ಕತೆ, ಜೀವನ ಚರಿತ್ರೆ, ವಿಮರ್ಶೆ, ಮಕ್ಕಳ ಸಾಹಿತ್ಯ, ಆತ್ಮಕತೆ, ಕಾವ್ಯಮೀಮಾಂಸೆ ಪ್ರಕಾರಗಳಲ್ಲಿ 80ಕ್ಕೂ ಮಿಕ್ಕಿ ಕೃತಿಗಳನ್ನು ರಚಿಸಿದರು. ಇವರು ರಚಿಸಿದ ಎರಡು ಬೃಹತ್ ಕಾದಂಬರಿಗಳು "ಕಾನೂರು ಸುಬ್ಬಮ್ಮ ಹೆಗ್ಗಡತಿ", "ಮಲೆಗಳಲ್ಲಿ ಮದುಮಗಳು" ಜಗತ್ತಿನ ಶ್ರೇಷ್ಠ ಕಾದಂಬರಿಗಳ ಸಾಲಿಗೆ ಸೇರುತ್ತವೆ. ಇವು ಮಲೆನಾಡಿನ ರಾಮಾಯಣ, ಮಹಾಭಾರತದಂತಿವೆ ಎಂದು ಪ್ರಖ್ಯಾತಿ ಪಡೆದಿವೆ. ಇವರು ರಚಿಸಿದ್ದ ಒಟ್ಟು 14 ನಾಟಕಗಳಲ್ಲಿ ಮೋಡಣ್ಣನ ತಮ್ಮ, ರಕ್ತಾಕ್ಷಿ, ಮಹಾರಾತ್ರಿ, ಬಲಿದಾನ, ಬಿರುಗಾಳಿ, ಚಂದ್ರಹಾಸ, ಬೆರಳ್ಗೆ ಕೊರಳ್, ಜಲಗಾರ, ನನ್ನ ಗೋಪಾಲ, ಶೂದ್ರ ತಪಸ್ವಿ, ಕಾನೀನ, ವಾಲ್ಮೀಕಿಯ ಭಾಗ್ಯ, ಸ್ಮಶಾನ ಕುರುಕ್ಷೇತ್ರ ಬಹು ಜನಪ್ರಿಯವಾಗಿವೆ ಮತ್ತು ನೂರಾರು ರಂಗ ಪ್ರಯೋಗಗಳನ್ನು ಕಂಡಿವೆ. ಕುವೆಂಪು ಅವರ ಶತಮಾನದ ಮಹಾಕಾವ್ಯ "ಶ್ರೀ ರಾಮಾಯಣ ದರ್ಶನಂ" ಕೃತಿಗೆ ದೇಶದ ಅತ್ಯುನ್ನತ ಜ್ಞಾನಪೀಠ ಪ್ರಶಸ್ತಿ ಸಂದಿತ್ತು. ಚಿಕ್ಕಮಗಳೂರಿನ ಜನರು ಆನೆ ಅಂಬಾರಿಯಲ್ಲಿ ಈ ಮಹಾಕೃತಿಯನ್ನೂ ರಾಮ–ಲಕ್ಷ್ಮಣ–ಸೀತೆ ಅವರ ವಿಗ್ರಹವನ್ನೂ ಪೂರ್ಣ ಕುಂಭದೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿದ್ದರು. ಈ ಸಂದರ್ಭದಲ್ಲಿಯೇ ಕುವೆಂಪು ಸಾಹಿತ್ಯ ಸಪ್ತಾಹವನ್ನು ಅವರ ಸಮ್ಮುಖದಲ್ಲಿಯೇ ಹಮ್ಮಿಕೊಳ್ಳಲಾಗಿತ್ತು. ಮತ್ತು ಸ್ಮರಣ ಸಂಚಿಕೆ, ಉಪಾಯನ ಕೃತಿಕರಂಡವನ್ನು ಪ್ರಕಟಿಸಲಾಗಿತ್ತು. ಇವರ ಮೊದಲ "ಕೊಳಲು" ಕವನ ಸಂಕಲನವು ಬಿ.ಎಂ.ಶ್ರೀ ಅವರ ಮುನ್ನುಡಿಯೊಂದಿಗೆ ಮಾಸ್ತಿ ಅವರಿಂದ ಪ್ರಕಟಿತವಾಗಿತ್ತು. ಇವರ 31 ಕವನ ಸಂಕಲನಗಳಲ್ಲಿ ಅನಿಕೇತನ, ಕೋಗಿಲೆ ಮತ್ತು ಸೋವಿಯಟ್ ರಷ್ಯಾ, ಪಾಂಚಜನ್ಯ, ನವಿಲು ಕೃತಿಕಿ ಕಿಂಕಿಣಿ, ಕಲಾಸುಂದರಿ, ಪಕ್ಷಿಕಾಶಿ, ಕೊಳಲು, ಸ್ವರ್ಗದ್ವಾರದಿ ಯಕ್ಷಪ್ರಶ್ನೆ (ನಾನು ಹೇಮಿಯ ಗಂಡ ಎಂದು ಗಂಡೆಂಬ ಅಹಕಾರದ ತೊರೆದ ಪರಿಯನ್ನು ವಿವರಿಸುತ್ತದೆ.) ಪ್ರಮುಖವಾದವುಗಳಾಗಿವೆ. ಮಹಾಭಾರತದ ಪರಂಪರೆಯನ್ನು ಮುಂದುವರಿಸುತ್ತಾ, ಅವರು ಚಿತ್ರಾಂಗದಾ ಎಂಬ ಖಂಡಕಾವ್ಯವನ್ನು ರಚಿಸಿದರು. ಕುವೆಂಪು ಅವರು, ಸ್ವಾಮಿ ವಿವೇಕಾನಂದ (1932), ಮತ್ತು ಶ್ರೀ ರಾಮಕೃಷ್ಣ ಪರಮಹಂಸ (1934) ಅವರ ಜೀವನ ಚರಿತ್ರೆಯನ್ನು ಜೀವಚೈತನ್ಯದ ಕೃತಿಯಾಗಿಸಿದ್ದಾರೆ. ಜನಪ್ರಿಯ ವಾಲ್ಮೀಕಿ ರಾಮಾಯಣ 1972ರಲ್ಲಿ ರಚಿಸಿದ್ದರು. ನಂತರ ತಪೋನಂದನ, ಸಾಹಿತ್ಯ ವಿಮರ್ಶೆ, ಕಾವ್ಯ ಮೀಮಾಂಸೆ, ರಸೋವೈಸ, ದ್ರೌಪದಿಯ ಶ್ರೀಮುಡಿ ಮೂಲಕ ಹೊಸ ಸಂವೇದನೆ, ನೂತನ ವಿಮರ್ಶಾ ಪ್ರಜ್ಞೆಯನ್ನು ಬೆಳೆಸಿದರು.



ಭಾರತ ಸ್ವಾತಂತ್ರ್ಯ ಮತ್ತು ಕರ್ನಾಟಕದ ಏಕೀಕರಣ ಚಳುವಳಿಗಳು ಕುವೆಂಪು ಅವರನ್ನು ಆವರಿಸದೆ ಇರಲಿಲ್ಲ. ಯುವಕ ಕುವೆಂಪು 1924ರಲ್ಲಿ ಗಾಂಧೀಜಿ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಮಿತ್ರರೊಂದಿಗೆ ಹೋಗಿದ್ದರು. ಉಡುಪು–ತೊಡಪಿನಲ್ಲಿ ಬದಲಾವಣೆಯಾದವು. ಅವರ ಪ್ರಭಾವದಿಂದಾಗಿ, ಜಲಿಯನ್‌ವಾಲಾ ಬಾಗ್, ದೇಶಬಂಧು ದಾಸ್ ಗುಪ್ತಾ, ಎಲಿಜಿ ರಿಟನ್ ಆಫ್ ಗುಂಬಜ್, ಕವಿತೆಗಳನ್ನು ಬರೆದರು.

ಪುಟ 18ರಲ್ಲಿ ಮುಂದುವರಿದಿದೆ...

ಕನಕದಾಸರು (1508 – 1606)

– ಪ್ರೊ. ಬಿ. ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಕನಕದಾಸರು ಸ್ವೀಕಾರ ಮಾಡಿದ ಮತದ ಬಗ್ಗೆ ಸಂದೇಹಕ್ಕೆ ಆಸ್ಪದವಿದೆ. ಇದಕ್ಕೆ ಮೋಹನ ತರಂಗಿಣೀ ಕಾವ್ಯದಲ್ಲಿನ ಶ್ರೀವೈಷ್ಣವ ಪರವಾದ ಸಾಕ್ಷ್ಯಗಳು ಕಾರಣವಾಗಿವೆ. ಮೊದಲು ಶ್ರೀರಾಮಾನುಜ ಮತದ ಶ್ರೀವೈಷ್ಣವ ತತ್ವಗಳನ್ನು ಸ್ವೀಕರಿಸಿ "ಮೋಹನ ತರಂಗಿಣಿ" ಮುಂತಾದ ಕಾವ್ಯಗಳನ್ನು ಬರೆದಿದ್ದರೂ, "ಹರಿಭಕ್ತಿ ಸಾರ" ದಲ್ಲಿ ಉಳಿದ ಪದಪದ್ಯಗಳಲ್ಲಿ ಮಾಧ್ವ ಸಂಪ್ರದಾಯದ ಪ್ರಮೇಯಗಳನ್ನು ಎತ್ತಿ ಹಿಡಿದಿದ್ದಾರೆ. ಈ ಬಗ್ಗೆ ಪಂಚಮುಖಿ ಅವರು "ಇವರು ಕಡೆಯ ಭಾಗದಲ್ಲಿ ಮಾಧ್ವ ವೈಷ್ಣವರಾಗಿ ಕಾಗಿನೆಲೆಯಲ್ಲಿ ನೆಲಸಿ ಅಲ್ಲಿಯೇ ಹರಿಪದವನ್ನೈದಿಹರೆಂದು ತಿಳಿಯಬಹುದು"– ಎನ್ನುತ್ತಾರೆ. ಆದರೆ ರಂ.ಶ್ರೀ. ಮುಗಳಿ ಅವರು "ಮೊದಲೊಂದು ಮತ, ಆಮೇಲೆ ಇನ್ನೊಂದು ಎಂಬ ಸಂಪ್ರದಾಯ ಸ್ವೀಕಾರದ ಕಟ್ಟಿನಲ್ಲಿ ಕನಕದಾಸರನ್ನು ಇರಿಸುವುದು ಅವರಿಗೆ ಅನ್ಯಾಯವೆಂದು ನಮಗೆ ತೋರುತ್ತದೆ. ಕನಕದಾಸರು ಬೆಳೆದಂತೆ ಎಲ್ಲ ಮತದ ಸಂಸ್ಕಾರಗಳಿಗೆ ಒಳಗಾಗಿ ಭಾಗವತ ಧರ್ಮದೃಷ್ಟಿಯನ್ನು ಸ್ಥಿರ ಪಡಿಸಿಕೊಂಡರು. ನಮ್ಮ ದೃಷ್ಟಿಯಲ್ಲಿ ಆತ ಯಾವೊಂದು ಮತದ ಪಡಿಯಚ್ಚಿನಲ್ಲಿ ಮಾತ್ರ ಬೆಳೆಯದೆ, ಎಲ್ಲ ಮತದ ಸಾರಾಗ್ರಹಿಯಾದ ಪರಮಭಕ್ತನಾಗಿದ್ದನು. ಅವನ ಮೇಲೆ ರಾಮಾನುಜ, ಮಾಧ್ವ ಮತ, ಪ್ರಭಾವ ಆಗಿದೆ. ಅವರು ಕಾಲ, ದೇಶ, ಮತ, ತತ್ವಗಳನ್ನು ಮೀರಿದ ದೈವಜೀವಿಗಳು ಸರ್ವ ಸಮದರ್ಶಿಗಳು" ಎಂದಿದ್ದಾರೆ.

ಕನಕದಾಸರು ಕೀರ್ತನೆಗಳನ್ನಲ್ಲದೆ ಈ ಯುಗದ ವರ್ಣಕ ಪರಂಪರೆಗೆ ಅನುಸರಿಸಿ ಹಲವು ಷಟ್ಪದಿಗಳನ್ನು ರಚಿಸಿದರು.

1. ಹರಿಭಕ್ತಿ ಸಾರ
2. ರಾಮಧಾನ್ಯ ಚರಿತ್ರೆ
3. ನಳ ಚರಿತ್ರೆ
4. ಮೋಹನ ತರಂಗಿಣಿ
5. ನೃಸಿಂಹ ಸ್ತವ


ಹರಿಭಕ್ತಿ ಸಾರವು ಭಾಮಿನಿ ಷಟ್ಪದಿಯ 110 ಪದ್ಯಗಳ ನೀತಿ, ಭಕ್ತಿ, ವೈರಾಗ್ಯಗಳನ್ನು ಬೋಧಿಸುವ ಕೃತಿ. ಪ್ರತಿಯೊಂದು ಪದ್ಯವೂ "ರಕ್ಷಿಸು ನಮ್ಮ ಅನವರತಾ" ಎಂದು ವಿಷ್ಣುವಿನ ಪ್ರಾರ್ಥನೆಯೊಂದಿಗೆ ಅಂತ್ಯವಾಗುತ್ತದೆ. ಈ ಕೃತಿಯಲ್ಲಿ ಭಕ್ತನ ಎದೆ ತುಂಬಿದ ಮೊರೆ ತಿಳಿಯಾದ ಸರಣಿಯಲ್ಲಿದೆ, ಛಂದ ಪ್ರವಾಹಿಯಾಗಿದೆ. "ತತ್ವ ನೀತಿಗಳ ಮಿಶ್ರಣವಿದ್ದರೂ ಆರ್ತಶಕ್ತಿಯ ಮತ್ತು ಶರಣ ವೃತ್ತಿಯ ರಸಾವೇಶವು ಅವಿರತವಾಗಿದ್ದು ಭಕ್ತಿ ಪ್ರಕೃತಿಯ ಜನರ ಪಾರಾಯಣಕ್ಕೆ ಯೋಗ್ಯವಾಗಿದೆ" ಎಂದಿದ್ದಾರೆ ರಂ.ಶ್ರೀ, ಅವರು.

ಕವಿತೆ ಭಕ್ತಿ ಭಾವಪೂರಿತವಾಗಿದ್ದು, ಸರಳ ಸುಂದರವಾಗಿವೆ. "ದೀನ ನಾನು, ಸಮಸ್ತ ಲೋಕಕೆ ದಾನಿ ನೀನು, ವಿಚಾರಿಸಲು ಮತಿಹೀನ ನಾನು, ಮಹಾಮಹಿಮ ಕೈವಲ್ಯಪತಿ ನೀನು...." ಉನ್ನತ ಭಾವಗಳನ್ನು ಸರಳವಾಗಿ ಲೀಲಾಜಾಲವಾಗಿ ಹೇಳಿದ್ದಾರೆ. "ಎಂಜಲೆಂಜಲು ಎಂಬರಾ ನುಡಿ ಎಂಜಲಲ್ಲವೇ? ವಾರಿಜನಪರದೆಂಜಲಲ್ಲವೆ? ಹಾಲುಕರುವಿನ ಎಂಜಲಲ್ಲವೆ?... ಎಂಬ ವೈಚಾರಿಕತೆ ನುಡಿಗಳು ಗಮನ ಸೆಳೆಯುತ್ತವೆ.

ರಾಮಧಾನ್ಯ ಚರಿತ್ರೆ : ರಾಮಧಾನ್ಯ ಚರಿತ್ರೆಯ ವಸ್ತುವನ್ನು ಕುರಿತು ರಂ.ಶ್ರೀ. ಅವರು "ನಮಗೆ ತಿಳಿದ ಮಟ್ಟಿಗೆ ಕನ್ನಡದಲ್ಲಿ ಅಪರೂಪವಾದ ಸ್ವಕಲ್ಪಿತ ಕಥಾವಸ್ತುಗಳಲ್ಲಿ ಒಂದನ್ನು ನಿರೂಪಿಸುತ್ತಿದೆ" ಎಂದು ಅಭಿಪ್ರಾಯಪಡುತ್ತಾರೆ. ಇದೊಂದು ಚಮತ್ಕಾರಯುತವಾದ ಖಂಡಕಾವ್ಯ. ಇದರಲ್ಲಿ ರಾಗಿಯ ಮಹಿಮೆಯನ್ನು ಸಂಸ್ಥಾಪಿಸ ಹೊರಟಿರುವ 156 ಪದ್ಯಗಳಿವೆ. ದೇವನು ಬಡವರ ಕೈವಾರಿ, 'ಭಕ್ತರ ಪಕ್ಷಪಾತಿ ಎಂಬುದನ್ನು ಸೂಚಿಸುವ ರೀತಿಯಲ್ಲಿ ರಾಗಿ ಮತ್ತು ಭತ್ತಗಳ ನಡುವೆ ವಾದ ನಡೆಯಿಸಿ ಅದಲ್ಲಿ ರಾಗಿ ಗೆದ್ದಿತೆಂದೂ ಅದಕ್ಕೆ ರಾಮನು "ರಾಘವ" ಎಂಬ ತನ್ನ ಹೆಸರನ್ನಿತ್ತನೆಂದೂ ಇದರಲ್ಲಿ ಕನಕದಾಸರು ಕಲ್ಪಿಸಿದ್ದಾರೆ. ಅಲ್ಲದೆ ಇದರಲ್ಲಿ ಕವಿ ಉತ್ತಮ ಜಾತಿಯವರೆನಿಸಿ ಕೊಂಡವರು, ಶ್ರೀಮಂತರೆನಿಸಿಕೊಂಡವರು, ಅಂತಸ್ಸತ್ವ– ದಿಂದಿದ್ದರೂ ಅಹಂಕಾರಿಗಳಾಗಿ, ಬಹಿರಾಡಂಬರದಿಂದ ಬಾಳತಕ್ಕವರು – ದೈವಕ್ಕೆ ದೂರಾದವರು ಎಂಬ ಸತ್ಯವನ್ನು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. "ಈ ಕಲ್ಪನೆಯಲ್ಲಿ ಕವಿ ತನ್ನ ಭಾಗವತ ಮನೋಭಾವವನ್ನೂ ಜನತಾ ದೃಷ್ಟಿಯನ್ನೂ ಪ್ರಕಟಗೊಳಿಸಿದ್ದಾರೆ" ಎಂದು ರಂ.ಶ್ರೀ. ಅವರು ನುಡಿದಿದ್ದಾರೆ.

ನಳ ಚರಿತ್ರೆ : ಇದು ರಮ್ಯವಾದ ಒಂದು ಕಥನಕಾವ್ಯ. ಸಂಸ್ಕೃತ ಮಹಾಭಾರತದಲ್ಲಿ 28 ಅಧ್ಯಾಯಗಳಲ್ಲಿ ವಿಸ್ತಾರವಾಗಿರುವ ನಳೋಪಾಖ್ಯಾನದಿಂದ ಕಥಾವಸ್ತುವನ್ನು ಎತ್ತಿಕೊಂಡು, ಭಾಮಿನಿ ಷಟ್ಪದಿಯ ಸುಮಾರು 480 ಪದ್ಯಗಳನ್ನೊಳಗೊಂಡು ಒಂಭತ್ತು ಸಂಧಿಗಳಲ್ಲಿ ನಳ– ದಮಯಂತಿಯರ ಕಥೆಯನ್ನು ಕವಿ ಸಂಗ್ರಹವಾಗಿ ಸಾರವತ್ತಾಗಿ ನಿರೂಪಿಸಿದ್ದಾರೆ. ಇದು ಪ್ರಧಾನವಾಗಿ ಲೌಕಿಕ ಕಾವ್ಯವಾಗಿದ್ದರೂ ಕವಿ "ಕಮಲನಾಥನ ಕರುಣ ಕವಚವು ಸವೆದರಂರೇಗುವರು", "ದೈವವ ನೆನೆವ ಭಕ್ತರಿಗುಂಟೆ ಭಯವೆಲೆ ನೃಪತಿ" ಎಂಬ ಉಕ್ತಿಗಳಲ್ಲಿ ಭಕ್ತಿ ಪಾರಮ್ಯವನ್ನು ಎತ್ತಿ ಹಿಡಿದಿದ್ದಾನೆ. ಮೂಲಭಾರತದಿಂದ ಕಥೆಯನ್ನು ಎತ್ತಿಕೊಂಡಿದ್ದರೂ ಕವಿ ಹಲಕೆಲವು ಹೃದ್ಯವಾದ ಮಾರ್ಪಾಟುಗಳನ್ನು ಮಾಡಿಕೊಂಡಿದ್ದಾನೆ.

ಮುಂದುವರಿಯುವುದು...



ಹೆಮ್ಮೆಯ ಕನ್ನಡಿಗ : ಬಿ.ಎಂ. ಶ್ರೀಕಂಠಯ್ಯ : (03.01.1884 – 05.01. 1946)

– ಡಾ. ಎಸ್. ರಾಮಲಿಂಗೇಶ್ವರ (ಸಿಸಿರಾ)

ಕನ್ನಡ ನಾಡು ನುಡಿಯನ್ನು ವಿಶ್ವವಿಖ್ಯಾತಗೊಳಿಸಿದ ದಿಗ್ಗಜರುಗಳ ಕಿರು ಪರಿಚಯವೇ ಈ ಅಂಕಣ



20ನೇ ಶತಮಾನದ ಆರಂಭದಲ್ಲಿ ಕನ್ನಡ ಸಾಹಿತ್ಯಕ್ಕೆ ಹೊಸ ಮೆರುಗು, ವಿನ್ಯಾಸ, ಸ್ವರೂಪವನ್ನು ನೀಡಿದವರು ಬಿಎಂಶ್ರೀ ಅವರಾಗಿದ್ದಾರೆ. ಅಂದು ಕನ್ನಡಿಗರು ಕನ್ನಡ ಮಾತನಾಡಲು ಸಂಕೋಚ ಪಡುತ್ತಿದ್ದ ಕಾಲ. ಆಗ ಎಲ್ಲ ಕಾರ್ಯಗಳೂ ಇಂಗ್ಲಿಷ್‌ನಲ್ಲೇ ನಡೆಯುತ್ತಿತ್ತು. ಕನ್ನಡಕ್ಕೆ ಯಾವುದೇ ಉನ್ನತ ಸ್ಥಾನ–ಮಾನಗಳಿರಲಿಲ್ಲ. ಅಂತಹ ಸಮಯದಲ್ಲಿ ಕನ್ನಡಕ್ಕೆ ನ್ಯಾಯವಾದ ಸ್ಥಾನವನ್ನು ದೊರಕಿಸಿ ಕೊಡಲೇಬೇಕೆಂದು ಆಶಿಸಿ, ತಮ್ಮ ಜೀವನವನ್ನು ಕನ್ನಡಕ್ಕಾಗಿ ಮುಡಿಪಾಗಿಟ್ಟವರು ಬಿ. ಎಂ. ಶ್ರೀಕಂಠಯ್ಯನವರು. ಧಾರವಾಡದಲ್ಲಿ 1911ರಲ್ಲಿ ಕನ್ನಡ ಅನಿವಾರ್ಯತೆಯ ಕುರಿತು ಯುಗ ಪ್ರವರ್ತನೆಯ ಭಾಷಣವನ್ನು ಮಾಡಿದರು.

ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕಿನ ಸಂಪಿಗೆ ಹಳ್ಳಿಯಲ್ಲಿ 1884ರ ಜನವರಿ 3ರಂದು ಮೈಲಾರಯ್ಯ, ಭಾಗೀರಥಮ್ಮ ದಂಪತಿಗಳಿಗೆ ಬಿ.ಎಂ.ಶ್ರೀಯವರು ಮಗನಾಗಿ ಜನಿಸಿದ್ದರು. ಪ್ರಾಥಮಿಕ ಶಿಕ್ಷಣವನ್ನು ಬೆಳ್ಳೂರಿನಲ್ಲಿ, 1906ರಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿ.ಎ, 1907ರಲ್ಲಿ ಮದರಾಸು ವಿವಿಯಲ್ಲಿ ಬಿ.ಎಲ್., 1909ರಲ್ಲಿ, ಎಂ.ಎ. ಪದವಿ ಪಡೆದರು. ಅದೇ ವರ್ಷವೇ ಮೈಸೂರಿನಲ್ಲಿ ಇಂಗ್ಲಿಷ್ ಭಾಷಾ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ನಂತರ 1926–1930 ರವರೆಗೆ ನಾಲ್ಕು ವರ್ಷಗಳ ಕಾಲ ಕುಲಸಚಿವರಾಗಿದ್ದರು. 1938 ರಿಂದ 1942ರವರೆಗೆ ಕನ್ನಡ ಸಾಹಿತ್ಯ ಪರಿಷತ್‌ನ ಉಪಾಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಬಿ.ಎಂ. ಶ್ರೀಕಂಠಯ್ಯ ಅವರು ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಗಾಗಿ ಅವಿಶ್ರಾಂತವಾಗಿ ದುಡಿದರು. ಅವರ ಪ್ರೀತಿಯ ವಿದ್ಯಾರ್ಥಿಗಳಾದ 'ಮಾಸ್ತಿ', 'ಕುವೆಂಪು', 'ಎಸ್.ವಿ.ರಂಗಣ್ಣ', 'ತೀ.ನಂ.ಶ್ರೀಕಂಠಯ್ಯ', 'ಜಿ.ಪಿ.ರಾಜರತ್ನಂ', 'ಡಿ.ಎಲ್.'ನರಸಿಂಹಚಾರ್' ಮುಂತಾದವರಿಗೆ ಕನ್ನಡದಲ್ಲಿಯೇ ಸಾಹಿತ್ಯ ರಚನೆ ಮಾಡಲು, ಕನ್ನಡ ಭಾಷೆ ಬೆಳೆಸಲು ಪ್ರೋತ್ಸಾಹಿಸುತ್ತಾ, ತಾವೂ ಸಹ ಅದೇ ಕೈಂಕರ್ಯದಲ್ಲಿ ತೊಡಗಿದರು.

ಕನ್ನಡದ ಜನತೆ ಅಭಿಮಾನದಿಂದ ಶ್ರೀಕಂಠಯ್ಯ ಅವರನ್ನು'ಕನ್ನಡದ ಕಣ್ವ' ಎಂದು ಕರೆದರು. ತಂದೆ–ತಾಯಿಯರಾದ ವಿಶ್ವಾಮಿತ್ರ – ಮೇನಕೆಯರು ಮಗಳು ಶಕುಂತಳೆಯನ್ನು ಕಾಡಿನಲ್ಲಿ ಬಿಟ್ಟು ಹೋದರು. ಆ ಅನಾಥ ಮಗುವನ್ನು ಮಹರ್ಷಿ ಕಣ್ವರು ಪ್ರೀತಿಯಿಂದ ಬೆಳೆಸಿದರು. ಹೀಗೆ ಶಕುಂತಲೆಯನ್ನು ಕಣ್ವರು ಬೆಳಸಿದಂತೆ, ಕನ್ನಡವನ್ನು ಬೆಳೆಸುವವರು ಇಲ್ಲದಿದ್ದಾಗ 'ಶ್ರೀ' ಅವರು ಕನ್ನಡವನ್ನು ಬೆಳೆಸಿದರು ಎಂಬ ಪ್ರತೀತಿ ಇದೆ.

ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಶ್ರೀಕಂಠಯ್ಯನವರು ನಾಡಿನ ಮೂಲೆ ಮೂಲೆಗಳಲ್ಲಿ ಸಂಚರಿಸಿ ಕನ್ನಡದ ಶ್ರೇಷ್ಠತೆಯನ್ನು, ಅನಿವಾರ್ಯತೆಯನ್ನು ಕುರಿತು ಜನರನ್ನು ಜಾಗೃತಿಗೊಳಿಸಿದರು. ಕನ್ನಡ ಭಾಷೆಯನ್ನು ಬೆಳೆಸಲು ಬಿ.ಎಂ.ಶ್ರೀ ತಮ್ಮ ಸಂಪೂರ್ಣ ಶಕ್ತಿಯನ್ನು ಧಾರೆಯೆರೆದರು. 'ಪ್ರೊ. ಬಿ.ಎಂ.ಶ್ರೀ. ಅವರು 'ಹೊಂಗನಸು', 'ಇಂಗ್ಲಿಷ್ ಗೀತೆಗಳು' ಎಂಬ ಕವನ ಸಂಕಲನಗಳನ್ನು ರಚಿಸಿದ್ದಾರೆ. ನ್ಯೂಮನ್ ಕವಿ ಬರೆದ **'Lead Kindly Light'** ಎಂಬ ಕವಿತೆಯನ್ನು ಕನ್ನಡಕ್ಕೆ ಅನುವಾದಿಸಿ 'ಕರುಣಾಳು ಬಾ ಬೆಳಕೆ' ಎಂದು ಬರೆದ ಜನಪ್ರಿಯ ಗೀತೆ ಇಂದಿಗೂ ಜನಮನವನ್ನು ತುಂಬಿದೆ. ಇವರು ರಚಿಸಿದ ಕನ್ನಡದ ಮೊಟ್ಟಮೊದಲ ಟ್ರಾಜಿಡಿ ನಾಟಕ– 'ಅಶ್ವತ್ಥಾಮನ್' ಗ್ರೀಕ್' ಕಥೆಯನ್ನಾಧರಿಸಿತ್ತು. "ಪೌರಾಣಿಕದ ಅಶ್ವತ್ಥಾಮ ಒಬ್ಬ ಚಿರಂಜೀವಿ. ಆದರೆ ಅವನು ಆತ್ಮಹತ್ಯೆ ಮಾಡಿಕೊಂಡನೆಂದು ನಾಟಕವನ್ನು ಮುಕ್ತಾಯ ಗೊಳಿಸಿದ್ದಕ್ಕಾಗಿ ಸಂಪ್ರದಾಯವಾದಿಗಳು ವಿವಾದ ವನ್ನೆಬಿಸಿದ್ದರು." ಅವರ ಅವಿಸ್ಮರಣೀಯ ಕೆಲಸಕ್ಕಾಗಿ ಮೈಸೂರಿನ ಮಹಾರಾಜರು 1938ರಲ್ಲಿ 'ರಾಜ ಸೇವಾಸಕ್ತ' ಬಿರುದನ್ನು ನೀಡಿ ಗೌರವಿಸಿದರು. 1928ರಲ್ಲಿ 'ಗುಲಬರ್ಗಾ'ದಲ್ಲಿ ನಡೆದ '14ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ'ರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ ಶ್ರಮಿಸಿದ್ದಾರೆ. ಹೀಗೆ ಕನ್ನಡ ಸಾಹಿತ್ಯಕ್ಕಾಗಿಯೇ ಆಜೀವ ಪರ್ಯಂತ ದುಡಿದವರಾಗಿದ್ದಾರೆ ಬಿ.ಎಂ.ಶ್ರೀ

ಇವರು ಕನ್ನಡ ಏಕೀಕರಣದ ಸಂದರ್ಭದಲ್ಲಿ ಬರೆದ ಕವನದ ಸಾಲುಗಳು

ಬನ್ನಿ ಮಕ್ಕಳಿರಾ
ಒಕ್ಕೊರಲೆಲ್ಲರೂ ಕೂಗಿ ಈ ಒಕ್ಕೂಗ
ಈ ಹಿರಿಯ ಕೂಗ
ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ
ಹಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ
ಎಂಬ ಧ್ವನಿ ಈಗಲೂ ಕನ್ನಡಿಗರನ್ನು ಒಗ್ಗೂಡಿಸುವ ಘೋಷ ವಾಕ್ಯವಾಗಿದೆ.

ಕಸ್ತೂರ್‌ಬಾ ಗಾಂಧಿ

ಮಿಸ್ ಹೆಲಿಮನ್ – ಸರಳಾದೇವಿ

ಕರ್ನಾಟಕ ಸರ್ವೋದಯ ಸಾಹಿತ್ಯ ಸಮಿತಿಯು ಹಿಂದಿಯಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಕೃತಿಯನ್ನು ಹೊದಿಕೆ ಮಾಸ್ತರರಿಂದ ಕನ್ನಡಕ್ಕೆ ಅನುವಾದ ಮಾಡಿಸಿ ಅಂದಿನ ಅಧ್ಯಕ್ಷರಾದ ಕೆ.ಎಸ್. ನಾರಾಯಣಸ್ವಾಮಿ ಅವರು 1974ರಲ್ಲಿ ಪ್ರಕಟಿಸಿದ ಕಸ್ತೂರ್‌ಬಾ ಗಾಂಧಿ ಕೃತಿಯ ಭಾಗ ನಿಯಮಿತವಾಗಿ ಬರಲಿದೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಆದರೆ ಇದಕ್ಕೆ ಬೇಕಾಗುವ ಸಾಧನಗಳನ್ನು ಅವರು ಎಲ್ಲಿಂದ ಹೇಗೆ ಸಂಪಾದಿಸುತ್ತಾರೆ ಎಂಬುದನ್ನು ಕೇಳಿ ತಿಳಿದುಕೊಳ್ಳಬೇಕೆಂದು ಭಗಿನಿಯರಿಗೆ ಅನ್ನಿಸುವುದೇ ಇಲ್ಲ. ಅವರು ಪ್ರಾಮಾಣಿಕತನದಿಂದ ಸಮಾಜ ಸೇವೆ ಮಾಡಿಯಾದರೂ ಸಂಪಾದಿಸಿರಬಹುದು. ಇಲ್ಲವೆ ಸಮಾಜ ವಿರೋದಿ ಪ್ರವೃತ್ತಿಗಳನ್ನು ನಡಿಸಿಯಾದರೂ ಸಂಪಾದಿಸಿರಬಹುದು. ಪಾಶ್ಚಿಮಾತ್ಯರ ಸಂಪರ್ಕದಿಂದ ಸಮಾಜದ ಮಾನ್ಯತೆಗಳೂ ವೃತ್ತಿಗಳೂ ಬದಲಾಗತೊಡಗಿವೆ. ಇದರಿಂದಾಗಿಯೇ ಸಮಾಜದ ಮೇಲೆ ಭಗಿನಿಯರ ಪ್ರಭಾವ ಬೀಳುವುದು ಕಡಿಮೆಯಾಗಿ ಮಕ್ಕಳ ಮೇಲೆ ಸಮಾಜದ ಪ್ರಭಾವ ಬೀಳುವುದು ಹೆಚ್ಚಾಗಿದೆ.

ಜಗತ್ತಿನ ಇತಿಹಾಸದಲ್ಲಿ ಇನ್ನೊಂದು ದುಃಖದ ಸಂಗತಿ ಇಂದಿನವರೆಗೂ ನಡೆದು ಬಂದಿದೆ. ಜನರು ಸಾಮಾನ್ಯವಾಗಿ ಸಂತರ ಸತ್ಯ, ಪ್ರೇಮ ಮತ್ತು ಕರುಣೆಯ ಸಂದೇಶವನ್ನು ವ್ಯಕ್ತಿಗತ ಹಾಗೂ ಕೌಟುಂಬಿಕ ಜೀವನದ ಚಿಕ್ಕ ಕ್ಷೇತ್ರಕ್ಕೆ ಪರಿಮಿತಗೊಳಿಸಿಬಿಟ್ಟಿದ್ದಾರೆ. ಸಮಾಜದಲ್ಲಿಯೂ ಸಹ ಅವುಗಳನ್ನೇ ನಡೆಸಬೇಕು ಎಂಬುದು ಅವರಿಗೆ ತಿಳಿಯಲಿಲ್ಲ. ಇದರಿಂದ ವ್ಯಕ್ತಿಗತ ಹಾಗೂ ಸಾಮಾಜಿಕ ಮೌಲ್ಯಗಳಲ್ಲೊಂದು ವಿಸಂಗತಿ ಉಂಟಾಯಿತು. ಭಾರತೀಯ ಸಂಸ್ಕೃತಿಯು ಹೊರಗಿನ ಪ್ರಭಾವಗಳಿಂದ ಅಲಿಪ್ತವಾಗಿ ಇರುವವರೆಗೆ ಮಾತ್ರ ಈ ವಿಸಂಗತಿಯು ಅಷ್ಟೊಂದು ಸ್ಪಷ್ಟವಾಗಿ ತೋರುತ್ತಿರಲಿಲ್ಲ. ಹೊರಗಿನ ಭೌತಿಕವಾದದ ಪ್ರಭಾವದ ಹೆಚ್ಚುತ್ತ ಹೋದ ಹಾಗೆ ಈ ವಿಸಂಗತಿಯೂ ಹೆಚ್ಚುತ್ತ ಹೋಯಿತು. ವ್ಯಕ್ತಿಗತ ಜೀವನದಲ್ಲಿಯ ಸತ್ಯ, ಪ್ರೇಮ ಮತ್ತು ಕರುಣೆಯ ಅಹಿಂಸಕ ಮೌಲ್ಯಗಳನ್ನು ರಾಜಕೀಯ, ಆರ್ಥಿಕ, ವ್ಯಾವಸಾಯಿಕ, ಔಧ್ಯೋಗಿಕ, ಸಾಮಾಜಿಕ, ಮೊದಲಾದ ಜೀವನದಲ್ಲಿಯ ಪ್ರತಿಯೊಂದು ಕ್ಷೇತ್ರದಲ್ಲಿಯೂ ಅನುಸರಿಸುವುದರಿಂದಲೇ ಇಂದಿನ ಯುಗದಲ್ಲಿ ಕ್ರಾಂತಿಯಾದೀತು ಎಂದು ಮಹಾತ್ಮಾ ಗಾಂಧಿ ಅವರು ಮೊಟ್ಟ ಮೊದಲು ಅಭಿಪ್ರಾಯಪಟ್ಟರು. ಅವರ ಇಡೀ ಜೀವನ ಈ 'ಸತ್ಯ ಪ್ರಯೋಗ'ಗಳಲ್ಲಿ ಕಳೆಯಿತು. ಕೊನೆಯಲ್ಲಿ ಅದಕ್ಕಾಗಿಯೇ ಅವರ ಬಲಿದಾನವೂ ಆಯಿತು.



"ನಾನು ಮಹಾತ್ಮಾನಾಗಿದ್ದರೆ ನನ್ನೊಬ್ಬನ ಶಕ್ತಿಯಿಂದಲೇ ನಾನು ಮಹಾತ್ಮನಾಗಿಲ್ಲ. ಕಸ್ತೂರ್‌ಬಾಳಂಥ ಜೀವನ ಸಂಗಾತಿಯು ನನಗೆ ದೊರಕಿರದಿದ್ದರೆ ನಾನು ಮಹಾತ್ಮನಾಗುತ್ತಲೇ ಇರಲಿಲ್ಲ." ಎಂದು ಗಾಂಧಿ ಅವರು ಹೇಳುತ್ತಿದ್ದರು. ಗಾಂಧಿ ಹಾಗೂ ವಿನೋಬಾರಂತೆಯೇ ಇತರ ಸಂತರೂ ಮಹಾತ್ಮರೂ ಸಹ ತಮ್ಮ ಜೀವನದ ಚೌಕಟ್ಟು ತಯಾರಿಸುವಲ್ಲಿ ತಮ್ಮ ತಾಯಂದಿರು ಮಹತ್ವದ ಪಾತ್ರ ವಹಿಸಿದ್ದಾರೆಂದು ಹೇಳುತ್ತಾರೆ. ಪುರುಷರ ಮೇಲೆ ಬಾಲ್ಯದಲ್ಲಿ ತಾಯಂದಿರ ಹಾಗೂ ಪ್ರೌಢಾವಸ್ಥೆಯಲ್ಲಿ ಹೆಂಡತಿಯರ ಪ್ರಭಾವವು ಹೆಚ್ಚಾಗಿ ಬೀಳುತ್ತದೆ. ಅವರ ಸಂಸ್ಕಾರಗಳನ್ನು ಸ್ಥಿರಪಡಿಸಲಿಕ್ಕೂ ಅವುಗಳನ್ನು ಸರಿಯಾದ ದಿಶೆಯಲ್ಲಿ ತಿರುವಲಿಕ್ಕೂ ಅವರಿಂದ ತುಂಬಾ ಪ್ರಭಾವ ಬೀಳುತ್ತದೆ. ಆದರೆ ಭಗಿನಿಯರು ಹೊರ ಜಗತ್ತಿನಲ್ಲಿಯ ಆಗುಹೋಗುಗಳ ಸರಿಯಾದ ಪರಿಚಯವನ್ನು ಮಾಡಿಕೊಳ್ಳುತ್ತಿದ್ದರೆ ಮಾತ್ರ ಇದು ಸಾಧ್ಯ.

ಮುಂದುವರಿಯುವುದು.

ಸಂಗ್ರಹ : ವಿ.ಎನ್. ತಿಪ್ಪನಗೌಡ
ಉಪಾಧ್ಯಕ್ಷರು, ಗಾಂಧಿ ಭವನ

ಪುಟ 15ರಿಂದ ಮುಂದುವರಿದ ಭಾಗ...


ಕಲ್ಕಿ, ಕ್ರಾಂತಿಕಾಳಿ, ರಕ್ತಧುನಿ, ಸತ್ಯಾಗ್ರಹಿ, ಮೋತಿಲಾಲ ನೆಹರು, ಮಹಾತ್ಮ ಗಾಂಧಿ, ಭರತಮಾತೆ, ಇನ್ನೂ ಮುಂತಾದ ಕವನಗಳನ್ನೂ ಬರೆದರು. "ನಡೆ ಮುಂದೆ ನಡೆ ಮುಂದೆ, ನುಗ್ಗಿ ನಡೆ ಮುಂದೆ", "ನೂರು ದೇವರುಗಳ ನೂಕಾಚೆ ದೂರ, ಭಾರತಾಂಬೆಯೇ ದೇವಿ ನಮಗಿಂದು ಪೂಜಿಸುವ ಬಾರ"– ಶ್ರೀ ಸಾಮನ್ಯನೇ ಭಗವಾನ್ ಮಾನ್ಯಂ, ಸರ್ವಜನಾಂಗದ ಶಾಂತಿಯ ತೋಟ", ಎಂಬ ಗೀತೆ ಸಾಲುಗಳು ಇಂದಿಗೂ ರಾಷ್ಟ್ರ ಪ್ರೇಮಗೀತೆಗಳಾಗಿ ಮೈಮನವನ್ನು ನವಿರೇಳಿಸುತ್ತವೆ. ಬಾರಿಸು ಕನ್ನಡ ಡಿಂಡಿಮವ, "ಎಲ್ಲಾದರು ಇರು ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು, ಕನ್ನಡವೇ ಸತ್ಯ, ಕನ್ನಡವೇ ನಿತ್ಯ" ಕವನದ ಸಾಲುಗಳು, ಕನ್ನಡಿಗರನ್ನು ಒಗ್ಗೂಡಿಸುವ ಸ್ಫೂರ್ತಿ ಗೀತೆಗಳಾಗಿವೆ. "ಭಾರತ ಜನನಿಯ ತನುಜಾತೆ, ಜಯಹೇ ಕರ್ನಾಟಕ ಮಾತೆ" ಕರ್ನಾಟಕದ ನಾಡ ಗೀತೆಯಾಗಿದೆ. ಅವರ "ಉಳುವ ಯೋಗಿಯ ನೋಡಲ್ಲಿ" ನೇಗಿಲ ಯೋಗಿ ಗೀತೆ ರೈತ ಗೀತೆಯಾಗಿ ಮಾನ್ಯತೆ ಪಡೆದಿದೆ. ಕುವೆಂಪು ಅವರ ಸಮಗ್ರ ಸಾಹಿತ್ಯ, 12 ಸಂಪುಟಗಳಲ್ಲಿ ಡಾ. ಕೆ.ಸಿ. ಶಿವಾರೆಡ್ಡಿ ಅವರ ಸಂಪಾದಕತ್ವದಲ್ಲಿ ಕನ್ನಡ ವಿಶ್ವವಿದ್ಯಾಲಯ ಈಗ ಪ್ರಕಟಿಸಿದೆ. ಇಪ್ಪತ್ತು ವರ್ಷಗಳ ಪ್ರಯತ್ನದಿಂದ ಇಂಥಹ ಬೃಹತ್ ಕಾರ್ಯ ಅವರ ಪುತ್ರ ತೇಜಸ್ವಿ ಅವರ ವಿನ್ಯಾಸ ಹಾಗೂ ಕೀ.ರಂ. ನಾಗರಾಜ್ ಅವರ ರಕ್ಷಾಪುಟಗಳ ಸ್ವರೂಪಗಳಿಂದಲೂ ಕೂಡಿದೆ. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಹಲವು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್., ಕೇಂದ್ರ ಸರ್ಕಾರದ ಜ್ಞಾನಪೀಠ ಪ್ರಶಸ್ತಿ, ಪದ್ಮಭೂಷಣ, ಪದ್ಮವಿಭೂಷಣ, ರಾಷ್ಟ್ರಕವಿ ಪುರಸ್ಕಾರ, ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಷಿಪ್, ಕರ್ನಾಟಕ ಸರ್ಕಾರದಿಂದ ಪಂಪ ಪ್ರಶಸ್ತಿ, ಕರ್ನಾಟಕ ರತ್ನ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಸದಸ್ಯತ್ವ ಇನ್ನು ಹತ್ತು ಹಲವು ಗೌರವಗಳು ಸಂದಿವೆ.ಕುವೆಂಪು ಅವರ 113 ನೇ ಜನ್ಮ ದಿನದಂದು, ಗೂಗಲ್ ಇಂಡಿಯಾ ಅವರ ಗೌರವಾರ್ಥ ಡೂಡಲ್ ಪ್ರದರ್ಶಿಸಿತು.(2017 ಡಿಸೆಂಬರ್ 29). ಕರ್ನಾಟಕ ಸರ್ಕಾರವು 2015ರ ಡಿಸೆಂಬರ್‌ನಲ್ಲಿ ಕುವೆಂಪು ಜನ್ಮದಿನವಾದ ಡಿಸೆಂಬರ್ 29ನ್ನು "ವಿಶ್ವ ಮಾನವ" ದಿನವನ್ನಾಗಿ ಆಚರಿಸಲು ಆದೇಶ ಹೊರಡಿಸಿ, ವಿಶ್ವಮಾನವ ಸಂದೇಶ ಸಾರಿದ ಕವಿಗೆ ಗೌರವ ಸಮರ್ಪಿಸಿದೆ.

ನುಡಿನಮನ : ಅಳಿದರೂ ಉಳಿದರೂ ದಾರಿ ತೋರುವವರು

2020ರ ಕರೋನಾ ಸಂದರ್ಭದಲ್ಲಿ ಎಲ್ಲಾ ಸ್ತರಗಳಲ್ಲಿ ಕರಾಳತೆ ಆತಂಕ ಅನುಭವಿಸಬೇಕಾಗಿದುದು ನೋವಿನ ಸಂಗತಿ. ಈ ಅವಧಿಯಲ್ಲಿ ವಿಶ್ವದಾದ್ಯಂತ ಅನೇಕ ಗಣ್ಯರು, ಸಾಹಿತಿಗಳು, ಕ್ರೀಡಾಪಟುಗಳು, ಕರೋನಾ ವಾರಿಯರ್ಸ್‌ಗಳು, ಪೋಲೀಸರು, ಚಿತ್ರನಟರು ಇನ್ನು ಅನೇಕ ಮಹನೀಯರು ಸಾವನ್ನಪ್ಪಿದರು. ಗಾಂಧಿ ಭವನ ಇವರ ನಿಧನಕ್ಕೆ ಶ್ರದ್ಧಾಂಜಲಿ ಸಲ್ಲಿಸುತ್ತದೆ.




ಟಿ.ಎನ. ಚತುರ್ವೇದಿ
ಕರ್ನಾಟಕ ಮಾಜಿ
ರಾಜ್ಯಪಾಲರು
90 ವರ್ಷ, ಜ. 6




ಡಾ. ಎಂ. ಚಿದಾನಂದ
ಮೂರ್ತಿ
ಹಿರಿಯ ಸಂಶೋಧಕ
89 ವರ್ಷ, ಜ. 11



ಮಾತೇ ಮಾಣಿಕೇಶ್ವರಿ
ಕಲ್ಯಾಣ ಕರ್ನಾಟಕದ
ನಡೆದಾಡುವ ದೇವರು,
87 ವರ್ಷ, ಮಾ. 7




ಎಚ್.ಆರ್. ಭಾರಧ್ವಾಜ್
ಕರ್ನಾಟಕ ಮಾಜಿ
ರಾಜ್ಯಪಾಲರು
89 ವರ್ಷ, ಮಾ. 8



ಪಾಟೀಲ ಪುಟ್ಟಪ್ಪ
ಹಿರಿಯ ಪತ್ರಕರ್ತ,
ಸಾಹಿತಿ
102 ವರ್ಷ, ಮಾ. 16




ಎಂ.ವಿ. ರಾಜಶೇಖರನ್
ಹಿರಿಯ ರಾಜಕಾರಣಿ
92 ವರ್ಷ, ಏ. 13



ಇರ್ಫಾನ್ ಖಾನ್
ಬಾಲಿವುಡ್ ಪ್ರಸಿದ್ಧ ನಟ
53 ವರ್ಷ, ಏ. 29




ರಿಷಿ ಕಪೂರ್
ಬಾಲಿವುಡ್ ಪ್ರಸಿದ್ಧ ನಟ
67 ವರ್ಷ, ಏ. 30




ಪ್ರೊ. ನಿಸಾರ್ ಅಹಮದ್
ಖ್ಯಾತ ಕನ್ನಡ ಸಾಹಿತಿ
84 ವರ್ಷ, ಮೇ. 3



ಶಾಂತಾದೇವಿ ಕಣವಿ
ಖ್ಯಾತ ಕನ್ನಡ ಸಾಹಿತಿ
88 ವರ್ಷ, ಮೇ. 23



ಚಿರಂಜೀವಿ ಸರ್ಜಾ
ಪ್ರತಿಭಾವಂತ
ನಾಯಕನಟ
39 ವರ್ಷ, ಜೂ. 7



ಹುಲಿವಾನ ಗಂಗಾಧರಯ್ಯ
ಖ್ಯಾತ ಪೋಷಕ ನಟ
70 ವರ್ಷ, ಜು. 18



ಸುಭದ್ರಮ್ಮ ಮನ್ಸೂರ್
ಹಿರಿಯ ರಂಗ ಕಲಾವಿದೆ
81 ವರ್ಷ, ಜು. 16




ಶಾಂತಮ್ಮ
ಕನ್ನಡ ಚಿತ್ರರಂಗದ
ಹಿರಿಯ ನಟಿ
95 ವರ್ಷ, ಜು. 19



ಪ್ರಣಬ್ ಮುಖರ್ಜಿ
ಮಾಜಿ ರಾಷ್ಟ್ರಪತಿಗಳು
85 ವರ್ಷ, ಆ. 31




ರಾಮ್‌ವಿಲಾಸ್
ಪಾಸ್ವಾನ್
ಕೇಂದ್ರ ಸಚಿವ
74 ವರ್ಷ, ಆ. 8



ಅಶೋಕ್ ಗಸ್ತಿ
ರಾಜ್ಯಸಭಾ ಸದಸ್ಯ
55 ವರ್ಷ, ಸೆ. 17



ಸುರೇಶ್ ಅಂಗಡಿ
ಕೇಂದ್ರ ಸಚಿವ
65 ವರ್ಷ, ಸೆ. 23



ಬಾಲಸುಬ್ರಹ್ಮಣ್ಯಂ
ಪ್ರಸಿದ್ಧ ಹಿನ್ನೆಲೆ ಗಾಯಕ
74 ವರ್ಷ, ಸೆ. 25



ಜಸ್ವಂತ್ ಸಿಂಗ್
ಕೇಂದ್ರ ಮಾಜಿ ಸಚಿವರು
82 ವರ್ಷ, ಸೆ. 27



ಜಿ.ಎಸ್. ಅಮೂರ
ಕನ್ನಡದ ಖ್ಯಾತ
ವಿಮರ್ಶಕ
96 ವರ್ಷ, ಸೆ. 28



ಮರಡೋನಾ
ವಿಶ್ವಪ್ರಸಿದ್ಧ ಫುಟ್‌ಬಾಲ್
ಆಟಗಾರ
60 ವರ್ಷ, ನ. 25



ಬನ್ನಂಜೆ
ಗೋವಿಂದಾಚಾರ್ಯ
ತತ್ವಶಾಸ್ತ್ರ ವಿದ್ವಾಂಸ
84 ವರ್ಷ, ಡಿ. 13



ಆರ್.ಎನ್. ಶೆಟ್ಟಿ
ಖ್ಯಾತ ಉದ್ಯಮಿ
93 ವರ್ಷ, ಡಿ. 17



ಕರ್ನಲ್
ನರೇಂದ್ರಕುಮಾರ್
ಪರ್ವತಾರೋಹಿ
87 ವರ್ಷ, ಡಿ. 31

ಕರ್ನಾಟಕ ಕಟ್ಟಿದ ಕೃಷ್ಣರಾಜ

ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಯುರೋಪಿಯನ್ನರು, ಆಂಗ್ಲೋ ಇಂಡಿಯನ್ ಅವರ ಮಾತೃಭಾಷೆಯೇ ಇಂಗ್ಲೀಷ್ ಆಗಿರುವುದರಿಂದ ಇಂಗ್ಲೀಷ್ ಜ್ಞಾನವುಳ್ಳವರೇ ಅಧಿಕವಾಗಿರುವುದರಿಂದ ಅವರನ್ನೂ ಸಹ



ಹಿಂದುಳಿದವರ್ಗದ ಪಟ್ಟಿಯಿಂದ ಹೊರಗಿಡಲಾಗಿದೆ. ಹಾಗೂ ಹಿಂದುಳಿದ ವರ್ಗದವರಿಗೆ ಶಿಕ್ಷಣದಲ್ಲಿ ವಿಶೇಷ ಸೌಲಭ್ಯವನ್ನು ಕೊಡಬೇಕೆಂಬ ಶಿಫಾರಸ್ಸು ಸಹ ಈ ವರದಿಯಲ್ಲಿತ್ತು. ಹಾಗೂ ಸರ್ಕಾರದಲ್ಲಿ ಖಾಲಿಯಾಗುವ ಹುದ್ದೆಗಳಲ್ಲಿ ಬ್ರಾಹ್ಮಣೇತರರಿಗೆ ಪ್ರಥಮ ಆದ್ಯತೆಕೊಡಬೇಕು ಮತ್ತು ಈ ಪ್ರಾತಿನಿಧ್ಯ ಶೇಕಡಾ 50%ಕ್ಕೆ ಬರುವವರೆಗೂ ಮುಂದುವರಿಸಬಹುದೆಂದು ಶಿಫಾರಸ್ಸು ಮಾಡಲಾಗಿತ್ತು. ಸರ್ಕಾರಿ ಸೇವೆಗೆ ಸೇರುವ ವಯೋಮಿತಿ 25 ರಿಂದ 28ಕ್ಕೆ ಹೆಚ್ಚಳ, ಗ್ರಾಮಾಂತರ ಪ್ರದೇಶಗಳಲ್ಲಿ ಆಂಗ್ಲ ಮಾಧ್ಯಮ ಶಾಲೆಗಳೂ, ಹಿಂದುಳಿದ ವರ್ಗದವರಿಗೆ ವಿದ್ಯಾರ್ಥಿ ನಿಲಯಗಳು, ವಿದ್ಯಾರ್ಥಿ ವೇತನಗಳು, ಕಡ್ಡಾಯ ಪ್ರಾಥಮಿಕ ಶಿಕ್ಷಣ, ಶಾಲಾ ಕಾಲೇಜುಗಳ ಸ್ಥಾಪನೆ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಶೈಕ್ಷಣಿಕ ಅರ್ಹತೆಯಲ್ಲಿ ಹಿಂದುಳಿದ ಜಾತಿಯವರಿಗೆ ವಿನಾಯಿತಿಗಳನ್ನು, ಮಿಲ್ಲರ್ ಸಮಿತಿಯು ಅದರ ವರದಿಯಲ್ಲಿ ಮಂಡಿಸಿತ್ತು. ಮಿಲ್ಲರ್ ಸಮಿತಿ ವರದಿಯನ್ವಯ ಸರ್ಕಾರದ ಎಲ್ಲಾ ಹುದ್ದೆಗಳಲ್ಲಿ ಹಿಂದುಳಿದವರಿಗೆ ಮೀಸಲಾತಿ ನೀಡಲು ಒಡೆಯರ್ ಅವರು ಕಂಕಣಬದ್ಧರಾದರು. "ಹಿಂದುಳಿದ ಜನಾಂಗಗಳಿಗೆ ಮೀಸಲಾತಿ ಕಲ್ಪಿಸದಿದ್ದಲ್ಲಿ, ಮೇಲ್ಜಾತಿಗಳೊಂದಿಗೆ ಅವರು ಸ್ಪರ್ಧಿಸಲು ಸಾಧ್ಯವಾಗುವುದಿಲ್ಲ"– ಎಂಬ ಸಾಮಾಜಿಕ ನ್ಯಾಯದ ತತ್ವಕ್ಕೆ ಬದ್ಧರಾಗಿ ಕ್ರಮ ವಹಿಸಿದರು. ಆದರೆ ಅಂದು ದಿವಾನರಾಗಿದ್ದ ಸರ್ ಎಂ.ವಿ. ಅವರಿಗೆ ಮಹಾರಾಜರ ಈ ನಡೆ ಒಪ್ಪಿಗೆಯಾಗಲಿಲ್ಲ. "ಜಾತಿ ಆಧಾರಿತ ಮೀಸಲಾತಿಯಿಂದ ಪ್ರತಿಭೆಗೆ ಕುಂದುಂಟಾಗುವುದು, ಸರ್ಕಾರದಲ್ಲಿ ದಕ್ಷತೆ ಇರುವುದಿಲ್ಲ, ಆದ್ದರಿಂದ ಸರ್ಕಾರದ ಹುದ್ದೆಗಳಲ್ಲಿ ಮೀಸಲಾತಿ ಸಲ್ಲದು" – ಎಂದು ಒಡೆಯರ್ ಅವರಿಗೆ ಮನವಿ ಮಾಡಿದರು. ಒಡೆಯರ್ ಅರಿಂದ ಈ ವಾದಕ್ಕೆ ಮಾನ್ಯತೆ ದೊರೆಯದಿದ್ದಾಗ ಉಳಿದ ರಾಜಮಾರ್ಗ ರಾಜೀನಾಮೆ ಮಾತ್ರ ಆಗಿತ್ತು. ಸರ್. ಎಂ.ವಿ. ಅವರು 1918ರಲ್ಲಿ ರಾಜೀನಾಮೆ ಸಲ್ಲಿಸಿದರು. ನಾಲ್ವಡಿ ಚಿವರು ರಾಜೀನಾಮೆ ಅಂಗೀಕರಿಸಿದರು. ಭಾರತದ ಸಂವಿಧಾನದ "ಜಾತ್ಯಾತೀತ ರಾಷ್ಟ್ರ" ಸಿದ್ಧಾಂತದ ಕ್ರಿಯಾತ್ಮಕ ರೂಪವಾದ "ಮೀಸಲಾತಿ' ಮಾರ್ಗ ಎದುರಿಸಿದ ಸವಾಲನ್ನು ಈ ಘಟನೆ ಎತ್ತಿ ತೋರಿಸುತ್ತದೆ. ಮಿಲ್ಲರ್ ಸಮಿತಿಯ ಸದಸ್ಯರುಗಳಾದ ಸಿ. ಶ್ರೀಕಂಠೇಶ್ವರ ಅಯ್ಯರ್ ಮತ್ತು ಎಂ.ಪಿ. ರಂಗೈಂಗಾರ್ ಅವರು ವರದಿಯನ್ನು ವಿರೋಧಿಸಿ ಸಹಿ ಹಾಕಿದ್ದರು. ಉಳಿದ 5 ಜನ ಬ್ರಾಹ್ಮಣೇತರ ಸದಸ್ಯರು ವರದಿಯನ್ನು ಒಪ್ಪಿ ಸಹಿ ಹಾಕಿದ್ದರು. ವೈದಿಕ ಸಮುದಾಯದ ತೀವ್ರ ವಿರೋಧದ ನಡುವೆಯೂ, ನಾಲ್ವಡಿ ಅವರು ಆದೇಶವೊಂದನ್ನು ಹೊರಡಿಸಿ, "ಬ್ರಾಹ್ಮಣರು ಮತ್ತು ಆಂಗ್ಲೋ ಇಂಡಿಯನ್ನರನ್ನು ಹೊರತುಪಡಿಸಿ, ಉಳಿದೆಲ್ಲಾ ವರ್ಗವನ್ನು ಹಿಂದುಳಿದ ವರ್ಗವೆಂದು ಪರಿಗಣಿಸಿ, ಶೇಕಡಾ 75%ರಷ್ಟು ಮೀಸಲಾತಿಯನ್ನು ಘೋಷಿಸಿದರು. ಇದು ಪ್ರಜಾಪ್ರತಿನಿಧಿ ಸಭೆಯಲ್ಲಿ ತೀವ್ರ ಚರ್ಚೆಗೊಳಗಾಯಿತು. ಸದಸ್ಯರಾದ ಕೆ.ಟಿ. ಶೇಷಯ್ಯನವರ, ಕಟು ವಾದಕ್ಕೆ, ಶ್ರೀ ಪುರುಷೋತ್ತಮಾನಂದ ಗೋಸಾಯಿ ಮತ್ತು ಶ್ರೀ ಲಿಂಗೇಗೌಡರು ಸಮರ್ಪಕ ಪ್ರತಿವಾದವನ್ನು ಅಂಕಿ ಅಂಶಗಳ ಮೂಲಕ ನೀಡಿದ್ದರು.

ಸಾಮಾಜಿಕ ಸುಧಾರಣೆಗಳು

ಅಸ್ಪೃಶ್ಯತೆ ನಿವಾರಣೆ : ಸರ್ಕಾರಿ ಶಾಲೆಗಳಲ್ಲಿ ಅಸ್ಪೃಶ್ಯರು ಮತ್ತು ಹಿಂದುಳಿದ ಮಕ್ಕಳನ್ನು ಕಡ್ಡಾಯವಾಗಿ ಸೇರಿಸಿಕೊಳ್ಳಬೇಕೆಂದೂ ಸದರಿ ಶಾಲೆಗಳು ಲೋಕಾದಾಯದಿಂದ ನಡೆಯುತ್ತಿದ್ದುದರಿಂದ, ಶಾಲೆಗಳು ಎಲ್ಲಾ ವರ್ಗದವರಿಗೂ ಮುಕ್ತವಾಗಿರಬೇಕೆಂದು – 1918ರಲ್ಲಿ ಪ್ರಕಟಣೆಯೊಂದನ್ನು ಗೆಝೆಟನಲ್ಲಿ ಪ್ರಕಟಿಸಿದರು. ಇದಕ್ಕನುಗುಣವಾಗಿ, ಹುಸ್ಕೂರು ಮತ್ತು ನರಸಾಪುರದಲ್ಲಿ ಶಾಲೆಗಳು, ಬೆಂಗಳೂರು, ತುಮಕೂರು, ಚಿಕ್ಕಮಗಳೂರಿನಲ್ಲಿ ವಸತಿ ಶಾಲೆಗಳು, ಬಿಳಿಗಿರಿರಂಗನ ಬೆಟ್ಟದಲ್ಲಿ ಸೋಲಿಗರಿಗಾಗಿ ಶಾಲೆಗಳನ್ನು, ಕೋಲಾರದಲ್ಲಿ ಭೋವಿ ಸಮುದಾಯದವರಿಗಾಗಿ ಶಾಲೆಗಳನ್ನು ಮತ್ತು ಕಾಕನಕೋಟೆಯಲ್ಲಿ ಜೇನುಕುರುಬರು ಹಾಗೂ ಕುಂಬಿ ಸಮುದಾಯುದವರಿಗೆ ಶಾಲೆಗಳನ್ನು ಪ್ರಾರಂಭಿಸಿದರು. ವಿದ್ಯಾರ್ಥಿ ವೇತನ, ಶುಲ್ಕ ವಿನಾಯಿತಿ, ವಿದ್ಯಾರ್ಥಿ ನಿಲಯ ಸ್ಥಾಪನೆಯೊಂದಿಗೆ ಪೂರಕ ಕ್ರಮಗಳನ್ನು ವಹಿಸಿದ್ದರು. ಅಸ್ಪೃಶ್ಯರಿಗೆ ಅರಮನೆ ಪ್ರವೇಶಾವಕಾಶವನ್ನು 1936ರಲ್ಲಿ ಒದಗಿಸಿದ್ದರು. ಈ ಕ್ರಾಂತಿಕಾರಕ ಬದಲಾವಣೆಯೂ ಸಹ ಬ್ರಿಟಾನಿಕಾದಲ್ಲಿ ದಾಖಲಾಗಿದೆ. 1920ರಲ್ಲಿ ನಡೆದ ದಸರಾ ಮಹೋತ್ಸವದಲ್ಲಿ ಅಖಿಲ ಭಾರತ ಮಟ್ಟದ ಡಿಪ್ರೆಸ್ಡ್‌ಕ್ಲಾಸ್ ಕಾನ್ಫರೆನ್ಸ್ ನಡೆಸಿದ್ದರು.

ಮುಂದುವರಿಯುವುದು...

ಸೌಜನ್ಯ : ಕ.ಆ.ಸೇ. ಸಂಘದ
2013–14ರ 'ಅನುಷ್ಠಾನ' ಸಂಚಿಕೆ



ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ

ಡಾ. ವೂಡೇ ಪಿ. ಕೃಷ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಆಧ್ಯಾತ್ಮೀಕರಣ

ಗಾಂಧೀಜಿ ಅವರು 'ನನ್ನ ದೃಷ್ಟಿಯಲ್ಲಿ ರಾಜಕಾರಣವೆಂದರೆ, ಅಧ್ಯಾತ್ಮಿಕ ಪ್ರತಿಪಾದನೆಯೇ ಆಗಿದೆ' ಎಂದು ಘೋಷಿಸಿದ್ದರು. ಬಹಳ ಉನ್ನತ ಮಟ್ಟದ ರಾಜಕಾರಣಿಯಾಗಿದ್ದ ಅವರು, ಸಾರ್ವಜನಿಕ ಜೀವನವನ್ನು ಆಧ್ಯಾತ್ಮೀಕರಿಸಿದರಲ್ಲದೆ, ಅದನ್ನು ಹಲವು ಆಯಾಮಗಳಿಂದ ಮೌಲ್ಯಗಳಿಂದ ಸಮೃದ್ಧಗೊಳಿಸಿದರು. ಅವರ ಪಾಲಿಗೆ ನಾವು ಮಾಡುವ ಕೆಲಸದಲ್ಲೂ ಅದನ್ನು ಮಾಡುವ ವಿಧಾನದಲ್ಲೂ ಶುದ್ಧತೆ ಇರಬೇಕಾದದ್ದು ಮುಖ್ಯವಾಗಿತ್ತು. ಇದನ್ನು ಸ್ವತಃ ತಾವೇ ಮಾಡಿ ತೋರಿಸಬೇಕೆಂಬುದು ಅವರ ನಂಬಿಕೆಯಾಗಿತ್ತು. ಹೀಗಾಗಿ, ಅವರು "ನೀವು ಈ ಕ್ಷಣದ ಬಗ್ಗೆ ಮಾತ್ರ ಚಿಂತಿಸಿ; ದೃಢವಾಗಿ ಪ್ರಯತ್ನಿಸಿ; ಎಂದಿಗೂ ಪ್ರಯತ್ನವನ್ನು ಕೈಬಿಡಬೇಡಿ; ತಪ್ಪು ಮಾಡಿದವರನ್ನು ಕ್ಷಮಿಸಿ, ಮುಂದಡಿ ಇಡಿ; ನಿಮ್ಮನ್ನು ನೀವು ಪರಿವರ್ತಿಸಿಕೊಳ್ಳಿ" ಎನ್ನುವುದೆಲ್ಲ ಅವರ ಮಾತುಗಳೇ ಆಗಿವೆ. ಇಷ್ಟೇ ಅಲ್ಲ, ಅವರು "ಈ ಜಗತ್ತಿನಲ್ಲಿ ಯಾವ ಬದಲಾವಣೆ ಆಗಬೇಕೆಂದು ನಾವು ಬಯಸುತ್ತೇವೋ ಆ ಬದಲಾವಣೆ ಸ್ವತಃ ನಿಮ್ಮಲ್ಲೇ ಮೊದಲು ಬರಲಿ," ಎಂದು ಹೇಳುತ್ತಿದ್ದರು. ತಮ್ಮ ಕಲ್ಪನೆಯ ಹೊಸ ಸಮಾಜದಲ್ಲಿ ಅವರು ಹೊಸ ಬಗೆಯ ನೈತಿಕತೆಯಿಂದ ಕೂಡಿದ ಮನುಷ್ಯನನ್ನು ಕಾಣಬೇಕೆಂಬುದೇ ಅವರ ಇಡೀ ಜೀವಮಾನದ ಹೋರಾಟವಾಗಿತ್ತು. ಇದನ್ನು ಸಾಧಿಸಲು ಅವರು ಸ್ವ-ಇಚ್ಛೆಯಿಂದ ಸರಳತೆ ಮತ್ತು ಬಡತನಗಳನ್ನು ಅಪ್ಪಿಕೊಂಡರು. ಅಲ್ಲದೆ, 'ಆಶ್ರಮವಾಸಿ'ಯಂತೆ ಅವರು ಬದುಕತೊಡಗಿದರು. ಅವರ ನಡೆ-ನುಡಿಗಳಲ್ಲಿ ಕಿಂಚಿತ್ತೂ ವ್ಯತ್ಯಾಸವಿರಲಿಲ್ಲ. ಅವರಿಗೆ 'ಬಹುದೊಡ್ಡ ನಾಯಕ'ನೆನ್ನುವ ಮನ್ನಣೆಯನ್ನು ತಂದುಕೊಟ್ಟದ್ದೇ ಅವರ ವ್ಯಕ್ತಿತ್ವದಲ್ಲಿದ್ದ ಈ ಗುಣವೆಂಬುದನ್ನು ನಾವು ಗಮನಿಸಬೇಕು!. ನಮ್ಮ ದೇಶಕ್ಕೆ ಯಾವ ಬಗೆಯ ಸ್ವಾತಂತ್ರ್ಯ ಬೇಕು ಎನ್ನುವ ಬಗ್ಗೆ ಗಾಂಧೀಜಿ ಅವರಿಗೆ ಅತ್ಯಂತ ಸ್ಪಷ್ಟವಾದ ಕಲ್ಪನೆ ಇತ್ತು. ಅವರ ದೃಷ್ಟಿಯಲ್ಲಿ, ದೇಶಕ್ಕೆ ಬರೀ ರಾಜಕೀಯ ಸ್ವಾತಂತ್ರ್ಯವಷ್ಟೇ ಸಾಕಾಗುವುದಿಲ್ಲ. ರಾಜಕೀಯ ಸ್ವಾತಂತ್ರ್ಯವು ಆರ್ಥಿಕ ಪ್ರಗತಿಯ ಜೊತೆಜೊತೆಯಲ್ಲಿ ಸಾಗಬೇಕು ಎನ್ನುವುದು ಅವರ ನಿಲುವಾಗಿತ್ತು. ಹೀಗಾಗಿಯೇ ಅವರು, 'ಧರ್ಮದರ್ಶಿತ್ವ'ದಲ್ಲಿ ನಂಬಿಕೆ ಇಟ್ಟಿದ್ದರು. ಶ್ರೀಮಂತರು ತಮ್ಮ ಸಂಪತ್ತಿನ ಧರ್ಮದರ್ಶಿಗಳಾಗಬೇಕು ಎಂದು ಅವರು ಹೇಳುತ್ತಿದ್ದರು. ಅವರ ಈ ಕರೆಗೆ ಓಗೊಟ್ಟು ಬಿರ್ಲಾಗಳು, ಬಜಾಜ್ ವಂಶಸ್ಥರು, ಫಿರೋದಿಯಾಗಳು ತಮ್ಮ ಔದ್ಯಮಿಕ ಚಟುವಟಿಕೆಗಳಲ್ಲಿ ಈ 'ಧರ್ಮದರ್ಶಿತ್ವ'ದ ಪರಿಕಲ್ಪನೆಯನ್ನು ಅಳವಡಿಸಿಕೊಂಡರು. ಅನಂತರ ತಮ್ಮ ಸಂಪತ್ತಿನ ಗಮನಾರ್ಹ ಭಾಗವನ್ನು ದೇಶಕ್ಕೆ ಸಮರ್ಪಿಸಿದರು. ಯಾವುದೇ ಒಂದು ನೀತಿ ಅಥವಾ ತೀರ್ಮಾನವನ್ನು ಸರಿಯೋ, ತಪ್ಪೋ ಎಂದು ಅಳೆಯಲು ಗಾಂಧೀಜಿ ಒಂದು ಅದ್ಭುತ ತಂತ್ರವನ್ನು ಅನುಸರಿಸುತ್ತಿದ್ದರು. ಇದರ ಅನುಸಾರವಾಗಿ ಅವರು "ನೀವು ಯಾವುದೇ ಒಬ್ಬ ಬಡವನನ್ನು ನೋಡಿದ ಕ್ಷಣದಲ್ಲಿ, ನೀವಿಡುವ ಒಂದು ಹೆಜ್ಜೆಯಿಂದ ಅವನಿಗೇನಾದರೂ ಉಪಯೋಗವಾಗುತ್ತದೆಯೇ?" ಎಂದು ನಿಮ್ಮನ್ನು ನೀವೇ ಕೇಳಿಕೊಳ್ಳಿ ಎಂದು ಕರೆಕೊಟ್ಟರು.

ಗಾಂಧೀಜಿ ಅವರ ಸ್ವರಾಜ್ಯದ ಕಲ್ಪನೆಯು 'ಬಡವರ ಸ್ವರಾಜ್ಯ'ವಾಗಿತ್ತು. ಈ ಬಗ್ಗೆ ಅವರು "ನನ್ನ ತಾತ್ವಿಕತೆ ತುಂಬಾ ಸರಳ. ನಮ್ಮ ದೇಶದಲ್ಲಿ ಬ್ರಿಟಿಷರು ಯಾವ ಆದೇಶವನ್ನು ಹೊರಡಿಸಲೂ ನಾನು ಬಿಡುವುದಿಲ್ಲ," ಎಂದು ಹೇಳುತ್ತಿದ್ದರು. ಬದುಕಿನ ಅಗತ್ಯಗಳಿಗೆ ಸಂಬಂಧಿಸಿದಂತೆ ಸಮತೋಲನವನ್ನು ಸಾಧಿಸುವುದು ಅವರ ಈ ತಾತ್ವಿಕತೆಯ ಕೇಂದ್ರವಾಗಿತ್ತು. ಅಂದರೆ, ಬದುಕಿನಲ್ಲಿ ನಾಲ್ಕು ಪುರುಷಾರ್ಥಗಳಾದ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳಿಗೆ ಅವರು ಪ್ರಾಮುಖ್ಯತೆ ನೀಡಿದ್ದರು.

ಮುಂದುವರಿಯುವುದು...

ಸಾದರ ಸ್ವೀಕಾರ

1.	ಗಾಂಧಿ ಕಥನ	ಡಿ.ಎಸ್. ನಾನಭೂಷಣ
2.	ನಾನು ಕಸ್ತೂರ್	ಡಾ.ಎಚ್.ಎಸ್.ಅನುಪಮಾ
3.	ಬಾಬಾ ಸಾಹೇಬ ಮತ್ತು ಮಕ್ಕಳ ಕಥೆಗಳು	ನಾಡೋಜ ಡಾ. ಕಮಲಾ ಹಂಪನಾ
4.	ಗಾಂಧೀಜಿ 100 ಆದರ್ಶಗಳು	ಎಂ.ವಿ. ನಾಗರಾಜರಾವ್
5.	ನಮ್ಮ ರಾಷ್ಟ್ರ ಧ್ವಜ	ಲೆ. ಕ ಕರಮ್‌ವೀರ್ ಸಿಂಗ್
6.	ಗಾಂಧಿಗಿರಿಯ ಫಸಲುಗಳು	ಡಾ.ಎನ್. ಜಗದೀಶ್ ಕೊಪ್ಪ
7.	ಈ ಬಾರತ	ಎ. ರಾಮಚಂದ್ರನ್
8.	ಸರ್ದಾರ್ ಪಟೇಲ್ (ಸಚಿತ್ರ ಜೀವನಗಾಥೆ)	ಪ್ರಕಾಶನ ವಿಭಾಗ, ಸಮಾಚಾರ ಮತ್ತು ಪ್ರಸಾರ ಸಚಿವಾಲಯ, ಭಾರತ ಸರ್ಕಾರ
9.	Law & Lawyers	M.K. Gandhi, (Navjivan Trust)
10.	23 Grams of Salt (Retracing Gandhi's March to Dandi)	Collection by : Naveen Kumar (Anju Ambal)
11.	ಗಾಂಧಿ v/s ಕಸ್ತೂರ್‌ಬಾ	ಪ್ರೊ. ಬರಗೂರು ರಾಮಚಂದ್ರಪ್ಪ

ವಚನಗಳಲ್ಲಿ ಆರೋಗ್ಯ ಸಂಹಿತೆ ಪ್ರಾಕೃತಿಕ ಆಹಾರದ ಮಹತ್ವ

ಡಾ. ವಸುಂಧರಾ ಭೂಪತಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಉದಾಹರಣೆಯಾಗಿ ಉಪ್ಪನ್ನೇ ತೆಗೆದುಕೊಳ್ಳಿ. ಉಪ್ಪು ರುಚಿಗೆ ಅಗತ್ಯವಾಗಿದ್ದರೂ, ಅಧಿಕ ಪ್ರಮಾಣದಲ್ಲಿ ಸೇವಿಸಿದರೆ ಆರೋಗ್ಯ ಸಮಸ್ಯೆಗಳು ಬರುವುದು ತಪ್ಪದು. ಸಾಮಾನ್ಯವಾಗಿ ಉಪ್ಪನ್ನು ನಾವು ಬಹುವಾಗಿ ಎಲ್ಲಾ ಪದಾರ್ಥಗಳ ಜೊತೆಯೂ ಸೇವಿಸಲು ಇಷ್ಟ ಪಡುತ್ತೇವೆ. ಆದರೆ ವಯಸ್ಸಾಗುತ್ತಾ ಹೋದಂತೆ ಅಧಿಕ ಉಪ್ಪಿನ ಸೇವನೆ ರಕ್ತದೊತ್ತಡ ಸಮಸ್ಯೆಗೆ ಕಾರಣವಾಗಬಹುದು. ಹೀಗಾಗಿ ಹೃದಯಕ್ಕೆ ಸಂಬಂಧಿಸಿದ ರೋಗಗಳ ಅಪಾಯ ನಿಮಗೆ ಹೆಚ್ಚಾಗಬಹುದು. ಬಹಳಷ್ಟು ಆರೋಗ್ಯ ತಜ್ಞರು ಸೋಡಿಯಂ ಸೇವನೆಯನ್ನು ಕಡಿಮೆ ಮಾಡಬೇಕು ಎಂದು ಸಲಹೆ ನೀಡಿದ್ದಾರೆ. ಆದರೆ ಸೋಡಿಯಂ ಸೇವನೆಯನ್ನು ಅತಿಯಾಗಿ ಕಡಿಮೆ ಮಾಡುವುದು ಅಸಾಧ್ಯವೇ ಆಗಿದೆ. ಏಕೆಂದರೆ ನೀವು ಸೇವಿಸುವ ಬಹುತೇಕ ಸಂಸ್ಕರಿತ ಆಹಾರದಲ್ಲಿ ಉಪ್ಪಿನ ಬಳಕೆ ಆಗಿಯೇ ಇರುತ್ತದೆ. ಉತ್ಪಾದನೆಯ ಸಂದರ್ಭದಲ್ಲಿ ಬಹುತೇಕ ಸಂಸ್ಕರಿತ ಆಹಾರಗಳಲ್ಲಿ ಸೋಡಿಯಂ ಬಳಕೆಯಾಗಿರುತ್ತದೆ. ಸಾಮಾನ್ಯವಾಗಿ ಉಪ್ಪಿನ ಅಂಶವನ್ನು ರುಚಿಯಲ್ಲಿ ತಿಳಿದು ಬಾರದೆ ಇರುವ ಸಂಸ್ಕರಿತ ಆಹಾರವಾದ ಬ್ರೆಡ್, ಬೆಣ್ಣೆ ಹಾಗೂ ನಾವು ಬೆಳಗಿನ ಉಪಹಾರಕ್ಕಾಗಿ ಬಳಸುವ ಅನೇಕ ದವಸ– ಧಾನ್ಯಗಳು ನಿತ್ಯವೂ ನಾವು ಅತಿಯಾದ ಸೋಡಿಯಂ ಸೇವನೆಗೆ ಕಾರಣವಾಗುವಂತೆ ಮಾಡುತ್ತವೆ. ಕೆಲವು ವಾಣಿಜ್ಯ ಸೂಪ್ ಮಿಕ್ಸ್‌ಗಳು, ಖರೀದಿಸಿದ ಸೂಪ್ ಸ್ಟಾಕ್ ಮತ್ತು ಕಾಂಡಿಮೆಂಟ್‌ಗಳು (ಟೊಮೆಟೊ ಸಾಸ್) ಸಮುದ್ರದ ನೀರಿಗಿಂತ ಹೆಚ್ಚು ಉಪ್ಪನ್ನು ಹೊಂದಿರುತ್ತವೆ.

ಪ್ರಾಕೃತಿಕ ಆಹಾರದಲ್ಲಿ ಸಾಮಾನ್ಯವಾಗಿ ಉಪ್ಪಿನ ಅಂಶ ಬಹಳ ಕಡಿಮೆ ಇರುತ್ತದೆ. ಅಲ್ಲದೆ ಸಂಸ್ಕರಿತ ಆಹಾರಗಳಿಗೆ ಹೋಲಿಸಿದರೆ ಹೆಚ್ಚುವರಿ ಪ್ರೋಟಿನ್ ಅಂಶಗಳನ್ನೂ ಹೊಂದಿರುತ್ತವೆ. ಉದಾಹರಣೆಗೆ ಮಾರುಕಟ್ಟೆಯಲ್ಲಿ ಸಿಗುವ ಸೇಬು ಹಣ್ಣಿನ ಕೇಕು ಸುಮಾರು 640 ಕಿಲೋ ಜೂಲ್‌ಗಳು ಮತ್ತು 200 ಮಿಲಿಗ್ರಾಂಗೂ ಅಧಿಕ ಸೋಡಿಯಂ ಹೊಂದಿರುತ್ತದೆ. ಈ ಸೇಬಿನ ಕೇಕಿನಲ್ಲಿರುವ 15 ಗ್ರಾಂ ಬಿಳಿ ಹಿಟ್ಟು, 4 ಗ್ರಾಂ ಸೂರ್ಯಕಾಂತಿ ಎಣ್ಣೆ, 6 ಗ್ರಾಂ ಸೇಬು ಎಲ್ಲವೂ ಸೇರಿ ಅಷ್ಟು ಸೋಡಿಯಂ ತುಂಬಿರುತ್ತದೆ. ಈ ಪ್ರೋಟೀನ್‌ಗಳನ್ನು ಅಷ್ಟಕ್ಕೆ ಸಮನಾದ ಪ್ರಾಕೃತಿಕ ಆಹಾರವಾಗಿ ಬದಲಾಯಿಸಿದಲ್ಲಿ ಅಂದರೆ ಇಡೀ ಗೋಧಿಯ ಹಿಟ್ಟು, ಸೂರ್ಯಕಾಂತಿ ಬೀಜಗಳು ಅಥವಾ ಸೇಬು ಹಣ್ಣನ್ನು ಇಡಿಯಾಗಿ ಹಸಿಯಾಗಿ ನೀವು ಪ್ರಾಕೃತಿಕವಾಗಿ ಸೇವಿಸಿದಲ್ಲಿ ಇಷ್ಟೊಂದು ಪ್ರಮಾಣದ ಸೋಡಿಯಂ ನಿಮ್ಮ ಹೊಟ್ಟೆಯನ್ನು ಸೇರುವುದಿಲ್ಲ. ಹಾಗೆಯೇ ಸಹಜವಾಗಿ ಪ್ರಕೃತಿದತ್ತವಾಗಿ ಇವುಗಳನ್ನು ಸೇವಿಸಿದಲ್ಲಿ ನೀವು ದುಪ್ಪಟ್ಟು ಪ್ರೋಟಿನ್ ಪಡೆಯಬಹುದು. ನಾಲ್ಕು ಪಟ್ಟು ಹೆಚ್ಚು ಕ್ಯಾಲ್ಸಿಯಂ, ಫೋಲೇಟ್ ಮತ್ತು ಕಬ್ಬಿಣದ ಅಂಶಗಳು, ಹತ್ತು ಪಟ್ಟು ಸತು ಮತ್ತು ಮ್ಯಾಗ್ನೆಶಿಯಂ ಹಾಗೂ 6 ಗ್ರಾಂಗಳಷ್ಟು ಹೆಚ್ಚುವರಿ ನಾರಿನಂಶವನ್ನು ಪಡೆದುಕೊಳ್ಳುವಿರಿ.

ಆದರೆ ಬಹಳಷ್ಟು ಜನರಿಗೆ ಪ್ರಾಕೃತಿಕ ಆಹಾರದ ಬದಲಾಗಿ ಆಗಾಗ್ಗೆ ಸಂಸ್ಕರಿತ ಆಹಾರವನ್ನು ಸೇವಿಸುವುದು ಹೆಚ್ಚು ದೊಡ್ಡ ಸಮಸ್ಯೆಯಾಗಲಾರದು. ಆದರೆ ನಿಮ್ಮ ಬಹುತೇಕ ಶಿಸ್ತಿನ ಆಹಾರವು ಸಂಸ್ಕರಿತವಲ್ಲದ ಪ್ರಾಕೃತಿಕ ಸಂಪನ್ಮೂಲಗಳಿಂದ ಬರಬೇಕಿದೆ. ಕನಿಷ್ಟ ಸಂಸ್ಕರಿತ ಆಹಾರದಿಂದ ಬಹಳ ಲಾಭವಿದೆ. ತಾಜಾ ಹಣ್ಣುಗಳು ಮತ್ತು ತಾಜಾ ತರಕಾರಿಗಳನ್ನು ಸೇವಿಸುವುದು, ಬೀಜಗಳು ಮತ್ತು ಕಾಯಿಗಳನ್ನು ತಿನ್ನುವುದು, ಇಡೀ ಧಾನ್ಯ ಮತ್ತು ಧಾನ್ಯದಿಂದ ಮಾಡಿದ ಆಹಾರ, ತಾಜಾ ಮಾಂಸ (ರೆಡ್ ಮೀಟ್), ಕೋಳಿ ಮಾಂಸ ಹಾಗೂ ಮೀನು ಮತ್ತು ಮೊಟ್ಟೆಗಳು ಇತ್ಯಾದಿ ಸೇವನೆ ಆರೋಗ್ಯಕರ. ಈ ಆಹಾರಗಳು ನಮ್ಮ ಆರೋಗ್ಯಕ್ಕೆ ಪೋಷಣೆ ನೀಡುವ ಉತ್ತಮ ಸತ್ವಗಳನ್ನು ಹೊಂದಿವೆ. ವಿವಿಧ ರೀತಿಯ ಅನಾರೋಗ್ಯ ಸಮಸ್ಯೆಗಳನ್ನು ತಡೆಯುವ ಮತ್ತು ಚಿಕಿತ್ಸೆ ನೀಡುವ ಗುಣ ಈ ಆಹಾರಕ್ಕೆ ಇದೆ.

ಮುಂದುವರಿಯುವುದು...



ಅರೆತಲೆನೋವಿನ ಆರೈಕೆಗಳು (ಮೈಗ್ರೇನ್)

– ಡಾ. ಸಂದೀಪ್
'ಆರೋಗ್ಯ ಧಾಮ" ಯೋಗ ಮತ್ತು ಪ್ರಕೃತಿ ಚಿಕಿತ್ಸಾ ಕೇಂದ್ರಗಳು

ತಲೆನೋವಿನ ಅನುಭವ ಇಲ್ಲದ ಒಬ್ಬನೇ ಒಬ್ಬ ವ್ಯಕ್ತಿಯೂ ಸಹ ಜಗತ್ತಿನಲ್ಲಿ ಸಿಗಲಾರ ಎಂಬುದು ವೈದ್ಯಕೀಯ ಸಂಶೋಧನೆಯ ಸಾರ. ಅನೇಕ ರೋಗಗಳ ಮೂಲ ಸಂಜ್ಞೆ ತಲೆನೋವು. ದೇಹದ ಯಾವುದೇ ಅಂಗ ರೋಗಕ್ಕೀಡಾದರೂ ತಲೆನೋವಿನಿಂದ ಸೂಚನೆ ಹೊಮ್ಮುತ್ತದೆ. ಅಷ್ಟೊಂದು ಸೂಕ್ಷ್ಮ ಭಾಗವೇ ಮೆದುಳು ಆಗಿದೆ. ಇತ್ತೀಚಿನ ದಿನಗಳಲ್ಲಿ ಅರೆ ತಲೆನೋವು (ಪಾರ್ಶ್ವ ತಲೆನೋವು) ಮೈಗ್ರೇನ್ – ಹೆಚ್ಚಿನ ಜನರಿಗೆ ಕಾಡುವ ರೋಗವಾಗಿದೆ. ಇದು ತಲೆಯ ಎಡ, ಬಲ, ಮಧ್ಯ ಹಾಗೂ ಹಿಂಭಾಗದಲ್ಲಿಯೂ ಸಹ ನೋವು ಬರಬಹುದು. ಪೂರ್ಣ ತಲೆ ನೋವು ಇರುವುದಿಲ್ಲ. ಕೇವಲ ಪಾರ್ಶ್ವ ಭಾಗದಲ್ಲಿ ಬರುವ ತಲೆನೋವಿಗೆ ಅರೆ ತಲೆನೋವು ಎನ್ನುತ್ತಾರೆ.

ಅರೆ ತಲೆನೋವಿಗೆ ಕಾರಣಗಳು

1. ಪಿತ್ತ ದೋಷ, 2. ರಕ್ತದೊತ್ತಡ, 3. ಕಣ್ಣಿನ ದೋಷಗಳು
4. ಮೆದುಳು ರೋಗಗಳು, 5. ಮಾನಸಿಕ ಒತ್ತಡಗಳು
6. ನಿದ್ರಾಹೀನತೆ, 7. ಮಾನಸಿಕ ಕಾಯಿಲೆಗಳು

ಪರಿಹಾರಗಳು

ಮೈಗ್ರೇನ್ ಇದ್ದವರು, ಒಂದೆರಡು ದಿನ ನೋವನ್ನು ಅನುಭವಿಸಿ, ಕೊನೆಗೆ ವಾಂತಿ ಮಾಡಿಕೊಂಡು ಪೂರಾ ಪಿತ್ತ ವಾಂತಿಯಾದೊಡನೆ ಮಲಗುತ್ತಾರೆ. ಆಗಲೇ ಸ್ವಲ್ಪ ಪ್ರಮಾಣದಲ್ಲಿ ತಲೆನೋವು ಕಡಿಮೆಯಾಗುತ್ತದೆ. ಇದರಿಂದ ತಿಳಿಯುವುದೇನೆಂದರೆ ಪಿತ್ತ ದೋಷ ವಿಪರೀತವಾಗಿದ್ದು, ವಾಂತಿ ಮೂಲಕ ಹೊರಹಾಕಿದಾಗ ತನ್ನಷ್ಟಕ್ಕೆ ತಾನೇ ರೋಗ ಕಡಿಮೆಯಾಗುತ್ತದೆ. ಎರಡು ಮೂರು ದಿನ ಯಾವುದೇ ಔಷಧಿ ಪಡೆದರೂ ಈ ಅರೆ ತಲೆನೋವಿನ ಬಾಧೆ ನಿಲ್ಲುವುದಿಲ್ಲ. ಅರೆ ತಲೆನೋವು ಹೋಗಲಾಡಿಸಲು ಸುಲಭದ ಉಪಾಯಗಳು ಇಂತಿವೆ.

1. ವಾಮನ ಕ್ರಿಯೆ : ಅಂದರೆ 4 ರಿಂದ 6 ಗ್ಲಾಸು ಬಿಸಿನೀರು, 3 ಚಮಚ ಉಪ್ಪು ಸೇರಿಸಿ ಖಾಲಿ ಹೊಟ್ಟೆಯಲ್ಲಿ ಕುಡಿಯಬೇಕು. ನಂತರ ಬಾಗಿ ಗಂಟಲನ್ನು ಬಲಗೈಯ ತೋರುಬೆರಳು ಹಾಗೂ ಮಧ್ಯದ ಬೆರಳಿನಿಂದ ನಾಲಿಗೆ, ಗಂಟಲಿನವರೆಗೆ ತಿಕ್ಕಿ ಕುಡಿದ ನೀರನ್ನು ವಾಂತಿ ಮಾಡಿ ಹೊರ ತೆಗೆಯಬೇಕು. ನೀರು ಹೆಚ್ಚು ಕುಡಿದಷ್ಟು ಸುಲಭವಾಗಿ ವಾಂತಿಯಾಗಿ, ಕುಡಿದ ನೀರು ಹೊರ ಬರುತ್ತದೆ. ಸೊಂಟದಿಂದ ಬಾಯಿ ಕೆಳಗೆ ಬರುವಷ್ಟು ದೇಹವನ್ನು ಬಗ್ಗಿಸಬೇಕು. ಇದನ್ನು ವಾಮನ ಕ್ರಿಯೆ ಎನ್ನುತ್ತಾರೆ.

   ಈ ಕ್ರಿಯೆಯನ್ನು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಮಾಡಬೇಕು. ಹತ್ತು ನಿಮಿಷಗಳ ನಂತರ ನೀರು ಕುಡಿಯಬೇಕು. ಆರಂಭದಲ್ಲಿ ಒಂದು ವಾರ ನಿತ್ಯ ಮಾಡಿ. ನಂತರ ವಾರಕ್ಕೆ ಎರಡು ಸಲದಂತೆ ಮೂರು ವಾರ ಮಾಡಿದ ನಂತರ ಬಿಡಬಹುದು. ಮೈಗ್ರೇನ್ ಇದ್ದವರು ನಿಗದಿತ ಸಮಯವನ್ನು ಪರಿಗಣಿಸದೇ ಯಾವಾಗ ಅತೀ ಹೆಚ್ಚು ನೋವು ಅನುಭವಿಸುವರೋ ಆಗಲೇ ಮಾಡಬಹುದು. ಹಗಲು, ಮಧ್ಯಾಹ್ನ, ರಾತ್ರಿ ಅಭ್ಯಾಸಕ್ರಮವಾದರೆ ಸುಲಭದಲ್ಲಿ ಬೆರಳು ಹಾಕದೇ ವಾಂತಿ ಆಗುತ್ತದೆ. ಆನೆಯು ಸೊಂಡಲಿನಿಂದ ನೀರು ಕುಡಿದು ಹೊರಹಾಕುವುದನ್ನು ನಾವು ಚಿತ್ರದಲ್ಲಿ ನೋಡಿದ್ದೇವೆ. ಹಾಗೆಯೇ ನೀರು ಹೊರಹಾಕುವ ಕ್ರಿಯೆಗೆ ಕುಂಜಲ ಕ್ರಿಯೆ ಎನ್ನುತ್ತಾರೆ. ಈ ಸ್ಥಿತಿಯು ಒಮ್ಮೆಲೇ ಬರುವುದಿಲ್ಲ, ಇದು ನಿಯಮಿತ ಅಭ್ಯಾಸವಾಗಬೇಕಾಗುತ್ತದೆ.
2. ಮೂರು ವಾರ ಹುಳಿ ಖಾರ ಸೇವಿಸುವುದನ್ನು ಬಿಡಬೇಕು (ಮಾಂಸಾಹಾರ ಬೇಡ)
3. ತಂಬಾಕು, ಸಿಗರೇಟ್ ನಿಷಿದ್ಧ
4. ಯಥೇಚ್ಛವಾಗಿ ನೀರು ಕುಡಿಯಬೇಕು
5. ತಲೆನೋವು ಬಂದಾಗ ತಣ್ಣನೆಯ ಐಸ್ ಪೀಸ್ (ಮಂಜು ಗಡ್ಡೆ) ಗಳನ್ನು ಒಂದು ಪ್ಲಾಸ್ಟಿಕ್ ಚೀಲದಲ್ಲಿ ಕಟ್ಟಿ ತಲೆಯ ಮೇಲೆ 5 ರಿಂದ 10 ನಿಮಿಷ ಇಟ್ಟುಕೊಳ್ಳಬೇಕು.
6. ದಿನ ಬೆಳಿಗ್ಗೆ ನೀರು ಕುಡಿದು 30 ನಿಮಿಷ ಬಿಟ್ಟು, ಒಂದು ಗ್ಲಾಸ್ ಬೂದುಕುಂಬಳ ಕಾಯಿಯ ರಸ, ಸೌತೆಕಾಯಿಯ ರಸ ಅಥವಾ ಸೋರೆಕಾಯಿಯ ರಸವನ್ನು ಸೇವಿಸಬೇಕು.
7. ರಾತ್ರಿ ಬಿಸಿನೀರನ್ನು ಬಕೇಟ್‌ನಲ್ಲಿ ಹಾಕಿ ಅದರಲ್ಲಿ ಕಾಲುಗಳನ್ನು ಇಟ್ಟು 20 ನಿಮಿಷ ಕುಳಿತುಕೊಳ್ಳಬೇಕು. ಮುಗಿಯುವಾಗ ಕಾಲಿಗೆ ತಣ್ಣೀರು ಹಾಕಿ ಒರೆಸಿಕೊಳ್ಳುವುದು.
8. ನಿತ್ಯ ಯೋಗಾಭ್ಯಾಸ, ಪ್ರಾಣಾಯಾಮ, ಯೋಗ ನಿದ್ರೆಗಳಂತಹ ಅಭ್ಯಾಸಗಳನ್ನು ಇಟ್ಟುಕೊಳ್ಳಬೇಕು.
9. ಒಂದು ವೇಳೆ ನರಗಳಿಗೆ ಸಂಬಂಧ ಪಟ್ಟಂತಹ ಸಮಸ್ಯೆ ಇದ್ದು ತಲೆನೋವಿದ್ದರೆ, ಗಾಂಧಿ ಭವನದ ಪ್ರಕೃತಿ ಚಿಕಿತ್ಸಾಲಯದಲ್ಲಿ ತಜ್ಞರ ಸಲಹೆ, ಆಕ್ಯುಪಂಚರ್ ಚಿಕಿತ್ಸೆ ಲಭ್ಯವಿದೆ. ಸದಾ ಔಷಧಿಯೊಂದಿಗೆ ಜೀವನ ನಡೆಸುವುದಕ್ಕಿಂತ, ಔಷಧಿ ರಹಿತವಾಗಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಜೀವನವನ್ನು ಆಯ್ಕೆ ಮಾಡಿರಿ. ಸದಾ ಸುಖಿಯಾಗಿರಿ.

FEVER!

Condensed form of 'Fever Book" - 1974 & Published by Hart Davis Macgibbos, P.O. - 9 St Albans, England : by John Fuller

continued from the previous edition...

Today the threat of plague seems unreal. Yet In January 1969 an unknown killer struck in Nigeria virus of such overwhelming power that in this age of jet travel it could trigger global calamity, In a dangerous race against time, a team of researchers risked their lives to track the virus to its source and find a vaccine that would be able to conquer it. This is the story of that quest, one of the most fascinating and Inspiring medical revelations of our time

Because antibodies can be found in an animal or human that has successfully recovered from a virus disease, Wil Downs had already cabled the Virus Research Laboratory of the University of Ibadan in Nigeria, asking scientists there to investigate the outbreak at Lassa and Jos. Perhaps Nigerian villagers could be found who had survived the new disease. If so, their blood should contain antibodies. He also asked that the wildlife of the region - especially rodents be bled and tested, in the hope that the carrier of the virus might be found. Meanwhile, the course of Penny Pinneo's illness had taken a turn for the better. Her temperature went down to 37.2 degrees centigrade (99 F.). On May 3, nine weeks after she entered the isolation ward at Columbia-Presbyterian, she was released. Her hearing was far from normal, and she had lost 13 kilos and most of the hair on her head. But she was alive. Her apparent recovery gave Jordi Casals another potential weapon against "Lassa fever," as John Frame and his colleagues now called it. For if antibodies appeared in Penny's blood serum, it would be possible to make a crude antiserum from it. The practice of injecting serum containing antibodies into someone who has contracted a virus disease is an old one, used mainly before the techniques of modern vaccine production were perfected. It is dangerous. For one thing, the serum may contain a hidden live virus. It may cause serum hepatitis, or in some cases induce complete kidney collapse and thus kill a patient who otherwise might have recovered. But, in an emergency, when there is no vaccine available, it is about the only technique that can be used. Casals' tests were positive: serum taken from Penny Pinneo on the twentyeighth day of her illness was packed with Lassavirus antibodies. Casals then set out to establish how long the virus control could persist after clinical recovery of the victim. He started to find that, although none of his baby mice had shown any signs of illness, live Lassa virus was present in their urine some 45 days after they had been injected with infectious serum. Apparently the virus could hide in the kidneys for a long period in rodents at least. This finding indicated a strong similarity between Lassa virus and certain deadly South American viruses. The working hypothesis was this: infant rodents became infected with the disease at birth, and carried it without damage to themselves; but they could transmit it through their urine to humans. Such a supposition dovetailed neatly with an unusual Nigerian bush custom. During the dry season, village youngsters, armed with clubs, would move out to the deeper savannah, set fire to the grass, wait at the edges for the rats to rush out in panic, club them and take them to their compounds and cooking fires. Of course, when the rats were caught, they were frightened; and when they were frightened, they urinated. EARLY in June, sitting at his laboratory bench, Jordi Casals felt a chill run through him. He ignored it and continued working. But it persisted. He took two aspirin and went back to his bench. As is tradition in his profession, he refused to allow himself to think that his symptoms might be serious. That would only lead to hypochondria, a fatal obsession in his kind of work.

To be continued...

ಪುಸ್ತಕ ಪರಿಚಯ : ಅವ್ವನ ಕಾಲ (ಕವಿತೆಗಳು)

– ಡಾ. ಎಸ್.ರಾಮಲಿಂಗೇಶ್ವರ (ಸಿಸಿರಾ), ಕೃತಿಕಾರರು : ಶ್ರೀ ಸಂದೇಶ್ ಕುಂಬಾರ್

ಕುವೆಂಪು ಕರ್ನಾಟಕ ಜನಪರ ವೇದಿಕೆಯ ಮೂಲಕ ಸಂಘಟನೆ, ಸಾಹಿತ್ಯ ಬರಹ, ಕನ್ನಡದ ಹಲವು ಕಾರ್ಯಕ್ರಮಗಳ ಮೂಲಕ ಕ್ರಿಯಾಶೀಲವಾಗಿ ಒಂದಿಲ್ಲೊಂದು ಚಟುವಟಿಕೆಗಳಲ್ಲಿ ಯುವ ಬರಹಗಾರ ಶ್ರೀಸಂದೇಶ್ ಕುಂಬಾರ್ ತೊಡಗಿದ್ದಾರೆ. ಈಗಾಗಲೇ 'ಕನ್ನಡ ಕಂದ", "ನನ್ನ ಪ್ರೀತಿಯ ಸಾವು", "ಚಪ್ಪರ" ಮತ್ತು "ಹೂಗನಸು" ಕವನಸಂಕಲನಗಳ ಮೂಲಕ ಚಿರಪರಿಚಿತರಾಗಿದ್ದಾರೆ. ಬೆಂಗಳೂರು ನಗರ ಜಿಲ್ಲಾ ಕಸಾಪ ಹಾಗೂ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಹಲವಾರು ಸಾಹಿತ್ಯಪರ ಸಂಘಟನೆಗಳ ಒಡನಾಟವಿಟ್ಟುಕೊಂಡು ವಿವಿಧ ಗೋಷ್ಠಿಗಳಲ್ಲಿ ಸ್ವರಚಿತ ಕವನಗಳನ್ನು ವಾಚಿಸಿದ್ದಾರೆ. ವಿಶೇಷವಾಗಿ ನನಗೆ ವೈಯಕ್ತಿಕವಾಗಿ ತೀರಾ ಹತ್ತಿರದಿಂದ ಪರಿಚಿತರಾದವರು. ಚನ್ನಪಟ್ಟಣ ತಾಲ್ಲೂಕಿನ ಪುಟ್ಟಪ್ಪನ ದೊಡ್ಡಿಯ ಶ್ರೀ ವೆಂಕಟೇಶ್ವರ ಮತ್ತು ಶ್ರೀಮತಿ ಚಿಕ್ಕ ತಾಯಮ್ಮನವರ ಸುಪುತ್ರರಾಗಿದ್ದಾರೆ. ಉದ್ಯೋಗ ನಿಮಿತ್ತ ಬೆಂಗಳೂರಿಗೆ ಬಂದ ಶ್ರೀಯುತ ಸಂದೇಶ್ ಕುಂಬಾರ್ ಅವರು ಇಲ್ಲಿ ಸಹರಾದೊಳಗೆ ಕಳೆದು ಹೋಗದೆ ತಮ್ಮ ಕನ್ನಡಪರ ಸಾಹಿತ್ಯದ ವಾತಾವರಣದಲ್ಲಿ ಜೀವನದ ನೊಗವನ್ನು ಹೊತ್ತು ಸಾಗುತ್ತಿದ್ದಾರೆ. ಇಂದಿನ ಯುವಜನತೆ ಮೊಬೈಲ್, ವಾಟ್ಸಪ್, ಫೇಸ್‌ಬುಕ್, ಇಂಟರ್‌ನೆಟ್‌ನ ಹಲವು ಬಗೆಯ ತಂತ್ರಜ್ಞಾನಗಳಲ್ಲಿ ಕಳೆದು ಹೋಗುತ್ತಿರುವ ಸಂದರ್ಭದಲ್ಲಿ ಸಂದೇಶ್ ಅವರು ಹಾಗೆ ಇರದೆ ಯುವ ಮನಸ್ಸುಗಳಿಗೆ ಮಾದರಿಯಾಗಿರುವುದು ಸಂತೋಷ ಹಾಗೂ ಆಶಾದಾಯಕ ವಿಷಯವಾಗಿದೆ. ಆಗಿದೆ. "ಅವ್ವನ ಕಾಲ" ಕವಿತೆಯಲ್ಲಿ ಇಂದಿನ ಯುವಜನರ ಜವಾಬ್ದಾರಿಯ ಅನಿವಾರ್ಯತೆಯನ್ನು ಸಂದೇಶ್ ಒತ್ತಿ ಒತ್ತಿ ಹೇಳುತ್ತಾರೆ. ಮೂಲಭೂತ ಸಮಸ್ಯೆಗಳ ಪರಿಹಾರಕ್ಕೆ ಕಾವ್ಯ ಪದಗಳನ್ನು ಕೂಡಿಸಿ ಪೋಷಿಸುತ್ತಾರೆ. ಕೆಲವೊಮ್ಮೆ ಪದ್ಯ, ಕೆಲವೊಮ್ಮೆ ಗದ್ಯದ ವಾಚ್ಯಾರ್ಥ ರೂಪದಲ್ಲಿ ಸರಳವಾಗಿ ಬಿಡಿಸಿಡುವ ಬೇಂದ್ರೆ, ಕುವೆಂಪು, ಅಡಿಗರ ಕಾವ್ಯ ಸಂವಾದ ಮಾಡುವ ಅವಶ್ಯಕತೆಯನ್ನು ಒತ್ತಿ ಹೇಳುತ್ತಾರೆ. ಇನ್ನೂ ಉತ್ತಮ ಕೃತಿಗಳು ಶ್ರೀಯುತರಿಂದ ಹೊರ ಹೊಮ್ಮಲಿ ಎಂದು ಶುಭ ಹಾರೈಸಲಾಗಿದೆ.

ನೀವು ಕಳುಹಿಸುತ್ತಿರುವ "ಬಾಪು ಪ್ರಪಂಚ" ಸಂಚಿಕೆ ತುಂಬಾ ಚೆನ್ನಾಗಿ ಬರುತ್ತಿದೆ. ನಾನು ಪೂರ್ಣವಾಗಿ ಓದುತ್ತೇನೆ. ಒಳ್ಳೆಯ ಕೆಲಸ ಗಾಂಧಿ ಭವನದಿಂದ ಆಗುತ್ತಿದೆ ಸಂತೋಷ.

ಡಾ.ಎಸ್.ಎನ್. ಸುಬ್ಬರಾವ್,
ನಿರ್ದೇಶಕರು, ರಾ.ಯು.ಯೋ.

2020ರ ಡಿಸೆಂಬರ್ 'ಬಾಪು ಪ್ರಪಂಚ' ಮಾಸಿಕ ಸಂಚಿಕೆಯು ಡಾ. ಬಿ.ಆರ್. ಅಂಬೇಡ್ಕರ್, ಜವಾಹರಲಾಲ್ ನೆಹರು, ಸರ್ದಾರ್ ವಲ್ಲಭಭಾಯಿ ಪಟೇಲ್ ಮುಂತಾದವರು ಸಂವಿಧಾನ ರಚನೆಯ ಕರಡು ವಿಷಯ ವಿಚಾರ ಚರ್ಚೆ ಮತ್ತು ಸಭೆಯ ನಡಾವಳಿಗಳ ಬಗೆಗಿನ ಮುಖಪುಟ ಚಿತ್ರ ಸುಂದರವಾಗಿ ಮೂಡಿಬಂದಿದೆ. ಸಂವಿಧಾನ ಕರಡು ರಚನೆ ಹಿಂದೆ-ಮುಂದಿನ ವಿದ್ಯಮಾನಗಳನ್ನು ನೆನಪು ಮಾಡುವಂತಿದೆ. ಸಂಪಾದಕ ಮಂಡಳಿಗೆ ಅಬಿನಂಧನೆಗಳು.

ಪ್ರೊ. ಎಂ.ಕೆ. ಸತೀಶ್, ಚಿಕ್ಕಬಳ್ಳಾಪುರ

ಮನಶಾಸ್ತ್ರಜ್ಞರೂ, ಖ್ಯಾತ ವೈದ್ಯರೂ ಆದ ಡಾ. ಸಿ.ಆರ್. ಚಂದ್ರಶೇಖರ್ ಅವರ ಮಾದಕ ವಸ್ತುಗಳ ಮಾಯಾಜಾ ಲೇಖನವು ಇಂದಿನ ಯುವ ಪೀಳಿಗೆಯು ದುಶ್ಚಟಗಳ ದಾಸರಾಗಿ ಸಮಾಜದಲ್ಲಿ ಆಗುತ್ತಿರುವ ಅವಾಂತರಗಳನ್ನ ತಿಳಿಸುವ ಬರಹವು ವಾಸ್ತವಿಕ ಜಗತ್ತಿನ ಅನಾವರಣ ಮಾಡುತ್ತಿದೆ. ಪ್ರತಿಯೊಬ್ಬರೂ ಓದಲೇಬೇಕಾದ ಲೇಖನವಾಗಿದೆ.

ಡಾ. ನಮನಚಂದ್ರು, ಕನಕಪುರ

ಕನ್ನಡ ಕನ್ನಡಿಗ ಕರ್ನಾಟಕ ಕುರಿತಾದ ಈ ಬಾರಿಯ ಸಂಚಿಕೆಯ ಬರಹವು ಪ್ರೊ. ಲೀಲಾವಾಸುದೇವ್ ಅವರು 'ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಜಿ.ಪಿ. ರಾಜರತ್ನಂ ಅವರ ಕಿರುಪರಿಚಯ ಸೊಗಸಾಗಿದೆ. ಧನ್ಯವಾದಗಳು.

ಸಹನ ಎಸ್., ಬೆಂಗಳೂರು

ಗಾಂಧಿ ಭವನದ ಅಧ್ಯಕ್ಷರಾದ ನಾಡೋಜ ಡಾ. ವೂ.ಡೇ. ಪಿ. ಕೃಷ್ಣ ಅವರು ವಿಶ್ವಮಾನವ ಹಕ್ಕುಗಳಾದ ಸುಮಾರು 30 ವಿಧಿವಿಧಾನಗಳನ್ನು ಪರಿಚಯಿಸಿದ್ದಾರೆ. ಜನಸಾಮಾನ್ಯರ ಅರಿವು ಮೂಡಿಸುವ 'ಮಾನವ ಹಕ್ಕುಗಳು' ಎಲ್ಲರಿಗೂ ಮಾರ್ಗದರ್ಶಕವಾಗಿದೆ.

ಶಾರದಾ ನಾಗೇಶ್, ಚನ್ನಪಟ್ಟಣ

ಕಾರ್ಯದರ್ಶಿ ಅವರೇ, ಸಂಪಾದಕೀಯ ಸೂಕ್ತವಾಗಿತ್ತು. ಸಮಯೋಚಿತವಾಗಿ ಮೂಡಿಬಂದಿದೆ. 2020ರ ಭೀಭತ್ಸತೆ ಜನರಲ್ಲಿ ಆತಂಕ, ಬಡವ-ಶ್ರೀಮಂತರೆನ್ನದೆ ಜಗತ್ತಿನ ಉದ್ದಗಲಕ್ಕೂ ಹರಡಿದ ಕಾಯಿಲೆ, ಎಲ್ಲರಲ್ಲೂ ನಡುಕ ಉಂಟು ಮಾಡಿದ್ದಂತೂ ನಿಜವಾದ ಸಂಗತಿ. ಕಾಯಿಲೆಗೆ ಔಷದವಿಲ್ಲದೆ. ಚುಚ್ಚುಮದ್ದಿಲ್ಲದೆ ಮರಣ ಮೃದಂಗ ಬಾರಿಸಿತು. ಈಗಲೂ ಕಡಿಮೆಯಾಗಿಲ್ಲ. ಫ್ರಾನ್ಸ್‌ನ ದೊರೆ 14ನೇ ಲೂಯಿಯ ಮತ್ತು ಜಗತ್ತಿನ ಮಹಾಯುದ್ಧದ ಸಮಯದಲ್ಲಿ ಹಿಟ್ಲರ್ ನಿರ್ಮಿಸಿದ ಕಾನ್ಸಂಟ್ರೇಷನ್ ಮತ್ತು ಗಿಲೋಟಿನ್ ಯಂತ್ರದ ಹೋಲಿಕೆ ಚರಿತ್ರೆಯ ಪುಟಗಳನ್ನು ಅದೂ ರಕ್ತ-ಸಿಕ್ತವಾದ ಸನ್ನಿವೇಶಗಳ ನೆನಪುಗಳು, ತಮ್ಮ ಲೇಖನವನ್ನು ಓದಿ ಮನಸ್ಸಿನಲ್ಲಿ ಮೂಡಿಬಂದಿತು. ನಾವೆಲ್ಲರೂ ಸೇರಿ ತಾವು ಹೇಳಿದಂತೆ, ಬೇಂದ್ರೆ ಅವರ ಕವನದ ಸಾಲು, "ಶುಭ ನುಡಿಯೇ ಶಕುನದ ಹಕ್ಕಿ' ಎಂದು ಪ್ರಕೃತಿಯನ್ನು, ಭಾರತ ಮಾತೆ, ಕನ್ನಡಾಂಬೆಯನ್ನು ಪ್ರಾರ್ಥಿಸೋಣ! ಹೊಸ ವರುಷ ಜಗತ್ ಶುದ್ಧಿಮಾಡಿ, ಎಲ್ಲರನ್ನೂ ಆ ಪರಮಾತ್ಮ ಕಾಪಾಡಲಿ, ಇದೇ ನನ್ನ ನಿಮ್ಮ ಎಲ್ಲರ ಆಶಯ.

ವನಜಾ ರಾಜನ್, ಬೆಂಗಳೂರು

ಡಿಸೆಂಬರ್ ತಿಂಗಳ ಬಾಪು ಪ್ರಪಂಚ ಸಂಚಿಕೆ ಉಪಯುಕ್ತ ಮಾಹಿತಿಗಳನ್ನೊಳಗೊಂಡು ಕನ್ನಡಮಯವಾಗಿ ಮೂಡಿಬಂದಿದೆ. ಕರ್ನಾಟಕವೇ ಒಂದು ಸಂಸ್ಕೃತಿ ಎಂದ ನಲ್ಮೆಯ ಕನ್ನಡಿಗ, 'ಸಿರಿಗನ್ನಡಂ ಗೆಲ್ಗೆ' ಎಂಬ ಅಮೃತ ಪದವನ್ನು ಕನ್ನಡ ನಾಡಿಗೆ ಪರಿಚಯಿಸಿದ್ದು ರಾ.ಹ. ದೇಶಪಾಂಡೆ ಅವರ ಪರಿಚಯ, ನಮ್ಮ ನಾಡಿನ ಹೆಮ್ಮೆಯ ಸಾಹಿತಿಗಳಾದ ಜಿ.ಪಿ. ರಾಜರತ್ನಂ, ಡಾ. ಎಂ. ಶಿವರಾಂ, ಕನ್ನಡಿಗರ ಕುಲದೇವತೆ ಭುವನೇಶ್ವರಿ ಕುರಿತಾದ ಅತ್ಯಮೂಲ್ಯ ಮಾಹಿತಿ, ವಿಶ್ವ ಮಾನವ ಹಕ್ಕುಗಳು ಹಾಗೂ ದಂಡಿಯಾತ್ರೆಯಲ್ಲಿ ಭಾಗವಹಿಸಿದವರ ವಿವರಗಳ ಜೊತೆಗೆ ಮಹಾತ್ಮ ಗಾಂಧಿ ಕುರಿತಾದ ವಿವಿಧ ಲೇಖನಗಳು ಚೊಕ್ಕವಾಗಿ ಸಂಚಿಕೆಯ ಪ್ರತಿ ಪುಟದಲ್ಲೂ ಹರಡಿಕೊಂಡಿವೆ.

ಅಭಿನಂದನೆಗಳೊಂದಿಗೆ...

ಮಹೇಶ್, ಬೆಂಗಳೂರು

ಕರ್ನಾಟಕ ಏಕೀಕರಣವಾದ 64 ಈ ಸುಸಂದರ್ಭದಲ್ಲಿ ಸಾಹಿತ್ಯ, ಸಂಸ್ಕೃತಿ, ಸಮಾಜ ಶಿಕ್ಷಣ ಇತ್ಯಾದಿ ವಿವಿಧ ಸ್ತರದಲ್ಲಿ ಈ ಕರ್ನಾಟಕ ಮಾಲೆಯನ್ನು ಕಟ್ಟಿ ಬೆಳೆಸಿದ ಮರೆಯಲಾಗದ ಮಹಾನ್ ಚೇತನಗಳನ್ನು ಬಾಪು ಪ್ರಪಂಚ ಸ್ಮರಿಸಿರುವುದು ನಿಜಕ್ಕೂ ಸ್ತುತ್ಯಾರ್ಹ! ತಮ್ಮಂತಹ ಸಹೃದಯರೊಂದಿಗೆ ನನ್ನ ಕೆಲವು ಅನಿಸಿಕೆಗಳನ್ನು ಹಂಚಿಕೊಳ್ಳಬೇಕೆನಿಸಿತು. ನನ್ನ ಬಾಲ್ಯದ ದಿನಗಳು ಮೈಸೂರಿನಲ್ಲಿ ನಾವು ಶಿಶುವಿಹಾರದಲ್ಲಿ ಕಲಿತ "ಬಣ್ಣದ ತಗಡಿನ ತುತ್ತೂರಿ", ಜಿ.ಪಿ. ರಾಜರತ್ನಂ ಅವರ "ನಾಯಿ ಮರಿ ನಾಯಿ ಮರಿ ತಿಂಡಿಬೇಕೆ"?, "ಹೆಂಡ, ಹೆಂಡ್ತಿ ಕನ್ನಡ ಪದಗೊಳ್ ಅಂದ್ರೆ ರತ್ನಂಗೆ ಪ್ರಾಣ", ಹೋಂರೂಲ್ ಇನ್ನಿತರ ಹಾಸ್ಯನಾಟಕಗಳನ್ನು ನೋಡಿ, ಹಾಡಿ, ನಕ್ಕು ಆನಂದ ಪಟ್ಟಿದ್ದೆವು. ಡಾ. ಶಿವರಾಂ ಅವರ 'ಕೊರವಂಜಿ' ಯಾವಾಗ ನಮಗೆ ಓದಲು ಸಿಗುವುದು ಎಂದು ಕಾದು ಕುಳಿತಿರುತ್ತಿದ್ದೆವು. ಅಂದಿನ ದಿನಗಳಲ್ಲಿ "ಕುಟುಂಬ ವೈದ್ಯರು" ಎಂಬುದಾಗಿ ಇರುತ್ತಿದ್ದರು. ರೋಗಿಯ ಬಗ್ಗೆ ಅವರ ಕುಟುಂಬದ ಬಗ್ಗೆ ಎಲ್ಲಾ ವಿಷಯಗಳು ತಿಳಿದಿರುತ್ತಿತ್ತು. ಪ್ರತಿಯೊಬ್ಬ ರೋಗಿಯ ಯೋಗಕ್ಷೇಮವನ್ನು ವಿಚಾರಿಸಲು ಸಾಕಷ್ಟು ಸಮಯ ತೆಗೆದುಕೊಳ್ಳುತ್ತಿದ್ದರು. ಕೇವಲ ನಾಡಿ, ನಾಲಿಗೆ, ನೋಡಿ ರೋಗ ಪತ್ತೆ ಹಚ್ಚುತ್ತಿದ್ದರು. ಮುಖ್ಯವಾಗಿ ಅವರ "ಹಾಸ್ಯ" ಚಟಾಕಿಗಳು 'ಅರ್ಧ' ಕಾಯಿಲೆ ಗುಣವಾಡಲು ಸಹಕಾರಿಯಾಗುತ್ತಿತ್ತು. ಇಂಥಹ ಮಹನೀಯರನ್ನು ನಗುತ್ತಾ ಪರಿಚಯ ಮಾಡಿಕೊಟ್ಟ ಡಾ. ಎಸ್. ರಾಮಲಿಂಗೇಶ್ವರ, ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ವನಜಾ ರಾಜನ್, ಬೆಂಗಳೂರು

ಮಹಿಳಾ ಪೈಲಟ್‌ಗಳ ಸಾರಥ್ಯದಲ್ಲಿ ಬಂತು ಸ್ಯಾನ್‌ಫ್ರಾನ್ಸಿಸ್ಕೋ ವಿಮಾನ

ಸತತ 16 ತಾಸು ಪ್ರಯಾಣದ ಬಳಿಕ ಬೆಂಗಳೂರಲ್ಲಿ ಇಳಿದ ಏರಿಂಡಿಯಾ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಅಮೆರಿಕದ ಸ್ಯಾನ್‌ಫ್ರಾನ್ಸಿಸ್ಕೋ ಹಾಗೂ ಬೆಂಗಳೂರು ನಡುವಣ ಏರ್ ಇಂಡಿಯಾ ಕಂಪನಿಯ ಮೊದಲ ತಡೆರಹಿತ ನೇರ ವಿಮಾನ ಸೋಮವಾರ ಬೆಂಗಳೂರಿಗೆ ಆಗಮಿಸಿತು.

ಜ.9ರಂದು ರಾತ್ರಿ 8.30ಕ್ಕೆ (ಅಮೆರಿಕ ಕಾಲಮಾನ) ಸ್ಯಾನ್ ಫ್ರಾನ್ಸಿಸ್ಕೋದಿಂದ 238 ಪ್ರಯಾಣಿಕರನ್ನು ಹೊತ್ತು ಹೊರಟಿದ್ದ 'ಎಐ 176' ವಿಮಾನ ಸೋಮವಾರ ಮುಂಜಾನೆ 3 ಗಂಟೆಗೆ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ(ಕೆಐಎ)ದಲ್ಲಿ ಸುರಕ್ಷಿತವಾಗಿ ಬಂದಿಳಿಯಿತು.

ವಿಶೇಷವೆಂದರೆ, ನಾಲ್ವರು ಪೈಲಟ್‌ಗಳು ಹಾಗೂ 12 ಮಂದಿ ಗಗನಸಖಿಯರು ಸೇರಿದಂತೆ ವಿಮಾನದ ಎಲ್ಲಾ ಸಿಬ್ಬಂದಿ ಮಹಿಳೆಯರಾಗಿದ್ದರು. ಸತತ 16 ಗಂಟೆಗಳ ಕಾಲ ಸುಮಾರು 14 ಸಾವಿರ ಕಿ.ಮೀ. ದೂರ ವಿಮಾನ ಚಲಾಯಿಸುವ ಮೂಲಕ ಈ ತಂಡ ದಾಖಲೆ ಬರೆಯಿತು. ಅತಿ ದೂರ ಮಾರ್ಗದ ವಿಮಾನ ಚಲಾಯಿಸಿ ಇತಿಹಾಸ ಬರೆದ ಏರ್ ಇಂಡಿಯಾ ಪೈಲಟ್‌ಗಳಾದ ಕ್ಯಾಪ್ಟನ್ ಜೋಯಾ ಅಗರ್ವಾಲ್, ಕ್ಯಾಪ್ಟನ್ ಶಿವಾನಿ ಮನ್ಹಾಸ್, ಕ್ಯಾಪ್ಟನ್ ಪಾಪಗಾರಿ ತನ್ಮಯಿ, ಕ್ಯಾಪ್ಟನ್ ಆಕಾಂಕ್ಷಾ ಅವರಿಗೆ ವಿಮಾನ ನಿಲ್ದಾಣದಲ್ಲಿ ಆತ್ಮೀಯ ಸ್ವಾಗತ ಸಿಕ್ಕಿತು. ಪ್ರಯಾಣಿಕರು ಹಾಗೂ ವಿಮಾನ ನಿಲ್ದಾಣ ಸಿಬ್ಬಂದಿ ಚಪ್ಪಾಳೆ ತಟ್ಟಿ ತಂಡವನ್ನು ವಿಮಾನ ನಿಲ್ದಾಣಕ್ಕೆ ಬರಮಾಡಿಕೊಂಡಿತು.

ಸ್ಯಾನ್ ಫ್ರಾನ್ಸಿಸ್ಕೋ-ಬೆಂಗ್ಳೂರುಮಾರ್ಗವು



ಸ್ಯಾನ್ ಫ್ರಾನ್ಸಿಸ್ಕೋ-ಬೆಂಗಳೂರು ಏರ್ ಇಂಡಿಯಾ ವಿಮಾನದ ಮಹಿಳಾ ಪೈಲಟ್‌ಗಳು

ಜಗತ್ತಿನ ಎರಡು ಪ್ರಮುಖ ತಂತ್ರಜ್ಞಾನ ನಗರಗಳ ನಡುವೆ ನೇರ ವಿಮಾನ ಸೇವೆ ಆರಂಭವಾಗಿರುವುದು ಮೈಲುಗಲ್ಲಾಗಿದೆ. ಸದರಿ ಮಾರ್ಗ ಅತ್ಯಂತ ಬೇಡಿಕೆ ಇದ್ದು, ಜನ ಹಾಗೂ ಉದ್ಯಮ ಸಂಪರ್ಕಗಳು ಹೆಚ್ಚಾಗುವ ನಿರೀಕ್ಷೆಯಿದೆ. ಮುಂದಿನ ದಿನಗಳಲ್ಲಿ ಬೆಂಗಳೂರಿನಿಂದ ಜಗತ್ತಿನ ಇತರೆ ನಗರಗಳಿಗೆ ನೇರ ವಿಮಾನ ಸೇವೆ ವಿಸ್ತರಿಸಲಾಗುತ್ತದೆ.

• **ಹರಿ ಮರಾರ್** ಕೆಐಎಎಲ್ ಸಿಇಒ

ಏರ್ ಇಂಡಿಯಾ ವಿಮಾನಯಾನ ಸಂಸ್ಥೆ ವಿಮಾನ ಕಾರ್ಯಾಚರಣೆ ಮಾಡುವ ಮಾರ್ಗಗಳ ಪೈಕಿ ಅತಿ ಉದ್ದದ ಮಾರ್ಗವಾಗಿದೆ. ಅಮೆರಿಕ ಸಂಯುಕ್ತ ಸಂಸ್ಥಾನದಿಂದ ದಕ್ಷಿಣ ಭಾರತಕ್ಕೆ ತಡೆ ರಹಿತ ನೇರ ವಿಮಾನ ಸಂಪರ್ಕ ಪಡೆದ ನಗರ ಎಂಬ ಹೆಗ್ಗಳಿಕೆಗೆ ಬೆಂಗಳೂರು ಪಾತ್ರವಾಗಿದೆ.

ಪೈಲಟ್ ಖುಷಿ: ಈ ವಿಮಾನದ ಮೂಲಕ ಬೆಂಗಳೂರು-ಸ್ಯಾನ್‌ಫ್ರಾನ್ಸಿಸ್ಕೋ ನಗರವನ್ನು ನೇರವಾಗಿ ಸಂಪರ್ಕಿಸುವ ಕೆಲಸವಾಗಿದೆ. ಇದೊಂದು ಐತಿಹಾಸಿಕ ಕ್ಷಣ ಎಂದು ಹೇಳಲು ಹೆಮ್ಮೆಯಾಗುತ್ತಿದೆ. ಇದು ಪ್ರಧಾನಿ ಮೋದಿ ಅವರ ಕನಸಾಗಿತ್ತು. 16 ತಾಸಿನಲ್ಲಿ ಈ ದೂರವನ್ನು ಕ್ರಮಿಸಿದ್ದೇವೆ. ತಡೆ ರಹಿತ ವಿಮಾನ ಎಂಬ ಕಾರಣಕ್ಕೆ ಎಲ್ಲ ಆಸನಗಳು ಭರ್ತಿಯಾಗಿದ್ದವು. ಈ ವಿಮಾನದಲ್ಲಿ ಬಂದ ಪ್ರಯಾಣಿಕರು ಸಂತಸಗೊಂಡಿದ್ದು, ತಮಗೆ ಆತ್ಮೀಯವಾಗಿ ಶುಭಾಶಯ ಕೋರಿದರು ಎಂದು ಮಹಿಳಾ ಪೈಲಟ್ ಜೋಯಾ ಅಗರ್ವಾಲ್ ಸಂತಸಪಟ್ಟರು.

ಸಂಗ್ರಹ : ಡಾ. ವಿ. ಪ್ರಶಾಂತ್

ಗಾಂಧಿ ಭವನದ ಕಾರ್ಯಕ್ರಮಗಳು







ದಿ. 27.12.2020ರಂದು ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್, ಗಾಂಧಿ ಭವನ, ಶೇಷಾದ್ರಿಪುರಂ ಕಾಲೇಜು ಸಂಯುಕ್ತವಾಗಿ ಏರ್ಪಡಿಸಿದ್ದ ಸಾಹಿತ್ಯ ಸಾಂಸ್ಕೃತಿಕ ಸಮಾವೇಶದಲ್ಲಿ ಲೇಖಕಿ ಪ್ರೊ.ಆರ್.ವಿ.ಶಶಿಕಲಾ ಅವರ "ಆಂತರ್ಯ" ಕವನ ಸಂಕಲನವನ್ನು ಶಿಕ್ಷಣ ತಜ್ಞ ಎಂ. ನೀಲಯ್ಯ ಅವರು ಲೋಕಾರ್ಪಣೆ ಮಾಡಿದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ನಾಡೋಜ ಡಾ.ವೂಡೇ ಪಿ. ಕೃಷ್ಣ, ಟಿ.ಎಸ್. ನಾಗಾಭರಣ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿ. ಸೋಮಶೇಖರ್, ಸಾಹಿತಿಗಳಾದ ಡಾ.ಪಾನ್ಯಂ ನಟರಾಜ್, ಡಾ.ಸಿಸಿರಾ, ಬಿ. ಶೃಂಗೇಶ್ವರ, ಗಾಂಧಿ ಭವನದ ಇಂದಿರಾ ಕೃಷ್ಣಪ್ಪ ಇದ್ದಾರೆ.




ದಿ. 13-12-2020 ರಂದು ಕಸ್ತೂರ್‌ಬಾ ಗಾಂಧಿ ನ್ಯಾಷನಲ್ ಮೆಮೊರಿಯಲ್ ಟ್ರಸ್ಟ್, ಅರಸೀಕರೆಯಲ್ಲಿ ಎಂ ಎಸ್. ಸಂದೀಪ್ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಶ್ರೀ ಕೆ.ಎಂ. ಶಿವಲಿಂಗೇಗೌಡ, ಶಾಸಕರು, ಅರಸೀಕೆರೆ, ನಾಡೋಜ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ, ಶ್ರೀ ಎಂ. ಕೆ. ಶಂಕರಲಿಂಗೇಗೌಡ, ಭಾ.ಆ.ಸೇ. (ನಿ), ನರೇಂದ್ರ, ಪ್ರೊ. ಜಿ.ಬಿ. ಶಿವರಾಜು ಭಾಗವಹಿಸಿದ್ದರು ಡಾ. ಹೆಚ್. ಎಸ್. ಅನುಪಮ ಅವರಿಗೆ ಸರ್ವೋದಯ ಸೇವಾ ಪ್ರಶಸ್ತಿ ಪ್ರಧಾನ ಮಾಡಲಾಯಿತು.




ದಿ. 19-12-2020ರಂದು ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು, ತುಮಕೂರಿನಲ್ಲಿ ಪ್ರೊ: ಬಿ.ಆರ್. ರಾಮಚಂದ್ರೇಗೌಡ ದತ್ತಿ ಉಪನ್ಯಾಸ ಮತ್ತು ಶ್ರೀ ಎಂ. ಬಸವಯ್ಯ ಅವರಿಗೆ ಸರ್ವೋದಯ ಸೇವಾ ಪ್ರಶಸ್ತಿ ಪ್ರಧಾನ ಸಮಾರಂಭ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಪ್ರೊ ವೈ.ಎಸ್ ಸಿದ್ದೇಗೌಡ, ಕುಲಪತಿಗಳು, ತುಮಕೂರು ವಿ.ವಿ., ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ, ಪ್ರೊ ನಿತ್ಯಾನಂದ ಶೆಟ್ಟಿ, ಡಾ. ಬಿ.ಆರ್. ಮಮತ, ಭಾ.ಆ.ಸೇ., ಪ್ರೊ ಟಿ.ಎಸ್. ಹೆಂಜರಪ್ಪ, ಪ್ರೊ ಜಿ.ಟಿ. ಜಗದೀಶ್ ಭಾಗವಹಿಸಿದ್ದರು.





ಗಾಂಧಿ ಶಾಂತಿ ಪ್ರತಿಷ್ಠಾನ, ಗಾಂಧಿ ಸ್ಮಾರಕ ನಿಧಿ ಸಹಯೋಗದಲ್ಲಿ ದಿ. 27.12.2020ರಂದು ಗಾಂಧಿವಾದಿ ಡಬ್ಲ್ಯೂ.ಹೆಚ್. ಹನುಮಂತಪ್ಪ ಸ್ಮಾರಕ ದತ್ತಿ ಉಪನ್ಯಾಸದಲ್ಲಿ ಡಾ. ಸುಮಂಗಲಿ ಮುಮ್ಮಿಗಟ್ಟಿ, ಇಂದಿರಾ ಕೃಷ್ಣಪ್ಪ, ಜೇರಿಗೇ ಲೋಕೇಶ್, ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ, ಡಾ. ಮಲ್ಲೇಪುರಂ ಜಿ. ವೆಂಕಟೇಶ್, ಹಿರಿಯ ಚಿಂತಕರು, ಡಬ್ಲ್ಯೂ.ಹೆಚ್. ದೇವಕುಮಾರ್ ಅವರಿದ್ದಾರೆ.





ನವದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವದ ರಾಷ್ಟ್ರೀಯ ಪೆರೇಡ್‌ನಲ್ಲಿ ಭಾಗವಹಿಸಲು ಕರ್ನಾಟಕದಿಂದ ಆಯ್ಕೆಯಾಗಿರುವ ರಾಷ್ಟ್ರೀಯ ಸೇವಾ ಯೋಜನೆಯ ಹದಿನಾಲ್ಕು ಕಾರ್ಯಕರ್ತರನ್ನು ಗಾಂಧಿ ಭವನದಲ್ಲಿ ದಿ. 29.12.2020ರಂದು ಹಾರ್ದಿಕವಾಗಿ ಅಬಿನಂಧಿಸಿ ಬೀಳ್ಕೊಡಲು ಸೇರಿದ ಸಭೆಯಲ್ಲಿ ಎಂಟು ವಿದ್ಯಾರ್ಥಿನಿಯರು, 6 ಜನ ವಿದ್ಯಾರ್ಥಿಗಳು, ಡಾ. ವೂಡೇ ಪಿ. ಕೃಷ್ಣ, ಡಾ. ಗಣನಾಥಶೆಟ್ಟಿ ಎಕ್ಕಾರು, ಪ್ರೊ. ಎಸ್.ಜಿ. ಸಿದ್ದರಾಮಯ್ಯ, ಎನ್.ಆರ್. ವಿಶುಕುಮಾರ್, ಹೆಚ್.ಬಿ. ದಿನೇಶ್, ಇಂದಿರಾ ಕೃಷ್ಣಪ್ಪ, ವಿ.ಎನ್. ತಿಪ್ಪನಗೌಡ, ಡಾ. ಉಪ್ಪಿನ, ಖಾದ್ರಿ ನರಸಿಂಹಯ್ಯ, ಡಾ. ಪೂರ್ಣಿಮಾ ಜೋಗಿ ಚಿತ್ರದಲ್ಲಿದ್ದಾರೆ.






ದಿ. 07-01-2021ರಂದು ಬಾಪು ಸಭಾಂಗಣ, ಗಾಂಧೀ ಭವನದಲ್ಲಿ ನಡೆದ ಡಾ. ಕೆ. ನಾಗಪ್ಪ ಆಳ್ವ ಮತ್ತು ಶ್ರೀಮತಿ ಕಲ್ಯಾಣಿ ನಾಗಪ್ಪ ಆಳ್ವ ದತ್ತಿ ಉಪನ್ಯಾಸದಲ್ಲಿ ಡಾ. ಗಣನಾಥಶೆಟ್ಟಿ ಎಕ್ಕಾರು, ರಾ.ಸೇ.ಯೋ., ನಾಡೋಜ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ, ಡಾ. ಎಸ್.ಸಿ. ಶರ್ಮಾ, ನಿರ್ದೇಶಕರು, ರಾಷ್ಟ್ರೀಯ ಮೌಲ್ಯೀಕರಣ ಮತ್ತು ಮಾನ್ಯತಾ ಪರಿಷತ್ತು, ಶ್ರೀ ಕೆ. ಮೋಹನ್‌ದೇವ್ ಆಳ್ವ ದತ್ತಿ ಸಂಸ್ಥಾಪಕರು, ಇಂದಿರಾ ಕೃಷ್ಣಪ್ಪ, ಪೂರ್ಣಿಮಾ ಜೋಗಿ ಚಿತ್ರದಲ್ಲಿದ್ದಾರೆ.





ದಿ. 10-01-2021ರಂದು ಸಮರ್ಥ್ ಫೌಂಡೇಷನ್, ಅನಿಕೇತನ ಪ್ರಕಾಶನ ವತಿಯಿಂದ ಗೆದ್ದಲಹಳ್ಳಿಯ ಕುವೆಂಪು ಸಭಾಂಗಣದಲ್ಲಿ ವಿಶ್ವ ಮಾನವ ದಿನ ಆಚರಣೆ ಮತ್ತು ನುಡಿವ ಹಂಸ ಕೃತಿ ಲೋಕಾರ್ಪಣೆನಾಡೋಜ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕ.ಗಾಂ.ಸ್ಮಾ.ನಿಧಿ ಇವರಿಗೆ ಗೌರವ ಸಮರ್ಪಣೆ ಕಾರ್ಯಕ್ರಮದಲ್ಲಿ ಎಸ್. ನಾಗಣ್ಣ, ಸಂಪಾದಕರು, ಪ್ರಜಾಪ್ರಗತಿ ಎಚ್. ನಿಂಗಪ್ಪ, ಅಧ್ಯಕ್ಷರು, ಸ. ಸಂಘ, ಡಾ. ಡಿ.ವಿ. ಪರಶಿವಮೂರ್ತಿ, ಶಾಸನತಜ್ಞರು, ಮತ್ತು ದುಗ್ಗೇನಹಳ್ಳಿ ಸಿದ್ದೇಶ್, ಕವಿಗಳು, ಡಾ. ಕೆ.ಪಿ. ನಟರಾಜ್, ಸಾಹಿತಿಗಳು, ರವಿಕುಮಾರ್ ನೀಹ, ಸಾಹಿತಿ ಚಿತ್ರದಲ್ಲಿದ್ದಾರೆ.

ಪತ್ರಿಕಾ ವರದಿಗಳು



ವಿಶ್ವವಾಣಿ 29th December 2020

ಕನ್ನಡ ಸಾಹಿತ್ಯ ಸಂಸ್ಕೃತಿ ಸಮಾವೇಶ ಕಾರ್ಯಕ್ರಮದಲ್ಲಿ ಟಿ.ಎಸ್.ನಾಗಾಭರಣ ಕಳಕಳಿ

ನಮ್ಮ ನಾಡಿನಲ್ಲೇ ನಾವು ಪರಕೀಯರು




ಬ್ಯಾಂಕ್‌ಗಳಲ್ಲಿ ಕನ್ನಡ ಬಳಕೆ ಅಭಿಯಾನಕ್ಕೆ ಚಾಲನೆ




ನಮ್ಮತನ ಉಳಿವಿನ ಬಗ್ಗೆ ಚಿಂತಿಸುವ ಕೇ...

Thu, 07 January 2021

ರಾಷ್ಟ್ರೀಯ ಶಿಕ್ಷಣ ನೀತಿ ಸ್ವಾಗತಾರ್ಹ





11ನೇ ವರ್ಷದ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಮಾವೇಶದಲ್ಲಿ ಬಿಂದು ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

2020ನೇ ಸಾಲು ಮೃತ್ಯುವಿನ ತೆರೆಯನ್ನು ವಿಶ್ವವ್ಯಾಪಿ ಹರಡಿದೆ: ಗಾಂಧಿ ಸ್ಮಾರಕ ನಿಧಿಯ ಗೌರವ ಕಾರ್ಯದರ್ಶಿ


ಕೊರೊನಾ ತಡೆಗೆ ಮಾರ್ಗಸೂಚಿ ಪಾಲನೆ ಅಗತ್ಯ



ಸಂಯುಕ್ತ ಕರ್ನಾಟಕ

ಕನ್ನಡಕ್ಕಿರಲಿ ರಾಜಭಾಷೆಯ ಸ್ಥಾನ

Mon, 28 December 2020



ಕನ್ನಡ ಸಾಹಿತ್ಯ-ಸಂಸ್ಕೃತಿ ಸಮಾವೇಶದಲ್ಲಿ ಕ.ಅ.ಪ್ರಾ. ಅಧ್ಯಕ್ಷ ಟಿ.ಎಸ್ ನಾಗಾಭರಣ ಅಂದು ಹನಿಗವನ ಕೃತಿ ಲೋಕಾರ್ಪಣೆಗೊಳಿಸಿದರು. ಡಾ.ವೂಡೇ ಪಿ. ಕೃಷ್ಣ, ಹ.ತ್ಯಂಗೇಶ್ವರ, ಎಂ.ತಿಮ್ಮಯ್ಯ, ಇಂದಿರಾ ಕೃಷ್ಣಪ್ಪ, ಸಿ.ಕೆ.ರಾ, ಅನಿಕೇತನ ಮಾಯೆಲ್ಲ ಮತ್ತಿತರರಿದ್ದರು.

ಎಂ.ಶ್ರೀನಿವಾಸ್ ಪುತ್ಥಳಿ ಅನಾವರಣ; ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಅಭಿಮತ

ಜ್ಞಾನಾರ್ಜನೆಯೇ ಜೀವನದ ಗುರಿಯಾಗಲಿ

ಪ್ರಜಾವಾಣಿ ವಾರ್ತೆ



ಮಂಡ್ಯ: 'ದೇಶದ ಎಲ್ಲಾ ಸಮಸ್ಯೆಗಳಿಗೂ ಶಿಕ್ಷಣವೇ ಪರಿಹಾರ ಎಂದು ಸ್ವಾಮಿ ವಿವೇಕಾನಂದರು ಹೇಳಿದ್ದಾರೆ. ಹೀಗಾಗಿ ಜ್ಞಾನ ಪಡೆಯುವುದೇ ಜೀವನದ ಗುರಿಯಾಗಬೇಕು' ಎಂದು ರಾಜ್ಯ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಹೇಳಿದರು.

ಎಂ.ಶ್ರೀನಿವಾಸ್ ಪ್ರತಿಮೆ ನಿರ್ಮಾಣ ಸಮಿತಿ ವತಿಯಿಂದ ತಾಲ್ಲೂಕಿನ ಹನಕೆರೆ ಗ್ರಾಮದ ವಿವೇಕಾ ವಿದ್ಯಾಸಂಸ್ಥೆ ಆವರಣದಲ್ಲಿ ...

ಎಂ.ಶ್ರೀನಿವಾಸ್ ಪುತ್ಥಳಿ ಅನಾವರಣ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ ಗಣ್ಯರನ್ನು ಸನ್ಮಾನಿಸಲಾಯಿತು

'ಗ್ರಾಮೀಣ ಭಾಗದಲ್ಲಿ ಮಕ್ಕಳ ಶಿಕ್ಷಣಕ್ಕೆ ...




...ಮರ್ಥ್ ಫೌಂಡೇಷನ್, ಅನಿಕೇತನ ಪ್ರಕಾಶನ ವತಿಯಿಂದ ಗೆದ್ದಲಹಳ್ಳಿ ಸರ್ಕಲ್ ಬಳಿ ಇರುವ ಮಹಾಕವಿ ಕುವೆಂ... ಸುಭಾಂಗಣದಲ್ಲಿ ವಿಶ್ವ ಮಾನವ ದಿನವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ನಾಡೋಜ ಡಾ.ವೂಡೇ ಪಿ... ಅವರಿಗೆ ಗೌರವಾರ್ಪಣೆ ಸಲ್ಲಿಸಲಾಯಿತು. ರಾಜ್ಯ ರೆಡ್‌ಕ್ರಾಸ್ ಸಭಾಪತಿ ಎಸ್.ನಾಗಣ್ಣ, ಎಚ್.ಸಿ... ...ಕುಮಾರ್, ಬಿ.ಮರುಳಯ್ಯ, ಎಂ.ಎಚ್.ನಾಗರಾಜ್ ಇತರರಿದ್ದರು.

ನಾವು ಅನುಭವಿಸುವ ಭೋಗಗಳೂ ಕ್ಷಣಿಕ!

ಶಾಸಕ ಎಂ.ಶ್ರೀನಿವಾಸ್ ಮೌನ ಯೋಗಿ, ಸಾಧಕ | ಕಂಚಿನ ಪ್ರತಿಮೆ ಅನಾವರಣಗೊಳಿಸಿದ ನಿರ್ಮಲಾನಂದನಾಥ ಸ್ವಾಮೀಜಿ









ಪುಸ್ತಕ ವಿಭಾಗ

(ಪ್ರಸಿದ್ಧ ಕೃತಿಗಳ ಸಂಕ್ಷಿಪ್ತ ಭಾಗ ನಿಯತವಾಗಿ ಬರಲಿವೆ)

ROOTS : Sold Into Slavery

Condensed form of the story by Alex Harley

Continued from previous edition...

More than a decade ago, Alex Haley began a long and arduous attempt to discover his ancestral roots. Like most black Americans, he had little to go on at first-only a few meagre clues, given to him in childhood. But as he pursued his search, the pieces of his ancient family puzzle began to fall into place. The story that finally emerged portrays not merely the agony of one man but, in a very real sense, the epic journey of the American Negro. In "By Slave Ship to America,' the first part of 'Roots, which appeared last month, Haley re-created the boyhood of his African ancestor, Kunta Kinte, Kunta's capture in 1767 by slavers and the ordeal of his passage across the Atlantic on a slave ship. 'Sold into Slavery' brings the young Kunta to the alien and cruel world of colonial America.

On her next visit she tried to get him a cat. He was even thinner now than he had been the week before. when Bell, serving the noon meal, was hurriedly called to help lift the bloody heap from a wagon. The sheriff had ordered the slave catchers to deliver it to Dr. William Waller, brother of Kunta's owner. The doctor, who was Bell's massa, had been livid when he learned of the maiming Bell covered Kunta's bare chest with an acrid, steaming poultice of boiled elderberry leaves mixed with sulphur. Then she packed wet clothes over the poultice and covered Kunta with quilts. When Kunta next awakened, he realized that his fever had broken. He wondered where the woman had learnt what she had done. It was like the medicines of his mother, Binta, the herbs of Allah's earth passed down from the ancestors. His puin became less of an agony now, except for the tall tow body daily treatment of his foot. One day Kunta was untied from the stakes, and he managed to prop himself on his elbows. He spent hours staring at the bandages over his foot stump. For most of his 18 rains (the Gambian way of saying 18 years, based upon one rainy season a year), he had run and climbed anywhere he wanted to go. It seemed monstrous that a Toubob would chop his He took out his rage and his humiliation on the black woman when she came in to feed him, snarling in Mandinka and banging down the tin cup after he had drunk. Afterwards he lay, even more furious, reflecting that the woman's eyes had seemed to warm upon his show of anger After three weeks the Tonbob took off the bandages. Kunta almost screamed as he saw the swollen half of his foot covered with a thick brownish scab. The toubob sprinkled something over it, banged it loosely and left. Three days later he returned with two stout sticks with forked tops: Kunta had seen injured people walk with these in Juffure. When the Toubob had gone, Kunta painfully pulled himself up right and tried the sticks. He managed a few awkward, forward swings of his body.

To be continued...

Chronology of events of personal & Public life of Mahatma Gandhi

(year wise - from 1869)

1890 : January 13-18. Took examination for Matriculation

January 23-30. Attended Vegetarian Congress at Yentor

February 19. Result of Matriculation examination published. He got plucked in Latin.

June. Passed the London Matriculation examination in his second attempt. Later in the year, he met two theosophists with whom he read Amold's The Song Celestial. Invited to read the original Gita with them. He had never read the Gita before and it impressed him immensely. Later, it became the book of his daily reading. Attended lectures by Dadabhai Naoroji, but spoke to him only once.

September 19. Selected to Executive Committee of London Vegetarian Society October. Attended meetings of Vegetarian Society but took no part in proceedings Started taking eggs on Dr Oldfield's advice but soon gave it up, remembering his vow to his mother.

November. Studied the Bible, the New Testament impressed him. Also read some books on atheism. Attended the funeral of Bradlaugh in the worker's cemetery. But his prejudice against atheism remained. Was introduced to Madam Blavatsky and Mrs Besant Read Mm. Blavatsky's Secret Doctrine.

December 15-20. Sat for final Bar examination.

1891 : January 12. Passed the examination with case, but as he had not yet completed his twelve terms he could not be called to the Bar and had to stay on in England till the middle of June.

January. Mother died. News withheld from him.

February 20. Gave his first speech in a Vegetarian Society meeting.

February-May. Wrote a series of ten articles on vegetarianism. The first six on "Indian Vegetarians" appeared in the Vegetarian between February 2 and March 14. The next three on "Some Indian Festivals" between March 28 and April 25. The last one. "The Foods of India", in The Vegetarian Messenger on May 6.

to be continued...

Courtesy : Mahatma Gandhi A Chronology
Published by : Ministry of Information & Broadcasting, Govt. of India
Collection by : Dr. Poornima Jogi, N.S.S.

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಪ್ರಕಟಣೆಗಳು

1. ಆರೋಗ್ಯ ರಹಸ್ಯ 10-00
2. ಕರ್ನಾಟಕದಲ್ಲಿ ಗಾಂಧೀ 5-00
3. ರಾಮನಾಮ 6-00
4. ಗಾಂಧೀ ಬಳಗದ ವಿದೇಶಿಯರು 40-00
5. ಆರೋಗ್ಯ 8-00
6. ಪ್ರಾರ್ಥನೆ 40-00
7. ಸತ್ಯಾಗ್ರಹ 8-00
8. ಮಹಿಳೆಯರಿಗಾಗಿ 8-00
9. ಪಂಚಾಯತ್ ರಾಜ್ 12-00
10. ಆದರ್ಶಗಳು 12-00
11. ನಮ್ಮ ಗಾಂಧೀ ತಾತ 22-00
12. ದೇವನಗರಿಯಲ್ಲಿ ಗಾಂಧೀ ಧ್ವನಿ 2-00
13. ನಮ್ಮ ಗಾಂಧೀ ತಾತ 15-00
14. ಹೋರಾಟ ಶ್ರೀ 40-00
15. ಮಹಾತ್ಮ ಗಾಂಧೀಜಿ ಅವರ ಜೀವನ ಮೈಲಿಗಲ್ಲುಗಳು 3-00
16. ಗಾಂಧೀಜಿ ಜೀವನ ಚರಿತ್ರೆ 25-00
17. ಕುವೆಂಪು ಕಂಡ ಗಾಂಧೀ 25-00
18. ಉಪ್ಪಿನ ಸತ್ಯಾಗ್ರಹ 5-00
19. ಹಿಂದ್ ಸ್ವರಾಜ್ 50-00
20. ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ 25-00
21. ನನ್ನ ಕನಸಿನ ಭಾರತ 30-00
22. ಹಿಂದೂ ಧರ್ಮ 25-00
23. ಮಹಿಳೆಯರು 63-00
24. ಸ್ವಾತಂತ್ರ್ಯ 42-00
25. ಅಸ್ಪೃಶ್ಯತೆ 45-00
26. ಒಳ್ಳೆಯ ಜೀವನ 60-00
27. ಗಾಂಧೀ ಮತ್ತು ಕರ್ನಾಟಕ 200-00
28. ಸತ್ಯ 38-00
29. ವಿದ್ಯಾರ್ಥಿಗಳಿಗಾಗಿ 30-00
30. ಸರ್ವೋದಯ 30-00
31. ಖಾದಿ ಗ್ರಾಮೋದ್ಯೋಗ 58-00
32. ನನ್ನ ಬಾಲ್ಯದ ನೆನಪುಗಳು 52-00
33. ಗ್ರಾಮರಾಜ್ಯ ಆಡಳಿತ 5-00
34. ನನ್ನ ಕನಸಿನ ಸ್ವರಾಜ್ಯ 42-00
35. ಹಾಸ್ಯ ಮತ್ತು ಗಾಂಧೀ 44-00
36. ನನ್ನ ಆದರ್ಶಗ್ರಾಮ 5-00
37. ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ಧತಿ 48-00
38. ಸತ್ಯಾಗ್ರಹಿ 40-00
39. ಗ್ರಾಮದಾನ ಗ್ರಾಮ ಸ್ವರಾಜ್ಯ 25-00
40. ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ
41. ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ 5-00
42. ಸತ್ಯಾಗ್ರಹ 5-00
43. ಹಿಂದ್ ಸ್ವರಾಜ್ 5-00
44. ಆರೋಗ್ಯ 5-00
45. ಮಹಾತ್ಮ ಗಾಂಧಿ ಪ್ರಸ್ತುತತೆ 10-00
46. ಬಹುರೂಪಿ ಗಾಂಧಿ 35-00
47. ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ 30-00
48. ಕೃತಯುಗಿ ವಿನೋಬಾ ಭಾವೆ 15-00
49. ಮೋಹನ ತರಂಗ 40-00
50. ನಮ್ಮ ಗಾಂಧಿ ತಾತ 22-00
51. ಗೀತಾ ಪ್ರವಚನ 80-00
52. ಜೆ.ಪಿ. ಜೀವನ ಹಾದಿ 45-00
53. ಗಣ್ಯರು ಕಂಡಂತೆ ಗಾಂಧಿ 20.0
54. ಗೀತಾಮಾತೆ 80.00
55. ಲೋಕ ಚಿಂತಕರು 145.00
56. ಕರ್ನಾಟಕದ ಕಸ್ತೂರ್‌ಬಾ ಯಶೋಧರಮ್ಮ ದಾಸಪ್ಪ 38.00
57. ಮಹದೇವ ದೇಸಾಯಿ 63.00
58. ಸಮಾಜವಾದ : ಗಾಂಧೀ ದೃಷ್ಟಿಕೋನ 15.00
59. ಮಹಾತ್ಮ ಗಾಂಧಿ ಮತ್ತು ಆಧ್ಯಾತ್ಮಿಕ ರಾಜಕಾರಣ 28.00
60. ಗಾಂಧೀ ಬಳಗದ ವಿದೇಶಿಯರು 89.00
61. ಮಹಾತ್ಮ ಗಾಂಧೀ ಮತ್ತು ಸ್ವಚ್ಛ ಭಾರತ 33.00
62. ಮಹಾತ್ಮ ಗಂಧೀಜಿ ಅವರ ಶೈಕ್ಷಣಿಕ ಸಿದ್ಧಾಂತ 80.00
63. ಹುಕ್ಕೇರಿಕರ ರಾಮರಾಯರು 110.00
64. ಮಹಿಳೆಯರು 63.00
65. ನನ್ನ ಬಾಲ್ಯದ ನೆನಪುಗಳು 52.00
66. ನಯೀ ತಾಲೀಂ 58
67. Nayi Talim 58.00
68. Temple & Mosque 10-00
69. Rastrapita Mahatma Gandhi 25-00
70. Swarajya of My Dreams 5-00
71. Gandhi My Grand Father 5-00
72. Grand Pa Gandhi 5-00
73. Relevance of Gandhi 20-00
74. Vinoba Sage of the Age 20.00
75. Kasturba 33.00
76. Mahatma Gandhi and his Foreign Associates 87

Tariff rates for Advertisement in Bapu Prapancha Kannada English Monthly Magzine

Sl.no.	Particulars	Rates (Rs)
1	Half Page (Black & White)	1,000.00
2	Full Page (Black & White)	2,000.00
3	Half Page (Extra)	2,000.00
4	Full Page (Colour)	4,000.00
5	2nd Cover Page	5,000.00
6	3rd Back Cover Page	5,000.00
7	Back Cover Page	10,000.00

ಚಂದಾದಾರರಾಗಲು, ಪುಸ್ತಕ ಖರೀದಿಸಲು, ಲೇಖನ ಹಾಗೂ ಜಾಹೀರಾತು ಪ್ರಕಟಿಸಲು

ಸಂಪರ್ಕಿಸಿ : ಯೋಗೀಶ್, ಸಹಾಯಕ ಕಾರ್ಯದರ್ಶಿ - 9738605799

ಚಂದ್ರಪ್ಪ, ಕಾರ್ಯನಿರ್ವಾಹಕ ಅಧಿಕಾರಿ - 7619134999, ನವೀನ್, ಸಹಾಯಕರು - 7892798344

RNI NO : KARBIL/2019/77950

If undelivered please return to: Hon. Secretary, Karnataka Gandhi Smaraka Nidhi, Gandhi Bhavana, Kumara Park Post, Bengaluru - 560001,Ph: 080 22261967, Email : gandhibhavanabengaluru@gmail.com

ಬಾಪು ಪ್ರಪಂಚ ಕನ್ನಡ-ಇಂಗ್ಲಿಷ್ ಮಾಸ ಪತ್ರಿಕೆ
RNI NO : KARBIL/2019/77950
Registered No. : KA/BGGPO/2589/2020-2022
published 15th of every month and posted on 20th of every month at Patrikachannel, Bengaluru - 560026



ಪ್ರೇಮ್ ಮಾಥುರ್ : (17.01.1910 – 22.12.1910)
ಭಾರತೀಯ ವಾಣಿಜ್ಯ ವಿಮಾನಯಾನದ ಮೊದಲ ಮಹಿಳಾ ಪೈಲಟ್ ಪ್ರೇಮ್ ಮಾಥುರ್ ಅವರಾಗಿದ್ದಾರೆ. 1947ರಲ್ಲಿ ಅಲಹಾಬಾದ್ ಫ್ಲೈಯಿಂಗ್ ಕ್ಲಬ್‌ನಿಂದ ಪರವಾನಗಿಯನ್ನು ಪಡೆದರು. 1949ರಲ್ಲಿ ರಾಷ್ಟ್ರೀಯ ವಾಯು ಸ್ಪರ್ಧೆಯಲ್ಲಿ ವಿಜೇತರಾಗಿದ್ದರೂ ಇವರನ್ನು ಎಂಟು ವಿಮಾನಯಾನ ಸಂಸ್ಥೆಗಳು ತಿರಸ್ಕರಿಸಿದ್ದವು. ಆಕೆಯ 38ನೇ ವಯಸ್ಸಿನಲ್ಲಿ ಅಂದರೆ 1947ರಲ್ಲಿ ಹೈದರಾಬಾದ್‌ನ ಡೆಕ್ಕನ್ ಏರ್‌ವೇಸ್‌ನಲ್ಲಿ ಉದ್ಯೋಗವನ್ನು ನೀಡಲಾಯಿತು, ಅಲ್ಲಿ ಅವರು ವಾಣಿಜ್ಯ ವಿಮಾನವನ್ನು ಹಾರಿಸಿದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾದರು. ಸಹ-ಪೈಲಟ್ ಆಗಿಯೂ ಅವರು ತನ್ನ ಮೊದಲ ವಿಮಾನವನ್ನು ಹಾರಿಸಿದ್ದರು. ಡೆಕ್ಕನ್ ಏರ್‌ವೇಸ್‌ನ ವೃತ್ತಿಜೀವನದ ಸಮಯದಲ್ಲಿ, ಇಂದಿರಾ ಗಾಂಧಿ, ಲಾಲ್ ಬಹದ್ದೂರ್ ಶಾಸ್ತ್ರಿ ಮತ್ತು ಲೇಡಿ ಮೌಂಟ್ ಬ್ಯಾಟನ್‌ರಂತಹ ಮಹಾನ್ ವ್ಯಕ್ತಿಗಳು ಸಂಚರಿಸಿದ ವಿಮಾನಗಳ ಚಾಲಕರಾಗಿದ್ದರು. ಮಾಥುರ್ ಅವರು ಕಾಕ್‌ಪಿಟ್‌ನ ಸಂಪೂರ್ಣ ಹತೋಟಿಯನ್ನು ಸಾಧಿಸಿದ್ದರು. ಆದಾಗ್ಯೂ ನಿಗದಿತ ಹಾರಾಟದ ಸಮಯದ ಅರ್ಹತೆ ಪಡೆದ ನಂತರವೂ, ಡೆಕ್ಕನ್ ಏರ್‌ವೇಸ್ ಆಕೆಯನ್ನು ಪೈಲಟ್ ಹುದ್ದೆಗೆ ಒಪ್ಪಿಕೊಳ್ಳಲಿಲ್ಲ. ಅನಂತರ ದೆಹಲಿಗೆ ತೆರಳಿ, ಅಲ್ಲಿ ಜಿಡಿ ಬಿರ್ಲಾ ಅವರ ಖಾಸಗಿ ಜೆಟ್ ವಿಮಾನದ ಪೈಲಟ್ ಆದರು. ನಂತರ 1953 ರಲ್ಲಿ ಇಂಡಿಯನ್ ಏರ್ಲೈನ್ಸ್ ಗೆ ಸೇರಿ, ವೃತ್ತಿಜೀವನದ ಉಳಿದ ಅವಧಿಯಲ್ಲಿ ಕೆಲಸ ನಿರ್ವಹಿಸಿದರು.



ಹರಿವಂಶ್ ರಾಯ್ ಬಚ್ಚನ್ : (27.11.1907 – 18.01.2003)
20ನೇ ಶತಮಾನ ಆರಂಭದ ಕವಿ, ಹಿಂದಿ ಸಾಹಿತ್ಯ, ಪ್ರೇಮ ಗೀತೆಗಳಿಗೆ ಇವರು ಪ್ರಸಿದ್ಧರಾಗಿದ್ದಾರೆ. ಹಿಂದಿ ಭಾಷಾ ಕವಿಯಾಗಿದ್ದಾರೆ. ಉತ್ತರ ಪ್ರದೇಶದ ಪ್ರತಾಪ್‌ಗರ್ ಜಿಲ್ಲೆಯ ರಾನಿಗಂಜ್‌ನಲ್ಲಿ ಜನಿಸಿದರು. ಅವರು ಅಲಹಾಬಾದ್ ವಿದ್ಯಾಲಯ ಮತ್ತು ಬನಾರಸ್ ಹಿಂದೂ ವಿದ್ಯಾಲಯದ ಶಿಕ್ಷಣಾವಧಿಯಲ್ಲಿ ಸ್ವಾತಂತ್ರ್ಯ ಚಳುವಳಿಯ ಪ್ರಭಾವಕ್ಕೊಳಗಾಗಿ ಮಹಾತ್ಮಾ ಗಾಂಧಿಯವರ ನೇತೃತ್ವದಲ್ಲಿ ಚಳುವಳಿಯಲ್ಲಿ ಭಾಗವಹಿಸಿದ್ದರು. ಶಿಕ್ಷಣದ ಅವಶ್ಯಕತೆಯನ್ನು ಅರಿತ ಅವರು 1941ರಿಂದ 1952ರವರೆಗೆ ಅಲಹಾಬಾದ್ ವಿದ್ಯಾಲಯದ ಇಂಗ್ಲಿಷ್ ವಿಭಾಗದಲ್ಲಿ ಅಧ್ಯಾಪಕರಾಗಿದ್ದರು. ಕೇಂಬ್ರಿಡ್ಜ್ ವಿದ್ಯಾಲಯದಲ್ಲಿ ಹರಿವಂಶ್ ರಾಯ್ ಅವರ ಪ್ರಬಂಧಕ್ಕೆ ಪಿಹೆಚ್‌ಡಿ ದೊರೆಯಿತು. ಇಂಗ್ಲಿಷ್ ಸಾಹಿತ್ಯಕ್ಕಾಗಿ ಕೆಂಬ್ರಿಡ್ಜ್‌ನಲ್ಲಿ ಪಿಹೆಚ್‌ಡಿ ಪಡೆದವರಲ್ಲಿ ಇವರು ಎರಡನೆಯವರು. 1941ರಲ್ಲಿ ತೇಜಿ ಸೂರಿ ಅವರನ್ನು ಮದುವೆಯಾದರು. ಅವರ ಇಬ್ಬರು ಮಕ್ಕಳೆಂದರೆ ಅಮಿತಾಬ್ ಮತ್ತು ಅಜಿತಾಬ್. 1955ರಲ್ಲಿ, ಹರಿವಂಶ್ ರಾಯ್ ದೆಹಲಿಗೆ ತೆರಳಿ ವಿಶೇಷಾಧಿಕಾರದ ಮೇರೆಗೆ ವಿದೇಶಾಂಗ ಸಚಿವಾಲಯದಲ್ಲಿ 10 ವರ್ಷಗಳ ಕಾಲ ಸೇವೆ ಸಲ್ಲಿಸಿದರು, ಅವರ ಪ್ರಮುಖ ಬರಹಗಳ ಭಾಷಾಂತರದ ಮೂಲಕ ಮೂಲ ಹಿಂದಿ ಭಾಷೆಗೆ ಮಾನ್ಯತೆ ತಂದರು. ಕವಿಯಾಗಿ ಮಧುಶಾಲಾದ (ಕವನದ) ಮೂಲಕ ಪ್ರಖ್ಯಾತರಾದರು. ಉಮರ್ ಖಯಾಮ್‌ರ ರುಬಿಯಾತ್‌ನ ನಂತರದಲ್ಲಿ ಅವರು ಷೇಕ್ಸ್‌ಪಿಯರ್‌ನ ಮ್ಯಾಕ್‌ಬೆತ್ ಮತ್ತು ಒಥೆಲೊ ಹಾಗೂ ಭಗವದ್ ಗೀತೆಯ ಹಿಂದಿ ಭಾಷಾಂತರದಿಂದ ಅವಿಸ್ಮರಣೀಯರಾಗಿದ್ದಾರೆ. ಇವರಿಗೆ ಸಾಹಿತ್ಯ ಅಕಾಡಮಿ ಪ್ರಶಸ್ತಿ, ಪದ್ಮ ಭೂಷಣ ಪ್ರಶಸ್ತಿ, ಸರಸ್ವತಿ ಸಮ್ಮಾನ್, ಸೋವಿಯತ್‌ಲ್ಯಾಂಡ್ ನೆಹರೂ ಪ್ರಶಸ್ತಿ ಮತ್ತು ಆಫ್ರೊ-ಏಷ್ಯನ್ ಸಮ್ಮೇಳನದಲ್ಲಿ ಲೋಟಸ್ ಪ್ರಶಸ್ತಿಗಳು ಸಂದಿವೆ.



ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ಬೋಪಯ್ಯ ದೇವಯ್ಯ : (24.12.1932–1965)
ಮರಣೋತ್ತರವಾಗಿ ಎರಡನೇ ಅತ್ಯುನ್ನತ ಶೌರ್ಯ ಪ್ರಶಸ್ತಿ ಮಹಾ ವೀರ ಚಕ್ರ ಪ್ರಶಸ್ತಿ ಪುರಸ್ಕೃತರಾದವರು. ಭಾರತೀಯ ವಾಯುಪಡೆಯ ಅಧಿಕಾರಿ 'ಫ್ಲೈಯಿಂಗ್ ಇನ್‌ಸ್ಟ್ರಕ್ಟರ್', 'ಸ್ಕ್ವಾಡ್ರನ್ ಲೀಡರ್' ವೀರಯೋಧ ಅಜ್ಜಮಾಡ ಬೋಪಯ್ಯ ದೇವಯ್ಯ. 1965ರ ಭಾರತ-ಪಾಕಿಸ್ತಾನ ಯುದ್ಧದ ಸಂದರ್ಭದಲ್ಲಿ, ಪಾಕಿಸ್ತಾನದ ವಾಯುನೆಲೆ ಸರ್ಗೋಧಾ ಮೇಲೆ ದಾಳಿ ನಡೆಸಲು ರೂಪಿಸಿದ್ದ 'ವಿಂಗ್ಸ್ ಆಫ್ ಫೈರ್'ನ ಸದಸ್ಯರಾಗಿದ್ದರು. Sqn LdR ದೇವಯ್ಯ ಶತ್ರುವಿನ ಬೆನ್ನುಹತ್ತಿ ವಿಮಾನವನ್ನು ಹೊಡೆದುರುಳಿಸಿದರು. ಈ ಪ್ರಕ್ರಿಯೆಯಲ್ಲಿ ಇವರು ಚಲಾಯಿಸುತ್ತಿದ್ದ ವಿಮಾನವು ಹಾನಿಗೊಂಡಿತ್ತು. ಮೊದಲ 12 ವಿಮಾನಗಳಲ್ಲಿ ಒಂದು ವಿಮಾನ ಪಥನವಾಯಿತು ನಂತರ ಕಾರ್ಯಾಚರಣೆಗಿಳಿದ ದೇವಯ್ಯ ಅವರನ್ನು ಪಾಕಿಸ್ತಾನದ ಪೈಲಟ್ ಲೆಫ್ಟಿನೆಂಟ್ ಅಮ್ಜದ್ ಹುಸೇನ್ ಅವರು ಎಫ್-104 ಸ್ಟಾರ್ ಫೈಟರ್ ವಿಮಾನದಿಂದ ತಡೆಯಲು ಯತ್ನಿಸಿದ್ದರು. ದೇವಯ್ಯ ಅವರಿದ್ದ ವಿಮಾನಕ್ಕೆ ಹಾನಿಯಾದರೂ ಧೃತಿಗೆಡದೆ ವಿರೋಧಿ ಪಾಳಯದ ವಿಮಾನದ ಮೇಲೆ ದಾಳಿ ಮಾಡಿದರು. ತಾವು ಚಲಾಯಿಸುತ್ತಿದ್ದ ವಿಮಾನ ಪಥನವಾಗುವುದನ್ನು ಅರಿತ ದೇವಯ್ಯ ಪ್ಯಾರಾಚೂಟ್ ಮೂಲಕ ಹೊರಬಿದ್ದರು. ಐಎಎಫ್ ಮಿಸ್ತ್ರಿಗಳು, ಇಂಧನ ಮತ್ತು ದಕ್ಷತೆಯ ಕೊರತೆಯಿಂದ ವಿಮಾನ ನಾಶವಾಗಿದೆಯೆಂದು ಅಥವಾ ದೇವಯ್ಯ ಪಾಕಿಸ್ತಾನದ ನೆಲದಲ್ಲಿ ಸತ್ತಿರಬಹುದೆಂದು ಊಹಿಸಲಾಗಿದೆ. ದೇವಯ್ಯನ ನಿಜವಾದ ಸಾವಿಗೆ ಕಾರಣವೇನಿತ್ತು ಎಂಬುದು ಇನ್ನೂ ನಿಗೂಢವಾಗಿಯೇ ಉಳಿದಿದೆ.

ಇವರಿಗೆ,

____

____

Printed and Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049